ಸಂಪುಟ 15
ಸಂಚಿಕೆ 47

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
28 ನವಂಬರ್ 1993

ಐದು ರಾಜ್ಯಗಳ ಚುನಾವಣೆಗಳ ಪರಿಣಾಮ ಏನು?

ಎಡ ಆಂದೋಲನಕ್ಕೆ ಹೊಸ ಶಕ್ತಿ, ಬಿಜೆಪಿಗೆ ಭ್ರಮ ನಿರಸನ -- ಸುರ್ಜಿತ್

ಈ ಸಂಚಿಕೆ ಮುದ್ರಣಗೊಳ್ಳುವ ವೇಳೆಗೆ ಉತ್ತರ ಭಾರತದ ಮೂರು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಮತದಾನ ಮುಗಿದಿದೆ. ಉಳಿದ ಎರಡು ಮಹತ್ವದ ರಾಜ್ಯಗಳಲ್ಲಿ - ಉತ್ತರ ಪ್ರದೇಶ, ಮಧ್ಯ ಪ್ರದೇಶಗಳಲ್ಲಿ - ಮತದಾನ ಬಾಕಿಯಿದ್ದು ಈ ಸಂಚಿಕೆ ಓದುಗರ ಕೈಸೇರುವ ವೇಳೆಗೆ ಉತ್ತರ ಪ್ರದೇಶದಲ್ಲೂ ಮತದಾನ ಮುಗಿದಿರುತ್ತದೆ. ಈ ಚುನಾವಣೆಗಳ ಫಲಿತಾಂಶ ಏನಾಗಬಹುದು, ದೇಶದ ರಾಜಕೀಯದ ಮೇಲೆ ಅದು ಎಂತಹಾ ಪರಿಣಾಮ ಬೀರಲಿದೆ- ಇದು ಎಲ್ಲರು ಕೇಳುತ್ತಿರುವ ಪ್ರಶ್ನೆ.

ಇವು ಬಿಜೆಪಿಗೆ ಪ್ರಮುಖ ರಾಜಕೀಯ ಹೊಡೆತ ನೀಡುವ ಚುನಾವಣೆಗಳು, ನಮ್ಮ ಪಕ್ಷದ ರಾಜಕೀಯ ಮಾರ್ಗವನ್ನು ಸಮರ್ಥಿಸಲಿರುವ ಚುನಾವಣೆಗಳು, ಈ ಪ್ರಕದೇಶಗಳಲ್ಲಿ ಬಲಿಷ್ಟ ಎಡ ಆಂದೋಲನ ಕಟ್ಟುವ ನಿರೀಕ್ಷೆ ಹುಟ್ಟಿಸುವ ಚುನಾವಣೆಗಳು ಎನ್ನುತ್ತಾರೆ ಉತ್ತರ ಭಾರತದ ಈ ರಾಜ್ಯಗಳಲ್ಲಿ ಚುನಾವಣಾ ಪ್ರಚಾರಕ್ಕಾಗಿ ವ್ಯಾಪಕವಾಗಿ ಸಂಚರಿಸುತ್ತಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್. ಇದು ಅವರು ರಾಜಸ್ಥಾನದಲ್ಲಿ ಮತದಾನ ನಡೆದ ದಿನ ಬರೆದ ಲೇಖನದ ಸಾರಾಂಶ.

ಮತದಾನ ಈಗಾಗಲೇ ಮುಗಿದಿರುವ ಮೂರು ರಾಜ್ಯಗಳಲ್ಲಿ ದಿಲ್ಲಿಗೆ ಸೀಮಿತ ಅಧಿಕಾರಗಳಿವೆಯಷ್ಟೇ. ಆದರೆ ಅದರ ರಾಜಕೀಯ ಮಹತ್ವ ಕಮ್ಮಿಯಲ್ಲ. ಇತರ ಎರಡು ರಾಜ್ಯಗಳು ಹಿಮಾಚಲ ಪ್ರದೇಶ ಮತ್ತು ರಾಜಾಸ್ತಾನ ಪೂರ್ಣ ಪ್ರಮಾಣದ ರಾಜ್ಯಗಳು. ಅಲ್ಲಿಯ ವಿದ್ಯಮಾನಗಳು ಆಶಾಕಿರಣ ಬೀರಿವೆ. ರಾಷ್ಟ್ರೀಯ ಐಕ್ಯತೆಗೆ ಬಂದಿರುವ ಬೆದರಿಕೆ ಹಾಗೂ ದೇಶದ ಆರ್ಥಿಕ ಸಾರ್ವಭೌಮತ್ವವನ್ನು ಒತ್ತೆಯಿಡುವ ಜನ-ವಿರೋಧಿ ಆರ್ಥಿಕ ನೀತಿಗಳ ಬಗ್ಗೆ ಅರಿವು ಜನಗಳ ನಡುವೆ ಹೆಚ್ಚುತ್ತಿದೆ ಎಂದು ಅಲ್ಲಿ ಪ್ರಚಾರ ಕಾಲದಲ್ಲಿ ಸ್ಪಷ್ಟವಾಗಿ ಕಂಡು ಬಂತು.

ಬಿಜೆಪಿ ಹಾಗೂ ಕಾಂಗ್ರೈನ ಚುನಾವಣಾ ಪ್ರಚಾರಗಳಲ್ಲಿ ಇದ್ದ ಭಿನ್ನತೆಗಳು ಕೇವಲ ಎರಡು - ಮಸೀದಿ ಧ್ವಂಸದ ಸಮರ್ಥನೆ ಹಾಗೂ 'ಹಿಂದೂರಾಷ್ಟ್ರ'ದ ಸ್ಥಾಪನೆ. ಉಳಿದಂತೆ ಇವೆರಡರ ನಡುವೆ ಏನೂ ವ್ಯತ್ಯಾಸವಿರಲಿಲ್ಲ. ವಾಸ್ತವವಾಗಿ ಕಾಂಗ್ರೆಸ್(ಐ)ನ ಜನ-ವಿರೋಧಿ, ಕಾರ್ಮಿಕ-ವಿರೋಧಿ, ಐಎಂಎಫ್-ವಿಶ್ವ ಬ್ಯಾಂಕ್ ಪ್ರೇರಿತ ಆರ್ಥಿಕ ನೀತಿಗಳನ್ನು ಬಿಜೆಪಿ ಬೆಂಬಲಿಸಿದೆ. ಕಾಂಗ್ರೆಸ್(ಐ) ಎಂದಿನಂತೆ ಆಶ್ವಾಸನೆಗಳ ಸುರಿಮಳೆಗೆರೆದಿದೆ. ಆದರೆ ಅವರ ಆಸೆ ನೆಟ್ಟಿರುವುದು ಈ ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳ ವಿಫಲತೆಗಳ ಮೇಲಷ್ಟೇ.

ಆದರೂ ಈ ಪ್ರದೇಶಗಳಲ್ಲಿ ಎಡ ಮತ್ತು ಜಾತ್ಯಾತೀತ ಪಕ್ಷಗಳು ದುರ್ಬಲವಾಗಿರುವುದರಿಂದ ಮುಖ್ಯ ಸ್ಪರ್ಧೆ ಕಾಂಗ್ರೆಸ್(ಐ) ಮತ್ತು ಬಿಜೆಪಿ ನಡುವೆಯೇ ಇದೆ. ಹಾಗಿದ್ದರೂ ಎಡ ಮತ್ತು ಜಾತ್ಯಾತೀತ ಶಕ್ತಿಗಳು ಚುನಾವಣಾ ಪ್ರಚಾರ ಕಾಲದಲ್ಲಿ ಉತ್ಸಾಹಪೂರ್ಣ ಸ್ಪಂದನ ಗಳಿಸಲು ಶಕ್ತವಾಗಿವೆ. ಎಡ ಪಕ್ಷಗಳ, ಮುಖ್ಯವಾಗಿ ಸಿಪಿಐ(ಎಂ)ನ ಪ್ರತಿಷ್ಠೆ ಜನಗಳ ನಡುವೆ ಹೆಚ್ಚಿದೆ. ಪಂಜಾಬಿನಲ್ಲಿ ಉಗ್ರಗಾಮಿಗಳ ವಿರುದ್ಧ, ಇತರೆಡೆ ಬಿಜೆಪಿ ಕೂಟದ ವಿರುದ್ಧ ಸತತವಾಗಿ ಹೋರಾಡಿದ, ಆರ್ಥಿಕ ನೀತಿಗಳ ವಿರುದ್ಧ ಜನಸಾಮಾನ್ಯರ ಹಿತರಕ್ಷಣೆಗಾಗಿ ಹೋರಾಡುತ್ತಾ ಬಂದಿರುವ ಶಕ್ತಿಗಳು ಇವು ಎಂದು ಜನ ಗುರುತಿಸುತ್ತಿದ್ದಾರೆ.

ಧ್ರುವೀಕರಣ ವರ್ಗ ನೆಲೆಯಲ್ಲಿ

ನಗರ ಪ್ರದೇಶಗಳಲ್ಲಿ ಮಾತ್ರವಲ್ಲ, ಗ್ರಾಮೀಣ ಪ್ರದೇಶಗಳಲ್ಲೂ ಒಂದು ತೀವ್ರ ಧ್ರುವೀಕರಣ ನಡೆಯುತ್ತಿದೆ ಎಂಬುದು ಚುನಾವಣಾ ಪ್ರಚಾರ ಕಾಲದಲ್ಲಿ ಕಂಡು ಬಂತು. ಈ ಧ್ರುವೀಕರಣ ಜಾತಿ-ಧರ್ಮದ ಆಧಾರದ ಮೇಲಲ್ಲ. ಭೂ ಮಾಲಕರು, ದೊಡ್ಡ ವ್ಯಾಪಾರಸ್ಥರು, ಇತರ ಶ್ರೀಮಂತ ವಿಭಾಗಗಳು ತಮ್ಮ ಹಿತಾಸಕ್ತಿ ರಕ್ಷಣೆಗೆ ಕಾಂಗ್ರೆಸ್(ಐ) ಅಥವಾ ಬಿಜೆಪಿಯತ್ತ ನೋಡುತ್ತಿದ್ದಾರೆ. ಕಾರ್ಮಿಕರು, ರೈತರು, ಕೃಷಿ ಕೂಲಿಗಾರರು, ಮಧ್ಯಮ ರೈತರು, ಮಧ್ಯಮ ವರ್ಗದ ನೌಕರರು, ಯುವಜನ ಹಾಗೂ ಅಲ್ಪಸಂಖ್ಯಾತರು ತಮ್ಮ ಭವಿಷ್ಯದ ರಕ್ಷಣೆಗೆ ಎಡ- ಜಾತ್ಯಾತೀತ ಶಕ್ತಿಗಳತ್ತ ನೋಡುತ್ತಿದ್ದಾರೆ. ಎಡ ಶಕ್ತಿಗಳು ದುರ್ಬಲವಾಗಿರುವ ಈ ಪ್ರದೇಶಗಳಲ್ಲೂ ಎಡಪಕ್ಷಗಳ ರ್ಯಾಲಿಗಳು ಕಾಂಗ್ರೆಸ್(ಐ), ಬಿಜೆಪಿಯ ದೊಡ್ಡ ಮುಖಂಡರ ರ್ಯಾಲಿಗಳಿಗಿಂತಲೂ ಹೆಚ್ಚು ಜನಗಳನ್ನು ಆಕರ್ಷಿಸಿವೆ. ಅಲ್ಪಸಂಖ್ಯಾತರಂತೂ ಕಾಂಗ್ರೆಸ್(ಐ)ನಿಂದ ಎಷ್ಟು ದೂರಸರಿದಿದ್ದಾರೆಂದರೆ ಈ ರಾಜ್ಯಗಳ ಹಲವಾರು ಚುನಾವಣಾ ಕ್ಷೇತ್ರಗಳಲ್ಲಿ ಕಂಡು ಬರುವ ಆ ಪಕ್ಷದ ಪೋಸ್ಟರುಗಳಲ್ಲಿ ಪ್ರಧಾನಮಂತ್ರಿಗಳ ಫೋಟೋಗಳು ನಾಪತ್ತೆ. ಕಾಂಗ್ರೆಸ್(ಐ) ಮಟ್ಟಿಗೆ ಇದೊಂದು ಅಸಾಮಾನ್ಯ ಸಂಗತಿ. ಎಡಪಕ್ಷಗಳು ಈ ಬಾರಿ ಈ ಪ್ರದೇಶಗಳ್ಲಿ ಹೊಸ ಮುನ್ನಡೆ ಸಾಧಿಸಲಿವೆ. ಭವಿಷ್ಯದಲ್ಲಿ ಒಂದು ಬಲಿಷ್ಟ ಎಡ ಆಂದೋಲನವನ್ನು ಬೆಳೆಸುವ ನಿರೀಕ್ಷೆಯುಂಟಾಗಿದೆ.

ಆದರೂ ಸ್ರದ್ಯಕ್ಕೆ ಮುಖ್ಯ ಸ್ಪರ್ಧೆ, ಈ ಮೊದಲೇ ಹೇಳಿದಂತೆ ಕಾಂಗ್ರೆಸ್(ಐ), ಬಿಜೆಪಿಗಳ ನಡುವೆಯೇ ಇದೆ. ಇದರರ್ಥ ಜನ ಅವರನ್ನು ಬೆಂಬಲಿಸಲು ಉತ್ಸುಕರಾಗಿದ್ದಾರೆ ಎಂದಲ್ಲ. ಭೈರೋಸಿಂಗ್ ಶೇಖಾವತ್‌ರಂತವರಿಗೂ ತನ್ನ ವಿಜಯದ ಬಗ್ಗೆ ಸಂಶಯಗಳಿದ್ದಂತಿದೆ. ಅವರು ಎರಡು ಕ್ಷೇತ್ರಗಳಿಂದ ಸ್ಪರ್ಧಿಸುತ್ತಿರುವುದೇ ಬಿಜೆಪಿಯ ಜನ ಬೆಂಬಲ ಕುಸಿಯುತ್ತಿದೆ ಎಂಬುದರ ಸಂಕೇತ. ರಾಮ ದೇವಸ್ಥಾನದ ಬೊಬ್ಬೆ ಅಗ್ಗದ ರಾಜಕೀಯ ಲಾಭಗಿಟ್ಟಿಸುವ ತಂತ್ರ ಎಂದು ಹೆಚ್ಚೆಚ್ಚು ಜನಗಳಿಗೆ ಈಗ ಅರಿವಾಗುತ್ತಿದೆ. ಬಿಜೆಪಿಯ ಪ್ರಚಾರ ಆಕ್ರಮಣಕಾರಿಯಾಗಿಲ್ಲ, ಬದಲಾಗಿ ತಮ್ಮ ವರ್ತನೆಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನಗಳೇ ಅದರಲ್ಲಿ ಜಾಸ್ತಿಯಾಗಿ ಕಾಣುತ್ತಿದೆ.

ಆದ್ದರಿಂದ ಎಲ್ಲೆಲ್ಲಿ ಎಡ-ಜಾತ್ಯಾತೀತ ಅಭ್ಯರ್ಥಿಗಳು ಬಿಜೆಪಿಯನ್ನು ಸೋಲಿಸಲು ಶಕ್ತರಾಗಿದ್ದರೋ ಅಲ್ಲೆಲ್ಲಾ ಜನ ಆ ಅಭ್ಯರ್ಥಿಗಳಿಗೇ ಮತ ನೀಡಲಿದ್ದಾರೆ. ಇತರೆಡೆಗಳಲ್ಲಿ ಕಾಂಗ್ರೆಸ್(ಐ) ಬಗ್ಗೆ ವಿಶ್ವಾಸವಿಲ್ಲದಿದ್ದರೂ ಆ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡುತ್ತಾರೆ. ಹಿಮಾಚಲ ಪ್ರದೇಶ ಮತ್ತು ರಾಜಸ್ತಾನಗಳಲ್ಲಿ ಕಾಂಗ್ರೆಸ್(ಐ) ತುಸು ಮೇಲುಗೈ ಪಡೆಯುವ ಸಾಧ್ಯತೆಯಿದೆ. ಬಿಜೆಪಿಯ ಟೊಳ್ಳು ಘೋಷಣೆಗಳು ಮಣ್ಣು ಮುಕ್ಕಲಿವೆ.

ಉತ್ತರಪ್ರದೇಶ-ಮಧ್ಯಪ್ರದೇಶ ಫಲಿತಾಂಶಗಳ ಮಹತ್ವ

ಈ ರಾಜ್ಯಗಳಲ್ಲಿ ಮುಖ್ಯ ಗಮನ

ಪುಟ 8ಕ್ಕೆ

ಹಜರತ್‌ಬಲ್ : ತಾಳ್ಮೆ ಸಂಯಮದ ನಿಲುವಿಗೆ ಗೆಲುವು

ಕಳೆದ 32 ದಿನಗಳಿಂದ ಶ್ರೀನಗರದತ್ತ ಆತಂಕದಿಂದ ನೋಡುತ್ತಿದ್ದ ದೇಶ ಕೊನೆಗೂ ನಿರಾಳವಾಗಿ ಉಸಿರಾಡುವಂತಾಗಿದೆ. ಕೆಲವರು ಒತ್ತಾಯಿಸಿದಂತೆ ಉಗ್ರಗಾಮಿಗಳನ್ನು ಚಾರಿತ್ರಿಕ ಹಜರತ್‌ಬಲ್ ದರ್ಗಾದಿಂದ ಹೊರಗೆಳೆಯಲು ಸೇನೆಯನ್ನು ನುಗ್ಗಿಸುವ ಆತುರದ ಕಾರ್ಯಾಚರಣೆಗಿಳಿಯದೆ ತಾಳ್ಮೆ, ಸಂಯಮದಿಂದ, ದೃಢತೆಯಿಂದ ಸನ್ನಿವೇಶವನ್ನು ಎದುರಿಸಬೇಕು, ದರ್ಗಾದೊಳಗೆ ಅವಿತಿದ್ದ ಪಾಕಿಸ್ತಾನ ಅಥವಾ ಇತರ ದೇಶಗಳ ಉಗ್ರಗಾಮಿಗಳನ್ನು ಗುರುತಿಸಿ ವಿಶ್ವಕ್ಕೆ ತಿಳಿಸಬೇಕು ಎಂದು ಎಡಪಕ್ಷಗಳು ಪ್ರತಿಪಾದಿಸಿದ್ದವು. ಸಂಯಮದ ನಿಲುವು ಕೊನೆಗೂ ಫಲಕಾರಿಯಾಗಿದೆ. ಈಗಲಾದರೂ ಕೇಂದ್ರ ಸರ್ಕಾರ 45 ವರ್ಷಗಳ ಹಿಂದೆ ಕೈಯಲ್ಲಿ ಶಸ್ತ್ರ ಹಿಡಿದು ಪಾಕಿಸ್ತಾನೀ ಸೇನೆಗಳನ್ನು ಹಿಮ್ಮೆಟ್ಟಿಸಿ ಭಾರತದೊಡನೆ ತಮ್ಮ ಭವಿಷ್ಯವನ್ನು ಬೆಸೆದುಕೊಳ್ಳಲು ನಿರ್ಧರಿಸಿದ ಕಾಶ್ಮೀರಿಗಳಲ್ಲಿ ಈಗ ಉಂಟಾಗಿರುವ ತಾವು "ಈ ದೇಶಕ್ಕೆ ಹೊರಗಿನವರೇನೋ" ಎಂಬ ಅನ್ಯಭಾವನೆಯನ್ನು ಹೋಗಲಾಡಿಸಲು ರಾಜಕೀಯ ಕ್ರಮಗಳನ್ನು ಕೈಗೊಳ್ಳಬೇಕು. ಈ ಬಗ್ಗೆಯೂ ಎಡಪಕ್ಷಗಳು ಆಗಾಗ ನೀಡಿದ ನಿರ್ದಿಷ್ಟ ಸಲಹೆ- ಸೂಚನೆಗಳನ್ನು ಹಜರತ್‌ಬಲ್ ಘಟನೆಗಳ ಹಿನ್ನೆಲೆಯಲ್ಲಾದರೂ ಗಂಭೀರವಾಗಿ ಪರಿಶೀಲಿಸಬೇಕು.

ಭೂಕಂಪ-ಬರ ಅತಿವೃಷ್ಟಿ ಪೀಡಿತರು

ವಾಸ್ತವ ಪರಿಸ್ಥಿತಿ ಏನು? - ಪರಿಹಾರ ಹೇಗೆ?

ಬಿಜಾಪುರ, ಗುಲ್ಬರ್ಗಾ ಜಿಲ್ಲೆಗಳಲ್ಲಿ ಭೂಕಂಪದಿಂದಲೂ ರಾಯಚೂರು ಮೊದಲಾದ ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದಲೂ ಬಹಳಷ್ಟು ಹಾನಿಯಾಗಿದೆ. ಅವರಿಗೆಲ್ಲಾ ಸರಿಯಾದ ಪರಿಹಾರ ಒದಗಿಸುವುದು ಸರಕಾರದ ಕರ್ತವ್ಯವಾಗಿದೆ. ಬಂಡವಾಳಶಾಹಿ ಸರಕಾರದಿಂದ ಯಾವ ಪರಿಹಾರ ಕಾರ್ಯವೂ ನಿಷ್ಪಕ್ಷಪಾತವಾಗಿ, ವಾಸ್ತವ ಪರಿಸ್ಥಿತಿಗನುಸಾರ ನಡೆಯುತ್ತಿಲ್ಲ ಎಂಬುದನ್ನು ಸ್ವಾತಂತ್ರ್ಯ ಸಿಕ್ಕಂದಿನಿಂದಲೂ ಅನುಭವ ಪಡೆದಿದ್ದೇವೆ. ಉದಾಹರಣೆಗೆ ಕೃಷ್ಣಾ ಮೇಲ್ದಂಡೆ ಯೋಜನೆ ಹಣವಿಲ್ಲೆಂಬ ನೆವದಿಂದ ನೆನೆಗುದಿಗೆ ಬಿದ್ದಿದೆ. ಆದರೆ ಪರಿಹಾರಕ್ಕಾಗಿ ಕೋಟ್ಯಾವಧಿ ರೂಪಾಯಿ ಖರ್ಚಾಗಿದೆ. ಯೋಜನೆ ಅಪೂರ್ಣವಾಗಿರುವುದರಿಂದ ಪರಿಹಾರ ಹಣ ತೆಗೆದುಕೊಂಡವರು ಕಳೆದ 20 ವರ್ಷದಿಂದಲೂ ಹೊಲದಲ್ಲಿ ಬೇಸಾಯ ಮಾಡುತ್ತಾರೆ. ಮನೆಯಲ್ಲಿ ವಾಸ ಮಾಡುತ್ತಾರೆ. ಬಾಗಲಕೋಟೆ ಹೊಸನಗರದ ಎರಡು ಕೋಟಿ ರೂಪಾಯಿಯ ಪ್ಲಾನ್ ತಯಾರಿಸಿ ಒಂಭತ್ತು ವರ್ಷವಾಯಿತು. ಹೊಸ ನಗರ ಕಾಣುತ್ತಿಲ್ಲ. ಊರವರಿಗೆ ಪರಿಹಾರ ಕೊಟ್ಟಾಯಿತು. ಅವರು ಹೊಸನಗರದತ್ತ ಕಣ್ಣು ಹಾಯಿಸಿಲ್ಲ. ಅಭಿವೃದ್ಧಿ ಕಾರ್ಯಗಳಿಗೆ ಖರ್ಚಾಗಬೇಕಾದ ಹಣ ಈ ರೀತಿ ನಿರುಪಯೋಗವಾಗುತ್ತಿದೆ.

ಸದ್ಯ ಭೂಕಂಪ ಮತ್ತು ನೆರೆ ಹಾವಳಿಗೊಳಗಾದವರಿಗೆ ಪರಿಹಾರ ಒದಗಿಸುವ ಕುರಿತು, ಅವರಿಗಾದ ಹಾನಿ, ಪರಿಹಾರದ ಮೌಲ್ಯಗಳ ಕುರಿತು ಮಂತ್ರಿ ಧರ್ಮಸಿಂಗ್, ಗೋಪೀನಾಥ ಸಾಂಡ್ರಾ ಹಾಗೂ ಸರಕಾರದ ಅಡಿಶನಲ್ ಚೀಫ್ ಸೆಕ್ರಟರಿ ಎಸ್.ಕೆ. ಘೋಶಾಲ್ ಇವರೊಳಗೆ ಒಮ್ಮತದ ಅಭಿಪ್ರಾಯ ಮೂಡಿಬರುತ್ತಿಲ್ಲ. ಆಡಳಿತ ಮತ್ತು ರಾಜಕಾರಣ ಪರಿಹಾರ ಕಾರ್ಯದಲ್ಲಿ ಯಾವ ನೀತಿ ಅನುಸರಿಸುತ್ತಿದೆ ಎಂಬ ವಿಷಯ ಗುಲ್ಬರ್ಗಾ-ರಾಯಚೂರು ಜಿಲ್ಲೆಗಳನ್ನು ಸಂಚರಿಸಿ, ಪರಿಹಾರದ ಕುರಿತು ಅಭಿಪ್ರಾಯ ವ್ಯಕ್ತ ಮಾಡಿದ ಎಸ್.ಕೆ. ಘೋಷಾಲ್ ಅವರಿಂದ ತಿಳಿಯಬಹುದಾಗಿದೆ.

ಸರಕಾರದ ಪರಿಹಾರ ನಿಜವಾದ ಸಂತ್ರಸ್ಥರಿಗೆ ಲಭಿಸುತ್ತಿಲ್ಲ, ಅದು ಸಮರ್ಪಕವಾಗಿಲ್ಲೆಂದು ಲಾತೂರು, ಕಿಲಾರಿಗಳನ್ನು ಸಂದರ್ಶಿಸಿದ ಸಿಪಿಐ(ಎಂ) ಮುಖಂಡರು ಆಪಾದಿಸಿದ್ದಾರೆ. ಪರಿಹಾರ ಪಡೆಯಲು ಅನರ್ಹರಾದವರೇ ರಾಜಕೀಯ ಒತ್ತಡದಿಂದ ಪರಿಹಾರ ಧನ ಪಡೆದ ಉದಾಹರಣೆಗಳು ನಮ್ಮ ಮುಂದಿವೆ.

ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಂಚರಿಸಿದ ಎಸ್.ಕೆ. ಘೋಷಾಲ್ ಅವರ ಕೆಲವು ಅನುಭವಗಳು ಗಮನಿಸಬೇಕಾದ್ದೇ ಆಗಿದೆ. ಕೆಲವು ಹಳ್ಳಿಗಳಲ್ಲಿ ಪರಿಹಾರ ಬೇಡಿಕೆ ಅತಿರೇಕವಾಗಿದೆಂದೂ, ಅಲ್ಪಹಾನಿಯನ್ನು ದೊಡ್ಡದಾಗಿ ಮಾಡಿ ಸರಕಾರದಿಂದ ಪರಿಹಾರ ಪಡೆಯುವ ಹವ್ಯಾಸ ಬೆಳೆಯುತ್ತಿದ್ದೆಂದೂ, ಆದರೆ ಪಡೆದ ಪರಿಹಾರವನ್ನು ಪರಿಹಾರಕ್ಕಾಗಿ ಉಪಯೋಗಿಸದಿರುವುದನ್ನು ಕಣ್ಣಾರೆ ಕಾಣಬಹುದೆಂದೂ ಉದಾಹರಿಸಿದ್ದಾರೆ. ಮಂತ್ರಿಗಳು ರಾಜಕೀಯ ಒತ್ತಡಕ್ಕೆ ಬಲಿಯಾಗುತ್ತಿದ್ದಾರೆಂದೂ ಪರಿಹಾರ ನಿಷ್ಪಕ್ಷಪಾತವಾಗಿ ಹಂಚಲ್ಪಡಬೇಕೆಂದೂ ಹೇಳಿದ್ದಾರೆ. ಈ ಕಾರಣದಿಂದಲೇ ಪರಿಹಾರ ವಿತರಣೆಯ ಜವಾಬ್ದಾರಿಯನ್ನು ಸರ್ವ ಪಕ್ಷಗಳ ಸಾಮೂಹಿಕ ಸಂಘಟನೆಗಳಿಗೆ ಒಪ್ಪಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಹಾಗಾದ್ದಲ್ಲಿ ಮಾತ್ರ ಭ್ರಷ್ಟಾಚಾರ, ವಶೀಲಿಬಾಜಿ ರಾಜಕೀಯಾಕರಣಗಳನ್ನು ತಡೆಯಲು ಸಾಧ್ಯ. ಸಾಧ್ಯವಾದಷ್ಟು ನಿಜವಾಗಿಯೂ ಪರಿಹಾರ ಅವಶ್ಯವಿದ್ದವರಿಗೆ ಮಾತ್ರ ಅದು ಕೈ ಸೇರಬಹುದೆಂದು ಅಭಿಪ್ರಾಯಪಟ್ಟಿದೆ.

ಯಾವುದೇ ಪೂರ್ವ ಯೋಜನೆಗಳಿಲ್ಲದೆ ಹೇಳಿಕೆಗಳನ್ನು ನೀಡುವುದು, ಮಂತ್ರಿ ಮಂಡಲದ ಒಪ್ಪಿಗೆಯಿಲ್ಲದೆ ಯೋಜನೆಗಳನ್ನು ಪತ್ರಿಕೆಗಳಿಗೆ ವಿವರಿಸುವುದು, ಪರಿಹಾರವನ್ನು ರಾಜಕೀಕರಣಗೊಳಿಸುವುದಕ್ಕೆ ಎಸ್.ಕೆ. ಘೋಷಾಲ್ ಅವರು ವಿರೋಧ ಮಾಡಿದ್ದಾರೆ. ಸರಕಾರದ ನಿರ್ಣಯಕ್ಕನುಸರಿಸಿ ಜಿಲ್ಲಾಧಿಕಾರಿಗಳು ಪರಿಹಾರ ನೀಡುತ್ತಿರುವಾಗ ಮುಂದಿನ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡ ಮಂತ್ರಿ ಗೋಪೀನಾಥ ಸಾಂಡ್ರಾ ಅವರು ಹೆಚ್ಚು ಪರಿಹಾರ ಧನ ಕೊಟ್ಟಿಲ್ಲೆಂದು ಜಿಲ್ಲಾಧಿಕಾರಿಗಳ ಮೇಲೆ ಹರಿಹಾಯುವುದು ಸರಿಯಲ್ಲೆಂದು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಇದರಂತೆಯೇ ಮಂತ್ರಿ ಧರ್ಮಸಿಂಗ್ ಅವರು ಸುರಕ್ಷಿತ ಸ್ಥಳಗಳಿಗೆ ಹಲವಾರು ಹಳ್ಳಿಗಳನ್ನು ಎತ್ತಂಗಡಿ ಮಾಡಬೇಕಾಗಿದೆ. ಇದರಯೋಜನೆ ತಯಾರಿಸಲು ಮೂರು ಜನರ ಕಮಿಟಿ ನೇಮಿಸಲಾಗಿದೆ. ಇದಕ್ಕಾಗಿ ವಿಶ್ವ ಬ್ಯಾಂಕಿನಿಂದ ಧನ ಸಹಾಯ ಕೋರಲಾಗುವುದು ಎಂದು ಪ್ರಕಟಿಸಿದ್ದಾರೆ. ಧರ್ಮಸಿಂಗ್ ಅವರು ಸೂಚಿಸಿದ ಮೂರು ಜನರ ಕಮಿಟಿಯಲ್ಲಿ ಎಸ್.ಕೆ.ಘೋಷಾಲ್ ಒಬ್ಬರು. ರೆವೆನ್ಯೂ ಕಮಿಶನರ್ ಮತ್ತು ವಿಭಾಗೀಯ ಕಮಿಶನರ್ ಇನ್ನಿಬ್ಬರು. ಆ ಕಮಿಟಿಯ ಪ್ರಮುಖ ಸದಸ್ಯರಲ್ಲೊಬ್ಬರಾದ ಘೋಷಾಲ್ ಅವರ ಅಭಿಪ್ರಾಯದಂತೆ ಭೂಕಂಪಕ್ಕೆ ಒಳಗಾಗಬಹುದಾದ ಹಳ್ಳಿಗಳೆಂದು ಪರಿಣಿತರು ಪ್ರಕಟ ಮಾಡುವ ತನಕ ಹಳ್ಳಿಗಳನ್ನು ಗುರ್ತಿಸಿ, ಅವುಗಳ ಸ್ಥಾನ ಬದಲಾಯಿಸುವ ವ್ಯವಸ್ಥೆ ಉಂಟಾಗುವುದಿಲ್ಲೆಂದೂ ಭೂಕಂಪದಿಂದ ಕುಸಿದು ಬೀಳದಂತ 45,000 ಮನೆಗಳನ್ನು ಕಟ್ಟಿಸಲಾಗುವುದು. ಅದಕ್ಕಾಗಿ ದನಿಡಾದಿಂದ ಸಹಾಯ ಕೋರಲಾಗುವುದೆಂದು ಮಂತ್ರಿ ಧರ್ಮ ಸಿಂಗ್ ಅವರ ಹೇಳಿಕೆ ವಾಸ್ತವ ಪರಿಸ್ಥಿತಿಗನುಸಾರವಾಗಿಲ್ಲ. ಮಹಾರಾಷ್ಟ್ರದ ಭೂಕಂಪಪ್ರದೇಶಗಳ ವೀಕ್ಷಣೆ ನಡೆಸಿದ ತಜ್ಞರು ಕೂಡಾ ಭೂಕಂಪಕ್ಕೊಳಗಾಬಹುದಾದ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಭೂಕಂಪದಿಂದ ರಕ್ಷಣೆ ಪಡೆಯುವ ಮನೆಗಳನ್ನು ಕಟ್ಟುವುದು ಕಷ್ಟಕರ ಎಂಬ ಅಭಿಪ್ರಾಯ ವ್ಯಕ್ತಮಾಡಿರುವಾಗ ಈ ವಿಷಯದ ಕುರಿತು ಇನ್ನೂ ಹೆಚ್ಚಿನ ಅಭ್ಯಾಸ ನಡೆಸದೆ ವಿದೇಶಿ ಧನ ಸಹಾಯದಿಂದ 45000 ಮನೆ ಕಟ್ಟಿಸಿಕೊಡಲಾಗುವುದೆಂಬ ಮಂತ್ರಿಯವರ ಹೇಳಿಕೆ ಅರ್ಥಹೀನವಲ್ಲದೆ ಮತ್ತೇನು?

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಗೆ ಸರಕಾರ ಪ್ರತಿ ವರ್ಷ ಕೋಟ್ಯಾವಧಿ ಹಣ ಮಂಜೂರು ಮಾಡುತ್ತಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಮೂವರು ಕ್ಯಾಬಿನೆಟ್ ಮಂತ್ರಿಗಳಿದ್ದರೂ ಕೂಡಾ ಕಳೆದ 2-3 ವರ್ಷಗಳಿಂದಲೂ ಅಭಿವೃದ್ಧಿ ಕೆಲಗಳು ಎದ್ದು ಕಾಣುವುದೇ ಇಲ್ಲ. ರಸ್ತೆ, ಪ್ರಾಥಮಿಕ ಶಾಲೆಗಳ ಪರಿಸ್ಥಿತಿ ನಾಚುವಂತಾಗಿದೆ. ನೀರಾವರಿಯೋಜನೆಗಳ ಕುರಿತು ಚಿಂತಿಸುವವರೇ ಇಲ್ಲ. ನಿಯೋಜಿತ ಯೋಜನೆಗಳಿಗೆ ಹಣ ಖರ್ಚಾಗದೆ ಪೋಲಾಗುತ್ತಿದೆ. ಇಂಥ ಗಂಭೀರ ಪರಿಸ್ಥಿತಿಯಲ್ಲಿ ಯಾವುದೇ ಆಳವಾದ ಅಭ್ಯಾಸ ಹೊಂದದೆ ಪ್ರಕಟಣೆಗಳನ್ನು ನೀಡುವುದು ಬರೇ ಮೋಸುಗಾರಿಕೆಯಲ್ಲದೆ ಮತ್ತೇನಲ್ಲ. ಮಂತ್ರಿಗಳ ಇಂಥ ಅಗ್ಗದ ಪ್ರಚಾರ ಗಿಟ್ಟಿಸುವ ಹೇಳಿಕೆಗಳನ್ನು ಸಮರ್ಪಕವಾಗಿ ಬಯಲಿಗೆಳೆಯುವುದು ಅಗತ್ಯ. ಇದರ ಜೊತೆಯಲ್ಲಿಯೇ ಇತ್ತೀಚೆಗೆ ಸಿಪಿಐ(ಎಂ) ನೇತೃತ್ವದಲ್ಲಿ ಗುಲ್ಬರ್ಗಾದಲ್ಲಿ ನೀರಾವರಿ ಯೋಜನೆಗಳ ಕುರಿತು ನಡೆದ ಸಮಾವೇಶದಲ್ಲಿ ಇಡೀ ಜಿಲ್ಲೆಯ ಸಮಗ್ರ ನೀರಾವರಿ ಯೋಜನೆಗಳ ಕುರಿತು ವಿವರವಾದ ಚಿತ್ರಣ ಪ್ರಕಟಿಸಿದಂತೆ ಭೂಕಂಪ-ನೆರೆಹಾವಳಿ, ಅತಿವೃಷ್ಟಿಯ ಕುರಿತೂ ಸರಿಯಾದ ಅಭ್ಯಾಸ, ಯೋಜನೆಗಳ ರೂಪರೇಷೆ, ಕಾರ್ಯಗತಗೊಳ್ಳುವ ಸಾಧ್ಯತೆಗಳ ಕುರಿತು ವಿವರವಾದ ಯೋಜನೆ ರೂಪಿಸುವುದು ಅಗತ್ಯವಿದೆ.

— ಎಸ್.ಕೆ. ಉಪಾಧ್ಯಾಯ

ಶಿವಸೇನೆಯ ಪ್ರತಿಷ್ಠೆಗೆ ಗಂಭೀರ ಸವಾಲು

ಅಕ್ಬರ್‌ಪುರ್ ಉತ್ತರ ಪ್ರದೇಶದ ಒಂದು ವಿಶಿಷ್ಟ ಸ್ಥಾನ ಪಡೆದ ಚುನಾವಣಾ ಕ್ಷೇತ್ರ. ಇದು ಅಯೋಧ್ಯೆ ಸಮೀಪ ಇರುವುದು ಇದಕ್ಕೆ ಒಂದು ಕಾರಣವಾದರೆ ಇನ್ನೊಂದು ಕಾರಣ ಇದು ಮಹಾರಾಷ್ಟ್ರದ ಹೊರಗೆ ಕಳೆದ ಬಾರಿ ಶಿವಸೇನೆಯ ಅಭ್ಯರ್ಥಿಯನ್ನು ಆರಿಸಿದ ಏಕೈಕ ಕ್ಷೇತ್ರ. ಆದ್ದರಿಂದ ಬಾಳಠಾಕ್ರೆಗೆ ಇದು ಪ್ರತಿಷ್ಠೆಯ ಕ್ಷೇತ್ರ. ಇದನ್ನು ಉಳಿಸಿಕೊಳ್ಳಲು ಎಲ್ಲಾ ಪ್ರಯತ್ನ - ಎಲ್ಲಾ ಎಂದರೆ ಶಿವಸೇನೆಯ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಪಡೆದಿರುವ ಗೂಂಡಾಗಿರಿ - ಗಳನ್ನು ನಡೆಸಲಾಗುತ್ತಿದೆ. ಇದಕ್ಕೆ ದೊಡ್ಡ ಸವಾಲು ಹಾಕಿರುವವರು ಸಿಪಿಐ(ಎಂ)ನ ಅಭ್ಯರ್ಥಿ ಅಕ್ಬರ್ ಹುಸೇನ್ ಬಾಬರ್. 1985 ಹಾಗೂ 1991ರಲ್ಲಿ ಇವರು ಈ ಕ್ಷೇತ್ರದಿಂದ ಚುನಾಯಿತರಾಗಿದ್ದರು. 1991ರಲ್ಲಿ ಬಿಜೆಪಿಯ ಕೋಮುವಾದೀ ಪ್ರಚಾರದಿಂದ ಕೆಲವರು ತಾತ್ಕಾಲಿಕವಾಗಿ ಪ್ರಭಾವಿತರಾದುದರ ಪರಿಣಾಮವಾಗಿ ಅವರು ಸೋತಿದ್ದರು.

ಕಾಂ. ಅಕ್ಬರ್ ಈ ಪ್ರದೇಶದಲ್ಲಿ ಜನಪ್ರಿಯರಾಗಿರುವ ಹಿರಿಯ ಕಮ್ಯುನಿಸ್ಟ್ ಮುಖಂಡ. ನಾಲ್ಕು ದಶಕಗಳ ಕಾಲ ಈ ಪ್ರದೇಶದ ಕೃಷಿ ಕೂಲಿಗಾರರ ಹೋರಾಟಗಳಿಗೆ ನೇತೃತ್ವ ನೀಡಿದವರು. ಮುಂದೈಯಲ್ಲಿ 'ಪ್ರಗತಿಪರ ಲೇಖಕರ ಸಂಘ'ದ ಸದಸ್ಯರಾಗಿದ್ದ ಇವರು ಸಾಹಿತ್ಯ-ಪತ್ರಕಾರಿಕೆಯ ಮೂಲಕ ಕಮ್ಯುನಿಸ್ಟ್ ಆಂದೋಲನಕ್ಕೆ ಬಂದವರು. 1946ರಲ್ಲಿ ತಮ್ಮ ಈ ಹಳ್ಳಿಗೆ ಮರಳಿ ಅಂದಿನಿಂದ ಕೃಷಿ ಕೂಲಿಗಾರರಿಗೆ ನ್ಯಾಯ ದೊರಕಿಸಿಕೊಡುವ ಹೋರಾಟದಲ್ಲಿ ನಿರತರಾಗಿದ್ದಾರೆ.

ಸಿಪಿಐ(ಎಂ) ಚುನಾವಣಾ ಪ್ರಚಾರ 10 ಸ್ಥಳಗಳಲ್ಲಿ ರಚಿಸಿಕೊಂಡ ಚುನಾವಣಾ ಸಮಿತಿಗಳ ಮೂಲಕ ಭರದಿಂದ ಸಾಗಿದೆ. ಬಿಜೆಪಿ-ಕಾಂಗ್ರೆ ರಾಜಕೀಯಗಳಿಗೆ ಕೆಂಬಾವುಟದ ಪರ್ಯಾಯವನ್ನು ಜನರ ಮುಂದಿಡಲಾಗುತ್ತಿದೆ. ಜ್ಯೋತಿ ಬಸು, ರಾಜ್ಯ ಸಭಾ ಸದಸ್ಯ ಮಹಮ್ಮದ್ ಸಲೀಮ್ ಹಾಗೂ ಸುರ್ಜಿತ್‌ರವರ ಸಭೆಗಳು ಚುನಾವಣಾ ಪ್ರಚಾರಕ್ಕೆ ಹೊಸ ಹುರುಪು ತುಂಬಿವೆ. ಮುಲಾಯಂ ಸಿಂಗ್ ಯಾದವ್‌ರ ಬೆಂಬಲ ಪಡೆದ ಬಿಎಸ್‌ಪಿ ಅಭ್ಯರ್ಥಿ ಕಣದಲ್ಲಿದ್ದರೂ ಉತ್ತರ ಪ್ರದೇಶದಲ್ಲಿ ಕೆಂಬಾವುಟದ ಪ್ರಭಾವವಿರುವ ಪ್ರದೇಶಗಳಲ್ಲಿ ಒಂದಾದ ಈ ಕ್ಷೇತ್ರ ಈ ಬಾರಿ ಮತ್ತೆ ಅಕ್ಬರ್ ಹುಸೇನ್ ಬಾಬರ್‌ರನ್ನು ತನ್ನ ಪ್ರತಿನಿಧಿಯಾಗಿ ಚುನಾಯಿಸುವ ಸಾಧ್ಯತೆಗಳಿವೆ..

ಉತ್ತರಪ್ರದೇಶದ ಮತದಾರರ ಮುಂದಿರುವ ಎರಡು ದಾರಿಗಳು

ಐವತ್ತರ ದಶಕದಿಂದಲೂ ಕೆಂಬಾವುಟದ ಪ್ರಭಾವವಿರುವ ಇನ್ನೊಂದು ವಿಧಾನಸಭಾ ಕ್ಷೇತ್ರ ಮೇಹ್ ನಗರ್. ಇದು ಮಾಸಲು ಕ್ಷೇತ್ರ. ಮೇಲ್ನೋಟಕ್ಕೆ ಕಬ್ಬು, ಭತ್ತದ ಬೆಳೆಗಳಿಂದ ನಳನಳಿಸುತ್ತಾ ಸಮೃದ್ಧಿಯ ಚಿತ್ರ ನೀಡುವ ಈ ಕ್ಷೇತ್ರದ ಮತದಾರರಲ್ಲಿ ಶೇ. 70ರಷ್ಟು ಇರುವ ಕೃಷಿ ಕೂಲಿಗಾರರ, ಬಡ ರೈತರ ಜೀವನ ಮಾತ್ರ ಬೇರೆಡೆಗಳಷ್ಟೇ ಸಂಕಷ್ಟಮಯ. ಇವರಿಗೆ ನ್ಯಾಯ ದೊರಕಿಸುವ ಹೋರಾಟಗಳನ್ನು ಕೈಗೆತ್ತಿಕೊಂಡಿರುವ ಕೃಷಿ ಕಾರ್ಮಿಕರ ಸಂಘದ ಪ್ರಭಾವವಿರುವ ಪ್ರದೇಶ. ಉತ್ತರಪ್ರದೇಶದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ವೀರರುಗಳಲ್ಲಿ ಒಬ್ಬರಾಗಿದ್ದ ನಂತರ ಕಮ್ಯುನಿಸ್ಟ್ ಆಂದೋಲನ ಸೇರಿದ ತೇಜ್ ಬಹಾದ್ದೂರ್ ಸಿಂಗ್‌ರ ಹುಟ್ಟೂರು ಇದು. ಎರಡು ವರ್ಷಗಳ ಹಿಂದೆ ಪ.ಬಂಗಾಳದ ಪಂಚಾಯತ್ ರಾಜ್ಯ ಮಂತ್ರಿ ಬಿನೋಯ್ ಕೃಷ್ಣ ಚೌಧುರಿ ಇವರ ಪ್ರತಿಮೆಯ ಅನಾವರಣ ಮಾಡಿದ್ದರು. ಈ ಬಾರಿ ಚುನಾವಣಾ ಪ್ರಚಾರಕ್ಕೆ ಈ ಊರಿಗೆ ಬಂದ ಜ್ಯೋತಿ ಬಸು ಮೊತ್ತ ಮೊದಲು ತೇಜ್ ಬಹಾದ್ದೂರ ಸಿಂಗ್‌ರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ತಮ್ಮ ಕಾರ್ಯಕ್ರಮ ಆರಂಭಿಸಿದರು.

ಇಲ್ಲಿ ಈ ಬಾರಿ ಸಿಪಿಐ(ಎಂ) ಗೆಲುವಿನ ನಿರೀಕ್ಷೆ ಹುಟ್ಟಿಸಿರುವ ಇನ್ನೊಂದು ಮುಖ್ಯ ಸಂಗತಿಯೆಂದರೆ ಸಿಪಿಐ(ಎಂ) ಅಭ್ಯರ್ಥಿಯ ಜನಪ್ರಿಯತೆ. ಕಾಂ. ರಾಮ್ ಜಗ್ ಉತ್ತರಪ್ರದೇಶ ರಾಜ್ಯ ಸಮಿತಿಯ ಸದಸ್ಯರು ಹಾಗೂ ಕೃಷಿ ಕೂಲಿಗಾರರ ನಡುವೆ ದುಡಿಯುತ್ತಿರುವ ಜನಪ್ರಿಯ ವಕೀಲರು.

ಜ್ಯೋತಿ ಬಸುರವರಲ್ಲದೆ ಪಿ.ಬಿ. ಸದಸ್ಯ ಪ್ರಕಾಶ್ ಕಾರಟ್‌ರವರೂ ಇಲ್ಲಿ ಚುನಾವಣಾ ಪ್ರಚಾರಕ್ಕೆ ಬಂದಿದ್ದರು. ಎಲ್ಲಾ ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳು ಬಿಜೆಪಿಯ ಸೋಲನ್ನು ಬಯಸುತ್ತಾರೆ. ಮೇಹ್‌ನಗರ್‌ನಲ್ಲಿ ಬಿಜೆಪಿಯನ್ನು ಸೋಲಿಸಬಲ್ಲ ಅಭ್ಯರ್ಥಿ ಕಾಂ. ರಾಮ್ ಜಗ್ ಮಾತ್ರ ಎಂದ ಅವರು ಉತ್ತರ ಪ್ರದೇಶ ಜನಗಳ ಮುಂದೆ ಎರಡು ದಾರಿಗಳಿವೆ - ಒಂದು ಪಶ್ಚಿಮ ಬಂಗಾಳ, ಬಿಹಾರದ ಜನತೆ ತೋರಿದ ದಾರಿ, ಬಿಜೆಪಿ-ಕಾಂಗ್ರೆಗಳೆರಡನ್ನು ದೂರ ಸರಿಸಿ ಕೋಮು ಸೌಹಾರ್ದತೆ ಕಾದುಕೊಂಡ ದಾರಿ, ಇನ್ನೊಂದು ಬಿಜೆಪಿಗೆ ಮತ್ತೆ ಅಧಿಕಾರ ನೀಡಿ ರಕ್ತಪಾತಕ್ಕೆ, ದೇಶದ ಐಕ್ಯತೆಯನ್ನು ಮುರಿಯಲು ಅವಕಾಶ ಮಾಡಿಕೊಡುವ ದಾರಿ ಎಂದು ಅವರು ಎಚ್ಚರಿಸಿದರು.

ಭಯಗ್ರಸ್ತ ಬಿಜೆಪಿ "ವೀರ"!

ಉತ್ತರ ಪ್ರದೇಶದ ಮುಂದಿನ ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧಿಗಳೆನಿಸಿರುವ ಸಮಾಜವಾದೀ ಪಾರ್ಟಿಯ ಮುಲಾಯಂ ಸಿಂಗ್ ಯಾದವ್ ಹಾಗೂ ಬಿಜೆಪಿಯ ಕಲ್ಯಾಣ್‌ಸಿಂಗ್ ಎರಡೆರಡು ಸ್ಥಾನಗಳಿಂದ ಸ್ಪರ್ಧಿಸುತ್ತಿದ್ದಾರೆ - ವಿಧಾನಸಭೆ ಪ್ರವೇಶಿಸುವುದನ್ನು ಗ್ಯಾರಂಟಿ ಮಾಡಿಕೊಳ್ಳಲು.

ರಾಜಕೀಯ ವೀಕ್ಷಕರ ಪ್ರಕಾರ ಮುಲಾಯಂರವರ ಭಯಕ್ಕೆ ಕಾರಣ ಬೇರೆ, ಕಲ್ಯಾಣ್ ಸಿಂಗ್‌ರ ಭಯಕ್ಕೆ ಕಾರಣ ಬೇರೆ. ಜೂನ್ 1991ರಲ್ಲಿ ಮುಲಾಯಂರವರು ಸ್ಪರ್ಧಿಸುತ್ತಿದ್ದ ಜಸ್ವಂತ್ ನಗರ್ ಕ್ಷೇತ್ರದಲ್ಲಿ ವ್ಯಾಪಕ ಹಿಂಸಾಚಾರ ನಡೆದು ಇಟಾವಾ ಜಿಲ್ಲೆಯ ಎಲ್ಲಾ ಚುನಾವಣೆಗಳನ್ನು ಚುನಾವಣಾ ಆಯೋಗ ರದ್ದು ಮಾಡಿತ್ತು. ಆದ್ದರಿಂದ ಬಿಜೆಪಿ ಅಧಿಕಾರದ ಗದ್ದುಗೆಗೇರುವಾಗ ಮುಲಾಯಂ "ನಿಸ್ಸಹಾಯ ಪ್ರೇಕ್ಷಕ"ರಂತೆ ನೋಡುತ್ತಿರಬೇಕಾಯಿತು. ಆರು ತಿಂಗಳ ನಂತರ ಉಪ ಚುನಾವಣೆಯಿಂದಲಷ್ಟೇ ಅವರು ವಿಧಾನಸಭೆ ಪ್ರವೇಶಿಸುವುದು ಸಾಧ್ಯವಾಯಿತು. ಈ ಬಾರಿ ಈ ಘಟನೆಯ ಪುನರಾವರ್ತನೆಯಾಗದಿರಲಿ ಎಂದು ಇನ್ನೊಂದು ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದಾರಂತೆ.

ಕಲ್ಯಾಣ್ ಸಿಂಗ್‌ರವರ ಭಯ ಮಾತ್ರ ಬೇರೆ ರೀತಿಯದ್ದು. ಬಾಬ್ರಿ ಮಸೀದಿ ಧ್ವಂಸವನ್ನು ಸಾಧಿಸಿದ ಈ "ವೀರ"ನ ಭಯವೆಂದರೆ 1991ರಲ್ಲಿ "ಶ್ರೀರಾಮ"ನ ಅಲೆಯಿಂದ ಶೇ. 54.78 ಮತ ಪಡೆದು ಗೆದ್ದಿದ್ದರಿಂದ ಈ ಬಾರಿ ಅಂತಹ ಅಲೆಯ ಸುಳಿವಿಲ್ಲದಿರುವಾಗ ಅದು ಸಾಧ್ಯವೇ ಎಂಬ ಸಂಶಯ. ಏಕೆಂದರೆ ಅಸ್ರೌಲಿ ಕ್ಷೇತ್ರದಲ್ಲಿ ಅದೇ ಕಾಂಗ್ರೆ ಅಭ್ಯರ್ಥಿ 1989ರಲ್ಲಿ ಶೇ. 44.88 ಮತ ಗಳಿಸಿದ್ದರು. ಕಲ್ಯಾಣ್ ಸಿಂಗ್ ಶೇ. 46.34 ಮತ ಪಡೆದು ಬಹಳ ಕಡಿಮೆ ಅಂತರದಿಂದ ಗೆದ್ದಿದ್ದರು. 1991ರಲ್ಲಿ "ಶ್ರೀ ರಾಮ"ನ ಅಲೆಯಿಂದಾಗಿ, ಕಾಂಗ್ರೆ ಅಭ್ಯರ್ಥಿ ಮುಸಲ್ಮಾನರಾಗಿದ್ದರಿಂದ ಮತೀಯ ಧ್ರುವೀಕರಣದ ಫಲವಾಗಿ ಕಲ್ಯಾಣ್ ಸಿಂಗ್‌ರ ಮತ ಶೇ. 54.78ಕ್ಕೇರಿತ್ತಷ್ಟೇ. ಈ ಹಿನ್ನೆಲೆಯಲ್ಲಿ ಅವರ ಭಯವನ್ನು ಅರ್ಥ ಮಾಡಿಕೊಳ್ಳಬೇಕು. ಆದರೆ ತೋರಿಕೆಗೆ ಅವರು ಕೊಡುವ ಕಾರಣ ಮುಲಾಯಂ ಸಿಂಗ್ ಯಾದವ್ ಕೊಡುವ ಕಾರಣವೇ - ಅಂದರೆ ವ್ಯಾಪಕ ಹಿಂಸಾಚಾರ ನಡೆದು ತನ್ನ ಕ್ಷೇತ್ರದಲ್ಲಿ ಚುನಾವಣೆ ನಡೆಯದಂತಾಗಬಹುದು ಎಂದು.

ಎಲ್ಲಿಂದ ಬಂತು 25 ಕೋಟಿ ರೂ.

ಕಾಂಗ್ರೆಸ್(ಐ) ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಕೇವಲ ಪ್ರಚಾರಕ್ಕೆಂದೇ ಖರ್ಚು ಮಾಡುವ ಹಣ 17 ಕೋಟಿ ರೂಪಾಯಿ. ಇದು 1989ರ ಇಡೀ ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರಚಾರಕ್ಕೆ ಖರ್ಚು ಮಾಡಿದ ಹಣದಷ್ಟು. ಆದರೆ ಇದು ಕೂಡಾ ಬಿಜೆಪಿ ಖರ್ಚು ಮಾಡುತ್ತಿರುವ ಹಣಕ್ಕಿಂತ ಮೂರನೇ ಒಂದಂಶ ಕಡಿಮೆಯಂತೆ. ಅಂದರೆ ಬಿಜೆಪಿ ಕೇವಲ ಪ್ರಚಾರಕ್ಕೆಂದೇ ಮಾಡುವ ಖರ್ಚು ಸುಮಾರು 25 ಕೋಟಿ ರೂ. ಕಾಂಗ್ರೆ 50 ವಿಡಿಯೋ ರಥಗಳನ್ನು ಬಳಸುತ್ತಿದ್ದರೆ ಬಿಜೆಪಿ 125 ವಿಡಿಯೋ ರಥಗಳನ್ನೇರಿ ಸಾಗಿದೆ. ಇದಲ್ಲದೆ ಬೃಹತ್ ಪ್ರಮಾಣದಲ್ಲಿ ಭಾಷಣಗಳ, ಹಾಡುಗಳ ಕ್ಯಾಸೆಟ್ಟುಗಳು ಇತ್ಯಾದಿ. ಹೇಗೆ ಬರುತ್ತಿದೆ ಈ ಹಣ? ಚೆಕ್‌ಗಳಿಂದಲೋ ನಗದಾಗಿಯೋ ಅಡ್ವಾಣಿಯವರೇ? ಬಿಳುಪಾಗಿಯೋ, ಕಪ್ಪಾಗಿಯೋ ವಾಜಪೇಯಿಯವರೇ?

ನಿರೀಕ್ಷೆಗಳು ಅದಲು ಬದಲು?

"ರಾಮ್‌ರಾಜ್ಯ ಕೀ ಓರ್, ಅಬ್ ಪಾಂಚ್ ಪ್ರದೇಶ್, ಕಲ್ ಸಾರಾ ದೇಶ್"(ರಾಮರಾಜ್ಯದತ್ತ - ಇಂದು ಐದು ಪ್ರದೇಶ, ನಾಳೆ ಇಡೀ ದೇಶ) ಇದು ಬಿಜೆಪಿಯ ಘೋಷಣೆ - ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಪ್ರಚಾರದ ಆರಂಭದಲ್ಲಿ. ಇದು ದಿಲ್ಲಿ ಅಧಿಕಾರಕ್ಕೆ ಸೆಮಿ-ಫೈನಲ್ ಆಗಿತ್ತು ಅವರಿಗೆ. ಉತ್ತರಪ್ರದೇಶದಲ್ಲಿ ಒಂದು ಸ್ಥಾನ ಕಮ್ಮಿಯಾದರೂ ಜನ ಡಿಸೆಂಬರ್ 6ರ ಘಟನೆಗೆ ನಕಾರ ಸೂಚಿಸಿದ್ದಾರೆಂದು ತಾನು ಭಾವಿಸುವುದಾಗಿ ಕಲ್ಯಾಣ್‌ಸಿಂಗ್ ಸಾರಿದರು. ತದ್ವಿರುದ್ಧವಾಗಿ ಕಾಂಗ್ರೆ ಪ್ರಚಾರ ಸಮಿತಿಯ ಮುಖ್ಯಸ್ಥ ಪ್ರಣಬ್ ಮುಖರ್ಜಿಯವರ ಪ್ರಕಾರ ಇದು ಕಾಂಗ್ರೆ ನೀತಿಗಳಿಗೆ ಬಂದಿರುವ ಪರೀಕ್ಷೆಯೇನೂ ಅಲ್ಲ. ಅಂದರೆ ಈ ಚುನಾವಣೆಯ ಫಲಿತಾಂಶಗಳು ಕಾಂಗ್ರೆ ಬಗ್ಗೆ ಒಟ್ಟಾರೆ ತೀರ್ಪು ಎನ್ನುವಂತಿಲ್ಲ - ಕಾಂಗ್ರೆ ಮುಖಂಡರ ಪ್ರಕಾರ.

ಆದರೆ ಚುನಾವಣೆ ಪ್ರಚಾರ ಮುಗಿಯುತ್ತಿದ್ದಂತೆ ಈ ವಿಚಾರಗಳು ಅದಲು ಬದಲಾಗಿವೆ! ಈ ಚುನಾವಣೆಗಳು ದೇಶದಲ್ಲಿ ರಾಜಕೀಯ ಭವಿಷ್ಯವನ್ನು ನಿರ್ಧರಿಸುತ್ತವೆ ಎಂದು ಈಗ ಪ್ರಧಾನಿಗಳಿಗೆ ಅನಿಸುತ್ತಿದ್ದರೆ ಪ್ರಧಾನ ಪಟ್ಟಕ್ಕೇರುವ ಕನಸು ಕಾಣುತ್ತಿದ್ದ ಅಡ್ವಾಣಿ ಈ ಚುನಾವಣೆಗಳ ಫಲಿತಾಂಶ ಡಿಸೆಂಬರ್ 6ರ ಘಟನೆಗಳ ಮೇಲಿನ ತೀರ್ಪು ಎಂದು ಪರಿಗಣಿಸುವಂತಿಲ್ಲ ಎಂದು ಪ್ಲೇಟು ಬದಲಿಸಿದ್ದಾರೆ.

ಇತಿಹಾಸದ ಪುಟಗಳಿಂದ

ವಿಶ್ವ ಕಮ್ಯುನಿಸ್ಟ್ ಆಂದೋಲನದಲ್ಲಿ ನಿರ್ಣಾಯಕ ಪಾತ್ರವ ನಿರ್ವಹಿಸಿದ

ಡೆಂಗ್-ಜಿಯೋಪಿಂಗ್

ವಿಶ್ವ ಕಮ್ಯೂನಿಸ್ಟ್ ಮುಖಂಡರೊಡನೆ



ಕಾಂ. ಇ.ಎಂ.ಎಸ್.


8

ಚೇನೀ ಪಕ್ಷದ 8ನೇ ಅಧಿವೇಶನದ ವರದಿಯನ್ನು ಡೆಂಗ್-ಜಿಯೋಪಿಂಗ್ ಮಂಡಿಸಿದರೆಂದು ಈ ಹಿಂದೆ ಹೇಳಿದ್ದೇನೆ. ಆಗ ಇವರ ಜೊತೆ ನೇರವಾಗಿ ಅಥವಾ ಸಂದರ್ಶಿಸಲು ಸಾಧ್ಯವಾಗಲಿಲ್ಲ.

ನಾಲ್ಕು ವರ್ಷಗಳ ನಂತರ (1960ರಲ್ಲಿ) ಮಾಸ್ಕೋದಲ್ಲಿ ನಡೆದ 81 ದೇಶಗಳ ವಿಶ್ವ ಕಮ್ಯುನಿಸ್ಟ್ ಪಕ್ಷಗಳ ಸಮ್ಮೇಳನದಲ್ಲಿ ಭಾಗವಹಿಸಿದಾಗ ಇವರನ್ನೂ ಕಂಡೆ. ವಿಶ್ವದ ಕಮ್ಯುನಿಸ್ಟ್ ಚಳುವಳಿ ಒಂದು ತಿರುವಿನಲ್ಲಿ ನಿಂತಿದ್ದ ಸಂದರ್ಭವಾಗಿತ್ತು ಅದು.

ಸೋವಿಯತ್ ಪಕ್ಷ ಮತ್ತು ಚೇನೀ ಪಕ್ಷ ಎರಡು ಭಿನ್ನ ಗುಂಪುಗಳಾಗಿ ಚಳುವಳಿ ವಿಭಾಗಿಸಲ್ಪಟ್ಟಿತು. ಆ ಎರಡು ವಿಭಾಗಿಸಲ್ಪಟ್ಟ ಗುಂಪುಗಳ ಘರ್ಷಣೆಯ ಕೇಂದ್ರವಾಗಿ ಮಾಸ್ಕೋ ಅಧಿವೇಶನ ನಡೆಯಿತು. ಆಗ ಚೇನೀ ಪಕ್ಷದ ವಕ್ತಾರರಾಗಿ ಮಾತನಾಡಿದವರು ಡೆಂಗ್ ಆಗಿದ್ದರು. ಅಂದು ಅವರ ಭಾಷಣವನ್ನು ಕೇಳಿದ್ದಷ್ಟೇ, ನೇರ ಭೇಟಿಯಾಗಲು ಸಾಧ್ಯವಾಗಲಿಲ್ಲ.

ಮಾಸ್ಕೋ ಸಮ್ಮೇಳನದಲ್ಲಿ ಭಾಗವಹಿಸಿದ ಭಾರತ ಪ್ರತಿನಿಧಿಗಳ ತಂಡದಲ್ಲಿ ಮೂರು ದೃಷ್ಟಿಕೋಣಗಳ ಅಥವಾ ಮಾರ್ಗಗಳವರೂ ಇದ್ದರು. ಸೋವಿಯತ್ ಪಕ್ಷವನ್ನು ಬಹುತೇಕ ಬೆಂಬಲಿಸುವ ಕೆಲಸವನ್ನೂ ಭಾರತದ ಪ್ರತಿನಿಧಿ ತಂಡದ ನಾಯಕರಾಗಿದ್ದ ಅಜಯ್‌ಘೋಷ್ ಮತ್ತು ಡಾಂಗೆಯವರು ಮಾಡಿದರು. ಪಿ. ರಾಮಮೂರ್ತಿ ಬಹುತೇಕ ಚೇನೀ ಪಕ್ಷದ



ನಿಲುವನ್ನು ಬೆಂಬಲಿಸಿದರು.

ಭೂಪೇಶ್ ಗುಪ್ತ ಮತ್ತು ನಾನು ಪೂರ್ಣವಾಗಿ ಸೋವಿಯತ್ ಪಕ್ಷದ ನಿಲುವನ್ನಾಗಲೀ ಅಥವಾ ಚೇನೀ ಪಕ್ಷದ ನಿಲುವನ್ನಾಗಲೀ ಹೊಂದಲಿಲ್ಲ. ಭೂಪೇಶ್ ಗುಪ್ತ ಮತ್ತು ನನ್ನ ನಡುವೆಯೂ ಕೆಲವು ಭಿನ್ನಾಭಿಪ್ರಾಯಗಳಿದ್ದವು.

ಇಂತಹ ಸಂದರ್ಭದಲ್ಲಿ ಭಾರತಕ್ಕೆ ಹಿಂದಿರುಗಿದ ನಾವು ಪಕ್ಷದ ರಾಷ್ಟ್ರೀಯ ಮಂಡಳಿಯ ಸಭೆಯಲ್ಲಿ ಎಲ್ಲರೂ ಸೇರಿ ತಯಾರಿಸಿದ ವರದಿಯನ್ನು ಮಂಡಿಸಲಿಲ್ಲ. ಪ್ರತಿನಿಧಿ ತಂಡದ ಪ್ರತಿಯೊಬ್ಬರೂ ವೈಯಕ್ತಿಕವಾಗಿ ವರದಿಗಳನ್ನು ಮಂಡಿಸಿದರು.

ಚೇನೀಯರಲ್ಲಿ ಸೋವಿಯತ್ ಪಕ್ಷದ ಧೋರಣೆಯನ್ನು ವಿರೋಧಿಸುವಲ್ಲಿ ಒಂದು ರೀತಿಯ ಒಮ್ಮತವನ್ನು ಕಂಡರೂ, ಚೇನೀ ಪಕ್ಷದ ನಾಯಕತ್ವದೊಳಗೆ ತೀವ್ರವಾದ ಭಿನ್ನಾಭಿಪ್ರಾಯಗಳಿದ್ದವೆಂದು ನಂತರ ನನಗೆ ತಿಳಿಯಿತು. ಎಡ ತೀವ್ರವಾದವನ್ನು ಪ್ರತಿಪಾದಿಸುತ್ತಿದ್ದ ಮಾವೋರವರ ನಾಯಕತ್ವದಲ್ಲಿದ್ದ ವಿಭಾಗಕ್ಕೆ ಎದುರಾಗಿದ್ದ ಲಿಯೋ-ಷಾವುಕಿ, ಚೌ-ಎನ್-ಲಾಯ್‌ರವರ ಜೊತೆಯಲ್ಲೇ ಡೆಂಗ್ ಇದ್ದರೆಂದು ಅಂದು ನನಗೆ ತಿಳಿದಿರಲಿಲ್ಲ. ಆದರೆ ನಂತರ ಡೆಂಗ್‌ರವರ ಬಗ್ಗೆ ಪತ್ರಿಕೆಗಳಲ್ಲಿ ಬರುವ ವರದಿ, ಭಾಷಣಗಳನ್ನು ನಾನು ನಿರೀಕ್ಷಿಸತೊಡಗಿದೆ.

1964ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷ ಒಡೆದು ಸಿಪಿಐ(ಎಂ) ಪಕ್ಷ ರೂಪಗೊಂಡದ್ದರ ಬಗ್ಗೆ ತಿಳಿದಿದೆ. ಪಕ್ಷದ ಕಾರ್ಯಕ್ರಮ ರೂಪಿಸುವಲ್ಲಿ ಹಲವಾರು ಭಿನ್ನಾಭಿಪ್ರಾಯಗಳು, ವಿರೋಧಗಳು ಪಕ್ಷದ ಅಧಿವೇಶನದಲ್ಲಿ ನಡೆಯಿತು. ಚೇನೀ ಪಕ್ಷದ ನಿಲುವನ್ನು ಸಂಪೂರ್ಣವಾಗಿ ಒಪ್ಪಬೇಕೆಂದು ಒಂದು ವಿಭಾಗ ವಾದಿಸಿತು. ಅದಕ್ಕೆ ನಾನಿದ್ದಂತಹ ವಿಭಾಗ ವಿರೋಧಿಸಿತು.

ಭಾರತ ಸ್ಥಿತಿಗತಿಗಳನ್ನು ಅಂದಾಜು ಮಾಡುವಲ್ಲಿ ಮತ್ತು ಸೋವಿಯತ್ ಪಕ್ಷದ ನಾಯಕತ್ವದ ಪ್ರತಿಗಾಮಿ ಧೋರಣೆಯನ್ನು ವಿರೋಧಿಸುವಲ್ಲಿ ನಾನು ಸೇರಿದಂತಹ ವಿಭಾಗವು ಯಾರಿಗೇನೂ ಕಡಿಮೆಯಿರಲಿಲ್ಲ. ಈ ರೀತಿ ಇರುವವರನ್ನು ಒಟ್ಟುಗೂಡಿಸಿ ಪಕ್ಷದೊಳಗೆ ಐಕ್ಯತೆಯನ್ನು ಉಂಟುಮಾಡುವ ಅವಶ್ಯಕತೆಯನ್ನು ಮುಂದಿಟ್ಟು ಪ್ರಪಂಚದ ಕಮ್ಯುನಿಸ್ಟ್ ಚಳುವಳಿಯಲ್ಲಿ ಬೆಳೆದು ಬಂದ ವ್ಯತ್ಯಾಸ- ಭಿನ್ನತೆಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದೆ. ಅಧಿವೇಶನ ಮುಕ್ತಾಯಗೊಂಡಿತು.

ಅದಲ್ಲದೆ ಸಿಪಿಐ(ಎಂ) ಅಂಗೀಕರಿಸಿದ ಕಾರ್ಯಕ್ರಮ ಬೂರ್ಜ್ವಾ ಪ್ರಜಾಪ್ರಭುತ್ವದ ಸಂಸದೀಯ ಚುನಾವಣೆಗಳಲ್ಲಿ ಭಾಗವಹಿಸಬೇಕೆಂದು ನೇರವಾಗಿ ನಿರ್ದೇಶಿಸಿತು. ನಂತರ 1967ರಲ್ಲಿ ನಡೆದ ಚುನಾವಣೆಗಳಲ್ಲಿ ಕೇರಳ ಮತ್ತು ಪಶ್ಚಿಮಬಂಗಾಳದಲ್ಲಿ ಸಿಪಿಐ(ಎಂ) ನೇತೃತ್ವದ ಸರ್ಕಾರಗಳು ಅಸ್ತಿತ್ವಕ್ಕೆ ಬಂದವು.

ಈ ಧೋರಣೆಯನ್ನು ಚೇನೀ ಪಕ್ಷ ಅಂಗೀಕರಿಸಲಿಲ್ಲ. ಸಿಪಿಎಸ್‌ಯು ಮತ್ತು ಸಿಪಿಐ ಬಹಿರಂಗವಾದ ಪ್ರತಿಗಾಮಿ ಧೋರಣೆಯದಾಗಿದ್ದರೆ ಸಿಪಿಐ(ಎಂ) "ಹೊಸ ರೀತಿಯ ಪ್ರತಿಗಾಮಿ" ಧೋರಣೆ ಹೊಂದಿದೆಯೆಂದು ಚೇನೀ ಪಕ್ಷ ಅಭಿಪ್ರಾಯ ಪಟ್ಟಿತು. ಕೇರಳ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳ ನಾಯಕರಾಗಿದ್ದ ನನ್ನನ್ನು ಮತ್ತು ಜ್ಯೋತಿಬಸುರವನ್ನು ನೇರವಾಗಿ ಹೆಸರಿಸಿ ಚೇನೀ ಪಕ್ಷದ ಪತ್ರಿಕೆಗಳಲ್ಲಿ ಆಕ್ಷೇಪಗಳನ್ನು ಬರೆದರು.

1964ರಿಂದ ಪ್ರಾರಂಭವಾದ ಸಿಪಿಐ(ಎಂ) ಮತ್ತು ಚೇನೀ ಪಕ್ಷದ ಸಂಬಂಧ 1967 ರಲ್ಲಿ ಈ ರೀತಿಯಾಗಿ ಕಡಿಯಿತು. ಭಾರತದಲ್ಲಿ ನಿಜವಾದ ಕಮ್ಯುನಿಸ್ಟರೆಂದರೆ ನಕ್ಸಲೈಟರೆಂದು ಚೇನಾ ಪಕ್ಷ ಹೇಳಿದರೆ ಇಲ್ಲಿನ ನಕ್ಸಲೈಟರು ಚೇನೀ ಪಕ್ಷದ ಛೇರ್‌ಮನ್‌ರೇ ತಮ್ಮ ಛೇರ್‌ಮನ್ ಎಂದು ಘೋಷಿಸಿದರು. 1967 ರಿಂದ 1983ರವರೆಗಿನ ಇಂತಹ ಅವಧಿಯಲ್ಲಿ ಸಿಪಿಐ(ಎಂ) ಮತ್ತು ಸಿಪಿಸಿ ನಡುವೆ ಸಂಬಂಧಗಳಿಲ್ಲದ ಅವಧಿ. 1964ರಲ್ಲಿ ಸಿಪಿಐ(ಎಂ) ರೂಪಗೊಂಡಾಗಿನಿಂದಲೂ ಸೋವಿಯತ್ ಪಕ್ಷ ನಮ್ಮನ್ನು ಅಂಗೀಕರಿಸಿರಲಿಲ್ಲ. ಹಾಗೆಯೇ 19 ವರ್ಷಗಳ ಕಾಲ ವಿಯೆಟ್ನಾಂ, ಕೊರಿಯಾ, ಕ್ಯೂಬಾ ರುಮೇನಿಯಾಗಳನ್ನು ಬಿಟ್ಟು ಬೇರ್ಯಾವ ಪಕ್ಷಗಳ ಅಂಗೀಕಾರವಿಲ್ಲದೆ ನಾವು ಸ್ವತಂತ್ರವಾಗಿ ಸ್ವಂತ ಕಾಲಿನ ಮೇಲೆ ನಿಂತೆವು.

ಇದರ ಮಧ್ಯೆ ಚೇನಾ ಪಕ್ಷದೊಳಗೆ ಕೆಲವು ನಿರ್ಣಾಯಕವಾದ ಬದಲಾವಣೆಗಳು ಬರಲು ಪ್ರಾರಂಭವಾದವು. ಮಾವೋ ನೇತೃತ್ವದಲ್ಲಿ ನಡೆದ "ಸಾಂಸ್ಕೃತಿಕ ಚಳುವಳಿಯನ್ನು" ಎಡ ತೀವ್ರವಾದದ ಚಳುವಳಿಯೆಂದು (ಚೇನೀ ಪಕ್ಷದ 8ನೇ ಅಧಿವೇಶನದ ನಂತರ) ನಾಯಕತ್ವವು ಅಂದಾಜು ಮಾಡಲು ಪ್ರಾರಂಭಿಸಿತು. ಈ ತಿದ್ದುವ ಪ್ರಕ್ರಿಯೆಯ ಮುಂಚೂಣಿಯಲ್ಲಿ ಲಿಯೂ ಷಾವ್ರೊಕಿ, ಚೌ-ಎನ್-ಲಾಯ್‌ರವರ ರೀತಿಯಲ್ಲೇ ಡೆಂಗ್ ಸಹ ಮಹತ್ವದ ಪಾತ್ರ ನಿರ್ವಹಿಸಿದರು.

ಡೆಂಗ್ ಅವರ ನಾಯಕತ್ವದಲ್ಲಿ ವಿದೇಶೀ ವ್ಯವಹಾರಗಳ ಮತ್ತು ಬೇರೆ ಪಕ್ಷಗಳ ಜೊತೆ ಸಂಬಂಧ ವಿಡುವ ಕೆಲಸದಲ್ಲಿ ಸಮಗ್ರವಾದ ಬದಲಾವಣೆಗಳು ಬರಲು ಪ್ರಾರಂಭವಾಯ್ತು. ಅನಧಿಕೃತವಾಗಿ, ಬಸವಪುನ್ನಯ್ಯನವರು ಒಂದಕ್ಕಿಂತಲೂ ಹೆಚ್ಚು ಬಾರಿ ಚೇನಾಗೆ ಭೇಟಿಕೊಟ್ಟು ಅಲ್ಲಿಯ ನಾಯಕರ ಜೊತೆ ಸಂಬಂಧ ಬೆಳೆಸಿದರು. ಈ ಅನಧಿಕೃತ ಭೇಟಿಗಳ ಫಲವಾಗಿಯೇ ಪಕ್ಷದ ಮಟ್ಟದಲ್ಲಿ ಅಧಿಕೃತ ಸಂಬಂಧಗಳನ್ನು ಏರ್ಪಡಿಸುವ ನಿರ್ದೇಶನಗಳು ಬಂದವು. ಪ್ರಧಾನ ಕಾರ್ಯದರ್ಶಿಯಾಗಿದ್ದ ನಾನು, ಸುರ್ಜಿತ್ ಮತ್ತು ಬಸವಪುನ್ನಯ್ಯ ಸೇರಿದಂತೆ 3 ಜನರ ನಿಯೋಗ ಚೇನಾಗೆ ಅಧಿಕೃತ ಭೇಟಿ ನೀಡಿದೆವು. ಪಕ್ಷದ ಸಂಬಂಧಗಳ ಪುನರ್ ಸ್ಥಾಪನೆಗೆ ಈ ಭೇಟಿಯ ಚರ್ಚೆಯಲ್ಲಿ ತೀರ್ಮಾನಿಸಲಾಯ್ತು. ಈ ಸಂದರ್ಭದಲ್ಲಿ ನಮ್ಮ ನಿಯೋಗ ಡೆಂಗ್ ಜೊತೆ ಭೇಟಿ ಮಾಡಿ ಅಭಿಪ್ರಾಯ ವಿನಿಮಯ ನಡೆಸಿದೆವು.

ಡೆಂಗ್ ಜೊತೆ ಭೇಟಿ ಮಾಡುವ ಮೊದಲು ಚೇನೀ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಹೂ ಬಂಕ್ ಜೊತೆಯಲ್ಲಿ ಅಭಿಪ್ರಾಯ ವಿನಿಮಯ ನಡೆಸಿದೆವು. ಹೂ ಜೊತೆಯಲ್ಲಿ ಚೇನೀ ಪಕ್ಷದ ವಿದೇಶಾಂಗ ವ್ಯವಹಾರಗಳ ಮುಖಂಡರಾದ ಕೊಮ್‌ಷಿ ಇದ್ದರು. ನಂತರ ನಾನು ಚೇನಾಕ್ಕೆ ಭೇಟಿ ನೀಡಿದಾಗೆಲ್ಲಾ ಕೊಯ್‌ಷಿ ಜೊತೆ ಚರ್ಚಿಸಿದ್ದೇನೆ. ಇಂದು

ಪುಟ 8ಕ



ಅಸಂಘಟಿತ ಕಾರ್ಮಿಕರ ಹೋರಾಟ ಏಕೆ? 3

-- ವಿ.ಜೆ.ಕೆ. ನಾಯರ್

ತಮ್ಮ ಜೀವನವನ್ನು ತಾವೇ ನಿರ್ಧರಿಸಿ ಸುತ್ತಲಿನ ಜಗತ್ತನ್ನು ತಮಗೆ ಅನುಕೂಲವಾಗುವಂತೆ ರೂಪಿಸಿಕೊಳ್ಳಲು ಅನುವು ಮಾಡಿಕೊಡುವ ಜನಸಾಮಾನ್ಯರ ಹೋರಾಟದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಹೋರಾಟ ಒಂದು ಪ್ರಮುಖ ಹೋರಾಟವಾಗಿ ಮೂಡಿಬರುತ್ತಿದೆ.

ನಮ್ಮ ರಾಜ್ಯದಲ್ಲಿ ಸಿಐಟಿಯು ಅಸಂಘಟಿತ ವಲಯದ ಕಾರ್ಮಿಕರ ವೇದಿಕೆಗಳನ್ನು ಸರಕಾರ ಒಪ್ಪಿಕೊಳ್ಳುವಂತೆ ಒತ್ತಾಯ ತರಲು ಒಂದು ದೊಡ್ಡ ಕಾರ್ಯಾಚರಣೆಗಳಿಯಲು ಉದ್ಯುಕ್ತವಾಗಿದೆ. ಈ ಹೋರಾಟ ಜಯಶಾಲಿಯಾಗುವವರೆಗೂ ಅದನ್ನು ನಡೆಸಲು ತಯಾರಿ ನಡೆಯುತ್ತಿದೆ.

ನವಂಬರ್ 22ರಿಂದ ವಿಧಾನ ಸೌಧದ ಎದುರು ಅನಿರ್ದಿಷ್ಟ ಕಾಲದ ಧರಣೆ ಸತ್ಯಾಗ್ರಹ ನಡೆಸಲು ಬೆಳಗಾವಿಯಲ್ಲಿ ನಡೆದ ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿ ಸಭೆ ನಿರ್ಧರಿಸಿದೆ. ರಾಜ್ಯದ ವಿವಿದೆಡೆಗಳಿಂದ ಬರುವ 2000 ಕಾರ್ಮಿಕರು ಇದರಲ್ಲಿ ಭಾಗವಹಿಸಲಿದ್ದಾರೆ.

ಈ ಹೋರಾಟಕ್ಕೆ ಸಂಬಂಧಪಟ್ಟಂತೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಸಿ.ಐ.ಟಿ.ಯು.ವಿನ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್‌ರವರ ಲೇಖನದ ಮುಂದುವರಿದ ಭಾಗ

ಬದುಕುಳಿಯುವ ಮಟ್ಟದ ಕೂಲಿ ಎಷ್ಟಿರಬೇಕೆಂದು ಹಲವಾರು ಸಂಸ್ಥೆಗಳು ಲೆಕ್ಕ ಹಾಕಿವೆ. ಅವುಗಳನ್ನೆಲ್ಲಾ ಬಳಸಿ ಅದನ್ನು ಸದ್ಯದ ಬೆಲೆ ಸೂಚ್ಯಂಕದ ಮಟ್ಟಕ್ಕೆ ಅಂದರೆ 1,309 ಪಾಯಿಂಟಿಗೆ (1960=100 ಆಧಾರದಲ್ಲಿ ಕರ್ನಾಟಕದಲ್ಲಿ 1992ರ ಸರಾಸರಿ ಬೆಲೆಸೂಚ್ಯಂಕ) ವಿವಿಧ ಮಟ್ಟಗಳ ಬದುಕುಳಿಯಲು ಬೇಕಾಗುವ ಕೂಲಿಯನ್ನು ಲೆಕ್ಕ ಹಾಕೋಣ.

ಬದುಕುಳಿಯುವ ಮಟ್ಟದ ಕೂಲಿ ಅತ್ಯಗತ್ಯ

ಕರ್ನಾಟಕ ಸರಕಾರದ ಅಗತ್ಯ ಆಧಾರಿತ ಕನಿಷ್ಠ ಕೂಲಿ

ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವ ಕೋಷ್ಟಕ 3ರಲ್ಲಿ ರಾಜ್ಯ ಕಾರ್ಮಿಕ ಇಲಾಖೆ 1986 ರಲ್ಲಿ ಲೆಕ್ಕ ಹಾಕಿದ ಅಗತ್ಯ ಆಧಾರಿತ ಕನಿಷ್ಠ ಕೂಲಿಯನ್ನೂ ಕೊಡಲಾಗಿದೆ. ಅದು 648 ಪಾಯಿಂಟುಗಳಲ್ಲಿ ತಿಂಗಳಿಗೆ 699 ರೂ. ಅಥವಾ ದಿನಕ್ಕೆ 25 ರೂ ಆಗುತ್ತದೆ. ಬೆಲೆಯೇರಿಕೆಯನ್ನು ಸರಿದೂಗಿಸಲು ಪ್ರತಿ ಪಾಯಿಂಟಿಗೆ ಸುಮಾರು 4 ಪೈಸೆ ಹೆಚ್ಚಳ ಕೊಡಬೇಕಾಗುತ್ತದೆ. ಅಂದರೆ ರಾಜ್ಯ ಕಾರ್ಮಿಕ ಇಲಾಖೆಯ ಅಗತ್ಯ ಆಧಾರಿತ ಕನಿಷ್ಠ ಕೂಲಿ ದಿನಕ್ಕೆ 51.44 ರೂ. ಆಗುತ್ತದೆ. ಇಲ್ಲಿ ಸಾಮಾನ್ಯ ಕೆಲಸಕ್ಕೆ ಅಗತ್ಯವಿರುವ 2,800 ಕ್ಯಾಲರಿಗಳ ಬದಲು 2,700 ಕ್ಯಾಲರಿಗಳನ್ನಷ್ಟೇ ತೆಗೆದುಕೊಂಡಿದೆ ಎಂಬುದನ್ನು ನೆನಪಿನಲ್ಲಿಡಬೇಕು.

ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಶನ್‌ನ ಲೆಕ್ಕಾಚಾರ

1981ರಲ್ಲಿ ಮಾಲಕರ ಸಂಘ ಕಾರ್ಮಿಕರ ಇಲಾಖೆಗೆ ಒಂದು ಅಗತ್ಯ ಆಧಾರಿತ ಕನಿಷ್ಠ ಕೂಲಿಯ ಲೆಕ್ಕಾಚಾರ ಸಲ್ಲಿಸಿತು. ಇದಕ್ಕಿಂತ ಹೆಚ್ಚು ಕೂಲಿ ಇರಬಾರದು ಎಂಬುದನ್ನು ಸಮರ್ಥಿಸಲು ಆ ಲೆಕ್ಕಾಚಾರ ಸಲ್ಲಿಸಲಾಯಿತು. ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ ಅಥವಾ ಕೆ.ಪಿ.ಎ. ಪ್ರಕಾರ ಇದು ಗ್ರಾಮೀಣ (ಅಂದರೆ ಚಿಕ್ಕಮಗಳೂರಿನ) ಬೆಲೆಗಳಲ್ಲಿ 450 ಪಾಯಿಂಟು ಮಟ್ಟದಲ್ಲಿ ತಿಂಗಳಿಗೆ ರೂ. 390.38 ಅಥವಾ ದಿನಕ್ಕೆ 15 ರೂ. ಆಗುತ್ತದೆ. ಈ ಮಟ್ಟದಲ್ಲಿ ಬೆಲೆಯೇರಿಕೆಯನ್ನು ಸರಿದೂಗಿಸಲು ಪಾಯಿಂಟಿಗೆ 3.33ಪೈಸೆ ನೀಡಬೇಕು. ಇದರಿಂದ 1309 ಪಾಯಿಂಟುಗಳಲ್ಲಿ ಒಟ್ಟು ದಿನಗೂಲಿ 54.60 ಪೈಸೆ ಆಗುತ್ತದೆ. ಇದು ಸರಕಾರದ ನೋಟಿಫಿಕೇಷನ್‌ನಲ್ಲಿ ನೀಡಬಹುದಾದ ಗರಿಷ್ಠ ಮೊತ್ತವಾಗಬೇಕು ಎಂದು ಮಾಲಕರು ಒತ್ತಾಯಿಸಿದ್ದರು.

ಹೀಗೆ ಪ್ರಸ್ತುತ ಇರಬೇಕಾದ ಅಗತ್ಯ ಆಧಾರಿತ ಕನಿಷ್ಠ ಕೂಲಿ ಕೆ.ಪಿ.ಎ. ಲೆಕ್ಕಾಚಾರದ ಪ್ರಕಾರ ರೂ. 54.60 ರೂ., 1986 ರ ಕಾರ್ಮಿಕ ಇಲಾಖೆಯ ಲೆಕ್ಕದ ಪ್ರಕಾರ ರೂ. 51.44 ಬಡತನ ಮಟ್ಟದಲ್ಲಿ ಸುಧಾರಿತ ಕನಿಷ್ಠಕೂಲಿ ರೂ. 44 ಈಗ ನೋಟಿಫೈ ಆಗಿರುವ ಕನಿಷ್ಠ ಕೂಲಿ ರೂ. 25.66 ಅಂದರೆ 12 ವರ್ಷಗಳ ಹಿಂದಿನ ಮಾಲಕರು ಲೆಕ್ಕಹಾಕಿದ ಕೂಲಿಯ ಅರ್ಧದಷ್ಟು ಮಾತ್ರ.

ಸಿಐಟಿಯು ಲೆಕ್ಕಾಚಾರ

ನಾವೇ ಅಗತ್ಯ ಆಧಾರಿತ ಕನಿಷ್ಠ ಕೂಲಿಯನ್ನು ಲೆಕ್ಕ ಹಾಕೋಣ.

ಪ್ರತಿದಿನ ಒಬ್ಬರಿಗೆ 2,800 ಕ್ಯಾಲರಿ ಆಹಾರ ಬೇಕು ಎಂಬ ಅಂಶದ ಆಧಾರದ ಈ ಲೆಕ್ಕ ಮಾಡೋಣ. ಇದಕ್ಕೆ ಹೈದರಾಬಾದಿನ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐ.ಸಿ.ಎಮ್.ಆರ್.) ಪ್ರಕಟಿಸಿರುವ "ಭಾರತೀಯ ಆಹಾರಗಳ ಪೋಷಕಾಂಶ ಮೌಲ್ಯ" ಎಂಬ ಪ್ರಕಟಣೆಯಿಂದ ತೆಗೆದುಕೊಂಡಿರುವ ಕೋಷ್ಟಕ - 2ನ್ನು ಬಳಸಿಕೊಳ್ಳೋಣ(ಕಳೆದ ಸಂಚಿಕೆ ನೋಡಿ). ಈಗ ಪಡೆಯುವ ಕೂಲಿಯಿಂದ ನಮಗೆ ಬೇಕಾದ ವಸ್ತುಗಳನ್ನು ಈಗಿನ ಬೆಲೆಗಳಲ್ಲಿ ಪಡೆಯಲು ಸಾಧ್ಯವಾಗಬೇಕು. ಆದ್ದರಿಂದ ಪ್ರಸ್ತುತ ಬೆಲೆಗಳಲ್ಲಿ ಇವನ್ನು ಲೆಕ್ಕ ಹಾಕೋಣ. 'ಟೈಂಸ್ ಆಫ್ ಇಂಡಿಯಾ' ದೈನಿಕದ ನವೆಂಬರ್ 1, 1993ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಜನತಾ ಬಝಾರ್ ಹಾಗೂ ತೋಟಗಾರಿಕಾ ಉತ್ಪನ್ನಗಳ ಸಹಕಾರಿ ಮಾರುಕಟ್ಟೆ ಸಂಘ (HOPCOMS) ನಲ್ಲಿರುವ ಬೆಲೆಗಳನ್ನು ಈ ಲೆಕ್ಕಾಚಾರದಲ್ಲಿ ಬಳಸಲಾಗಿದೆ. ವಿವಿಧ ಧಾನ್ಯಗಳ ಬಳಕೆಯ ವಿಧಾನವನ್ನು ಗಮನಿಸಿ ಸರಾಸರಿ ಲೆಕ್ಕ ಹಾಕಲಾಗಿದೆ. ಅಂದರೆ ಸುಮಾರು 50 ಶೇ. ಅಕ್ಕಿ (ಮಧ್ಯಮ ಮತ್ತು ದಪ್ಪ), ಸುಮಾರು 25 ಶೇ. ಗೋಧಿ ಮತ್ತು ಗೋಧಿ ಉತ್ಪನ್ನಗಳು, ಸುಮಾರು 12.5 ಶೇ. ರಾಗಿ ಮತ್ತು ಉಳಿದ 12.5 ಶೇ. ಜೋಳ. ಇದು ಕೇವಲ ಅಕ್ಕಿಯ ಬಳಕೆಯನ್ನು ಮಾತ್ರ ಅವಲಂಬಿಸಿ ಲೆಕ್ಕ ಹಾಕಿದರೆ ಬರಬಹುದಾದ ಖರ್ಚಿಗಿಂತ ಕಡಿಮೆಯಿರುತ್ತದೆ. ಇದೇ ರೀತಿ ತರಕಾರಿ-ಕಾಯಿಪಲ್ಲೆಗಳ ಖರ್ಚು ಲೆಕ್ಕ ಹಾಕುವಾಗ ಸರಾಸರಿ ಬೆಲೆ ತೆಗೆದುಕೊಳ್ಳಲಾಗಿದೆ. ಹೆಚ್ಚು ಬೆಲೆಯುಳ್ಳ ಒಂದು ಮಸಾಲೆ ಸಾಮಾನು ಬೆಳ್ಳುಳ್ಳಿ ಹಾಗೂ ನಿಂಬೆಕಾಯಿಯನ್ನು ಸೇರಿಸಲಾಗಿದೆ. ಸರಾಸರಿ ಖರ್ಚು ಕೆ.ಜಿಗೆ 9. 45 ರೂ. ಆಗುತ್ತದೆ. ನಿಜವಾಗಿ ಆಗುವ ಖರ್ಚು ಈ ಲೆಕ್ಕಾಚಾರಕ್ಕಿಂತ ಹೆಚ್ಚಿರುತ್ತದೆ. ಹಣ್ಣುಗಳ ಖರ್ಚಿನಲ್ಲೂ ಇಂತಹುದೇ ಲೆಕ್ಕಾಚಾರ ಮಾಡಲಾಗಿದೆ.(ಪುಟ 4 ರಲ್ಲಿ ಕೋಷ್ಟಕ - 5 ನೋಡಿ)

ಕೋಷ್ಟಕ - 4

ಸಾಮಾನ್ಯ ಚಟುವಟಿಕೆಗ[illegible]	ಅಗತ್ಯವಾದ ಕ್ಯಾಲರಿಗಳು
ಚಟುವಟಿಕೆ	ಪ್ರತಿಮಿನಿಟಿಗೆ ಕ್ಯಾಲರಿಯ ಬಳಕೆ
ಸ್ವಯಂ-ಪಾಲನೆಯ [illegible]ಕೆಗಳು	
ಅಂಗತ್ತನಾಗಿ ಮಲಗಿ[illegible]	1.0
ಕೂತಿರುವಾಗ	1.2
ಆರಾಮವಾಗಿ ನಿಂತಿರು[illegible]	1.4
ತಿನ್ನುವಾಗ	1.4
ಸಂಭಾಷಣೆ	1.4
ಬಟ್ಟೆ ಹಾಕಿಕೊಳ್ಳುವುದು ತೆಗೆಯುವುದು	[illegible]
ಮುಖ, ಕೈತೊಳೆಯಲು	2.5
ನಡೆಯಲು-ಗಂಟೆ[illegible] [illegible]ಲಿನಂತೆ	[illegible]
ಶವರಿಂಗ್	[illegible]
ಕೆಳಗಿಳಿಯುವಾಗ	5.2
ಮನರಂಜನಾ ಚಟು[illegible]ಗಳು	
ಕೂತು ಪೈಂಟಿಂಗ್	2.0
ಕಾರುಚಾಲನೆಗೆ	2.8
ಕುದುರೆ ಬೆನ್ನಮೇಲೆ, ಮೆಲ್ಲಗೆ	3.0
ವಾಲಿಬಾಲ್ ಆಡುವಾಗ	3.5
ಬೌಲಿಂಗ್‌ನಲ್ಲಿ	4.4
ಸ್ಕೇಟಿಂಗ್, ಗಂಟೆಗೆ 5.5.ಮೈಲಿ	4.5
ಗೊಲ್ಫ್ ಆಡುವಾಗ	5.0
ಈಜುವಾಗ-ಮಿನಿಟಿಗೆ 20 ಗಜ ವೇಗ	5.0
ನೃತ್ಯ ಮಾಡುವಾಗ	5.5
ತೋಟಗಾರಿಕೆಯಲ್ಲಿ	5.6
ಟೆನ್ನಿಸ್ ಆಡುವಾಗ	7.1
ಕುದುರೆ ಓಟದಲ್ಲಿ	8.0
ಸ್ಕೀಯಿಂಗ್	9.9
ಸ್ಕ್ವಾಶ್ ಆಡುವಾಗ	10.2
ಮನೆ ಗೆಲಸ	
ಕೈ ಹೊಲಿಗೆ	1.4
ನೆಲ ಗುಡಿಸಲು	1.7
ಪೀಠೋಪಕರಣಗಳನ್ನು ಒರೆಸಲು	2.4
ನಿಂತು ತಿಕ್ಕುವುದು	2.9
ಸಣ್ಣ ಬಟ್ಟೆಗಳನ್ನು ಒಗೆಯುವುದು	3.0
ನೆಲ ತಿಕ್ಕುವುದು	3.6
ಹಾಸಿಗೆ ಹಾಸುವುದು	3.9
ನಿಂತು ಇಸ್ತ್ರಿ ಮಾಡುವುದು	4.2
ಧೂಳು ತೆಗೆಯುವುದು	4.2
ಒಗೆದ ಬಟ್ಟೆ ನೇತು ಹಾಕುವುದು	4.5
ಉದ್ಯೋಗ ಚಟುವಟಿಕೆಗಳು	
ಮೇಶೀನಿನಲ್ಲಿ ಹೊಲಿಗೆ	2.9
ಇಟ್ಟಿಗೆ ಇಡುವುದು	4.0
ಪ್ಲಾಸ್ಟರಿಂಗ್	4.1
ಟ್ರಾಕ್ಟರ್ ಉಳುಮೆ	4.2
ಮರಗೆಲಸ	6.8
ಉದ್ದ ಸಲಿಕೆಯಿಂದ ಎತ್ತಿ ಹಾಕುವುದು	8.0
ಕುಲುಮೆ ನಡೆಸಲು	10.2

ಕಳೆದ ಸಂಚಿಕೆಯಲ್ಲಿ ಕೋಷ್ಟಕ - 4ರ ಬದಲು ಕೋಷ್ಟಕ - 3 ಪ್ರಕಟವಾಗಿತ್ತು

ಭೂಕಂಪ ಪರಿಹಾರ ನಿಧಿಯ ಅಸಮರ್ಪಕ ವಿತರಣೆ: ತನಿಖೆಗೆ ಆಗ್ರಹ

ಬಿಜಾಪುರ: ಸಿಪಿಐ(ಎಂ)ನ ಜಿಲ್ಲಾ ಸಮಿತಿಯು ಅಕ್ಟೋಬರ್ 24ರಂದು ಸಭೆ ಸೇರಿ ಭೂಕಂಪ ಹಾಗೂ ಅತಿವೃಷ್ಟಿಯಿಂದ ಜೀವ ಕಳೆದುಕೊಂಡವರಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಭೂಕಂಪ ನಡೆದು, ಅದಕ್ಕೆ ಪರಿಹಾರ ಧನವು ಎಲ್ಲೆಡೆಗಳಿಂದ ಹರಿದು ಬಂದರೂ ನಿಜವಾದ ಸಂತ್ರಸ್ಥರಿಗೆ ದೊರೆಯುತ್ತಿಲ್ಲವೆಂದು ದೂರುಗಳು ಸರ್ವೇ ಸಾಮಾನ್ಯವಾದ ವಿಷಯವಾಗಿದೆ ಕರ್ನಾಟಕ ಸರ್ಕಾರ 5000ರೂಗಳನ್ನು ಪರಿಹಾರ ಧನವಾಗಿ ಕೊಡುತ್ತೇವೆಂದು ಘೋಷಿಸಿದ್ದರೂ ಅಲ್ಲಿ ನಿಜವಾಗಿ ಬಂದದ್ದು 100 ರೂ. ನಿಂದ 500 ರೂಗಳು ಮಾತ್ರ. ಇದರ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಉಗ್ರ ಕ್ರಮ ಕೈಗೊಳ್ಳಬೇಕೆಂದು ಸಭೆಯು ಒತ್ತಾಯಿಸಿದೆ.

ಅತಿವೃಷ್ಟಿಯಿಂದಾಗಿ ಜಿಲ್ಲೆಯ ಸೂರ್ಯಕಾಂತಿ ಹಾಗೂ ಇನ್ನಿತರ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ. ಇಲ್ಲಿನ ರೈತರ ಸಂಕಟದ ಸಮಯದಲ್ಲಿ ಸರಕಾರ ಅಂತಃಕಲಹದಿಂದ ಒಳಜಗಳದಲ್ಲಿ ನಿರತವಾಗಿರುವುದು ನಿಜಕ್ಕೂ ವಿಷಾದನೀಯ ಎಂದು ಸಭೆಯು ಅಭಿಪ್ರಾಯ ಪಟ್ಟು ಇಲ್ಲಿನ ರೈತರಿಗೆ ಪರಿಹಾರ ಧನವನ್ನು ನೀಡಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ಸೆಕ್ರೆಟಾರಿಯೆಟ್ ಸದಸ್ಯರಾ. ಎಸ್.ಕೆ. ಉಪಾಧ್ಯಾಯರವರು ಈ ಸಭೆಯಲ್ಲಿ ಹಾಜರಿದ್ದರು.

ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳ ಹೋರಾಟವನ್ನು ತೀವ್ರಗೊಳಿಸಲು ನಿರ್ಧಾರ

ಉಡುಪಿ: ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳ ಸಭೆಯು ನವೆಂಬರ್ 7, 1993ರಂದು ಉಡುಪಿಯಲ್ಲಿ ಹೋರಾಟ ಸಮಿತಿಯ ಅಧ್ಯಕ್ಷಶ್ರೀ ಪಿ. ವಿಶ್ವನಾಥ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಅಧ್ಯಕ್ಷ ಶ್ರೀ.ಪಿ. ವಿಶ್ವನಾಥರೈಯವರು ಮಾತನಾಡುತ್ತಾ ಕೊಂಕಣ ರೈಲ್ವೆಯ ಈ ಯೋಜನೆಯಿಂದ ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ತೀವ್ರ ಅಭಿವೃದ್ಧಿಯಾಗುವ ಸಾಧ್ಯತೆ ಇದೆ. ಬಹಳಷ್ಟು ಜನರಿಗೆ ಉದ್ಯೋಗಾವಕಾಶಗಳು ಸಿಗುವ ಸಾಧ್ಯತೆ ಇದೆ. ಈ ರೈಲ್ವೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಉದ್ಯೋಗ ಕೊಡುವ ಬದಲು ಸಂತ್ರಸ್ತರಲ್ಲದ ಇತರ ರಾಜ್ಯದವರಿಗೆ ಉದ್ಯೋಗಾವಕಾಶಗಳನ್ನು ದೊರಕಿಸಿ ಕೊಟ್ಟಿರುವುದು ಅನ್ಯಾಯವಾಗಿದೆ. ಈ ಅನ್ಯಾಯದ ವಿರುದ್ಧ ಸಂತ್ರಸ್ತರು ಹೋರಾಟವನ್ನು ಸಂಘಟಿಸುವ ಮೊದಲು ಕೊಂಕಣ ರೈಲ್ವೆ ಅಧಿಕಾರಿಗಳು ತೀರಾ ಉದ್ಧಟತನದಿಂದ ವರ್ತಿಸಿದ್ದು, ನಮ್ಮ ಹೋರಾಟದ ಪರಿಣಾಮವಾಗಿ ಜಿಲ್ಲಾಧಿಕಾರಿಯವರ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆಸಲು ಸಾಧ್ಯವಾಗಿದೆ. ರೈಲ್ವೆಯಂಥ ದೊಡ್ಡ ಸಂಸ್ಥೆಯ ವಿರುದ್ಧ ದೊಡ್ಡ ರೀತಿಯಲ್ಲಿ ಹೋರಾಟ ನಡೆಸುವುದು ಅಗತ್ಯವಾಗಿದೆ. ಅದಕ್ಕಾಗಿ ಇಡೀ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಜಾಗ ಕಳಕೊಂಡ ಸಂತ್ರಸ್ತರ ಗ್ರಾಮಗಳಲ್ಲಿ ಸಭೆಗಳನ್ನು ಸೇರಿಸಿ ಎಲ್ಲಾ ಸಂತ್ರಸ್ತರನ್ನು ಈ ಚಳುವಳಿಯಲ್ಲಿ ಭಾಗಿಯಾಗಿಸಿ ಹೋರಾಟವನ್ನು ತೀವ್ರಗೊಳಿಸಲು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕುಂದಾಪುರ ತಾಲೂಕು ಡಿ.ವೈ.ಎಫ್.ಐ ಕಾರ್ಯದರ್ಶಿ ಎಸ್. ನರಸಿಂಹ ರಾಯರು ಮಾತನಾಡುತ್ತಾ ಈ ಹೋರಾಟವನ್ನು ಕುಂದಾಪುರ ತಾಲೂಕಿನಾದ್ಯಂತ ಸಂಘಟಿಸುವುದಾಗಿ ತಿಳಿಸಿದರು.

ಹೋರಾಟ ಸಮಿತಿ ಕಾರ್ಯದರ್ಶಿ ಶ್ರೀ.ಪಿ. ವಿಶ್ವನಾಥರವರು ಚಟುವಟಿಕೆ ವರದಿ ಮಂಡಿಸಿದರು. ಹೋರಾಟ ಸಮಿತಿ ಕೋಶಾಧಿಕಾರಿ ರಮೇಶ್ ಮೆಂಡನ್‌ರವರು ಲೆಕ್ಕ ಪತ್ರ ಮಂಡಿಸಿದರು.

ಉಡುಪಿ ತಾಲೂಕಿನ ಶಿವಳ್ಳಿಗ್ರಾಮದ ಮತ್ತು 76ನೇ ಬಡಗಬೆಟ್ಟು ಗ್ರಾಮದ ವ್ಯಾಪ್ತಿಯಲ್ಲಿ ಬರುವ ರೈಲ್ವೆ ಸಂತ್ರಸ್ತರ ಸಭೆಯನ್ನು ದಿನಾಂಕ ನವೆಂಬರ್ 20, 1993 ರಂದು ಶನಿವಾರ ಸಂಜೆ ನಾಲ್ಕು ಗಂಟೆಗೆ ಉಡುಪಿ ರೈಲ್ವೆ ನಿಲ್ದಾಣದ ಬಳಿ ಸಭೆ ಸೇರಿಸಲು ತೀರ್ಮಾನಿಸಲಾಯಿತು.

ಪ್ರಾರಂಭದಲ್ಲಿ ಹೋರಾಟ ಸಮಿತಿ ಉಪಾಧ್ಯಕ್ಷಶ್ರೀ ಪ್ರಭಾಕರ ನಾಯಕ್‌ರವರು ಸ್ವಾಗತಿಸಿದರು. ಕೊನೆಗೆ ಕಾರ್ಯದರ್ಶಿ ಶ್ರೀ ಪಿ. ವಿಶ್ವನಾಥ್‌ರವರು ಧನ್ಯವಾದ ನೀಡಿದರು.

ಡಿವೈಎಫ್ಐ ಕಾರ್ಯಕರ್ತನ ಮೇಲೆ ಹಲ್ಲೆ

ಹನೂರು(ಕೊಳ್ಳೆಗಾಲ): ಈ ಗ್ರಾಮದಲ್ಲಿ ಡಿವೈಎಫ್ಐ ಸಂಘಟನೆ ಇತ್ತೀಚೆಗೆ ಬೆಳೆಯಲಾರಂಭಿಸಿದೆ. ಈ ಬೆಳವಣಿಗೆಯನ್ನು ನಿಲ್ಲಿಸಲು, ಸಂಘಟನೆಯನ್ನು ತುಳಿಯಲು ಇಲ್ಲಿನ ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ. ಈಗಾಗಲೇ ಅನೇಕ ರೀತಿಯಲ್ಲಿ ತೊಂದರೆಯನ್ನನುಭವಿಸಿದ ಈ ಸಂಘಟನೆಯು ಈಗ ಮೆಲ್ಲನೆ ಮೇಲೇರಲಾರಂಭಿಸಿತ್ತು. ಇತ್ತೀಚೆಗೆ ಹನೂರಿನಲ್ಲಿರುವ ಚಿತ್ರಮಂದಿರದ ಟಿಕೇಟಿನ ದರವನ್ನು ಏರಿಸಿದ್ದರ ವಿರುದ್ಧ ಆ ಗ್ರಾಮದ ಸ್ಥಳೀಯ ಕುವೆಂಪು ಸಂಘದೊಡನೆ ಪ್ರತಿಭಟನೆ ಮಾಡಿ ಇದರ ವಿರುದ್ಧ ಒಂದು ಮನವಿಯನ್ನು ಅಲ್ಲಿನ ಉಪತಹಶೀಲ್ದಾರರಿಗೆ ಸಲ್ಲಿಸಲಾಗಿತ್ತು. ಇದನ್ನು ಸಹಿಸದ ಆ ಚಿತ್ರಮಂದಿರದ ಮಾಲಿಕ ರಂಗಮಾದ ಹಾಗೂ ಆರ್.ಪಳನಿನಾಯ್ಡು ರವರನ್ನು ಬಿಟ್ಟು ತಾಲೂಕಿನ ಕಾರ್ಯದರ್ಶಿ ಶಿವಾಜಿನಾಯ್ಕರನ್ನು ಒಬ್ಬಂಟಿಯಾಗಿ ಸುಳ್ಳು ಹೇಳಿ ಕರೆ ತಂದು ಐಬಿಯಲ್ಲಿ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನು ನೀಡಿ ಈ ಪ್ರತಿಭಟನಾ ಮನವಿಯನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದರು. ಇಲ್ಲದಿದ್ದಲ್ಲಿ ಪ್ರಾಣಕ್ಕೆ ಗಂಡಾಂತರವೆಂದೂ ಬೆದರಿಸಿದ್ದಾರೆ. ನಂತರ ಸಂಘಟನೆಯ ಸದಸ್ಯರನ್ನೆಲ್ಲಾ ಸುಳ್ಳು ಹೇಳಿ ಅಲ್ಲಿಗೆ ಕರೆತಂದು ಪ್ರತಿಭಟನಾ ಮನವಿಯನ್ನು ವಾಪಸ್ ಪಡೆಯಲು ಎಲ್ಲರ ಸಹಿಯನ್ನು ಅಕ್ರಮವಾಗಿ ಪಡೆದಿದ್ದಾರೆ. ಸಂಘಟನೆಯನ್ನು ಮುರಿಯುವ ಈ ಕ್ರಮಗಳು ಪ್ರಜಾಪ್ರಭುತ್ವವಿರೋಧಿಯಾಗಿದೆಯೆಂದು ಇದರ ವಿರುದ್ಧ ನಡೆಯುವ ಹಲ್ಲೆಗಳಿಂದ ರಕ್ಷಣೆ ನೀಡಬೇಕೆಂದು ಅಲ್ಲಿನ ಸಬ್‌ಇನ್ಸ್‌ಪೆಕ್ಟರ್‌ರಿಗೆ ಮನವಿಯನ್ನು ಅರ್ಪಿಸಲಾಗಿದೆ.

ಈ ಹಲ್ಲೆಯಲ್ಲಿ ಪ್ರಮುಖರಾದ ರಂಗಮಾದ ಹಾಗೂ ಆರ್.ಪಳನಿನಾಯ್ಡು ಎಂಬುವರ ವಿರುದ್ಧ ತೀವ್ರ ಕ್ರಮ ಕೈಗೊಂಡು ತಾಲೂಕು ಕಾರ್ಯದರ್ಶಿಗೆ ಪೋಲೀಸ್ ರಕ್ಷಣೆ ನೀಡಬೇಕೆಂದು ಡಿವೈಎಫ್ಐ ತಾಲೂಕು ಸಮಿತಿಯು ಒತ್ತಾಯಿಸಿದೆ.

ಮಾದರಿ ಭಾವೈಕ್ಯತೆ

ಧರ್ಮಗಳು ಬೇರೆಯಾದರೂ ಎಲ್ಲರ ಮನಸ್ಸುಗಳಲ್ಲಿ ಜಿನುಗುವುದು ಪರಸ್ಪರ ಅನ್ಯೋನ್ಯತೆ, ಸೌಹಾರ್ದತೆಗಳ ಸೆಲೆಯೇ ಎಂಬುದಕ್ಕೆ ನೂರಾರು ಘಟನೆಗಳು ಜರುಗಿವೆ. ಮನಸ್ಸುಗಳನ್ನು ಕತ್ತರಿಸುವ ಉದ್ದೇಶದಿಂದ ನಾಲಗೆಯ ಮೇಲೆ ಕತ್ತರಿ ಮುದ್ರೆ ಅಚ್ಚಿಸಿಕೊಂಡೇ ಇರುವವರು ಕೆಲವರಾದರೆ, ಹರಿದ ಹೃದಯಗಳನ್ನೋ ಅಥವಾ ಹೃದಯ-ಹೃದಯಗಳನ್ನು ಧರ್ಮ-ದೇವರುಗಳ ಹೆಸರಿನಲ್ಲಿ ಹರಿಯಲು ಬಿಡಬಾರದೆಂದೋ ಭಾವೈಕ್ಯದ ಹೊಲಿಗೆಗಳಿಂದ ಸುಭದ್ರಗೊಳಿಸಬೇಕೆನ್ನುವವರೂ ಕೆಲವರಿರುತ್ತಾರೆ. ವಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಲಕ್ಕಸಂದ್ರದಲ್ಲಿನ ಜರುಗಿದ ನೂತನ ಜುಮ್ಮಾ ಮಸೀದಿಯ ಅಡಿಗಲ್ಲು ಸಮಾರಂಭ ಇದಕ್ಕೊಂದು ಪುಳಕಗೊಳಿಸುವಂತಹದ ಉದಾಹರಣೆಯಾಗಿದೆ. ಡಿಸೆಂಬರ್ 6ಕ್ಕಿಂತ ಮೊದಲೇ ಈ ಮನಸ್ಸುಗಳನ್ನು ಬೆಸೆಯುವ ಕಾರ್ಯ ಜರುಗಿದೆಯೆಂಬುದು ಇದರ ಮಹತ್ವವನ್ನು ಇನ್ನೂ ದ್ವಿಗುಣಗೊಳಿಸುತ್ತದೆ.

ಇಸ್ಲಾಂ ಧರ್ಮೀಯರ, ಪ್ರಾರ್ಥನಾಸ್ಥಳವಾದ ಮಸೀದೆಯ ನಿರ್ಮಾಣ ಕಾರ್ಯದ ಉದ್ಘಾಟನಾ ಸಮಾರಂಭದ ಸ್ವಾಗತ ಸಮಿತಿಯ ಪ್ರಮುಖರೇ ವೀರಶೈವ ಸಮಾಜದ ಎಸ್.ಬಿ. ಹಿರೇಮಠ ಹಾಗೂ ಬಿ.ಎಚ್. ಅಂಕ್ಷಣಿಗೋಡಿಯವರಾಗಿದ್ದರೆಂಬುದರಿಂದ ಆರಂಭವಾಗುವ ಭಾವೈಕ್ಯದ ಬಿತ್ತನೆಯ ಕಾರ್ಯ ಈ ಕಾರ್ಯಕ್ರಮ ನಡೆದುದು ಈ ಊರಿನ ಅಕ್ಕಲಕೋಟೆ ಶಿವಶರಣ ಮಠದ ಆವರಣದಲ್ಲಿ ಎಂಬುದನ್ನರಿತಾಗ ಸೌಹಾರ್ದತೆಯ ಸುಗಂಧ ಪಸರಿಸಲಾರಂಭಿಸುತ್ತದೆ. ಮಸೀದೆ ಅಡಿಗಲ್ಲಿನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದವರು ಶ್ರೀ ಸದ್ಗುರು ಚಿಕ್ಕರೇವಣ ಸಿದ್ಧ ಶಿವಶರಣರಾದರೆ ನಂತರ ನಡೆದ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದವರು ಬಾಗಲಕೋಟೆ ಮಲ್ಲಾಪುರದ ಶ್ರೀಮದ್ ಪರಮಹಂಸ ಚಿಕ್ಕ ರಾಮಾರೂಢ ಸ್ವಾಮಿಗಳು. ಕಾರ್ಯಕ್ರಮದ ಅತಿಥಿಗಳಾಗಿ ಅವರಿವರೆನ್ನದೆ ಎಲ್ಲಾ ಮತೀಯರು ಮತೀಯ ಸಂಕುಚಿತತೆಯಿಲ್ಲದೆ ಭಾಗವಹಿಸಿ ತಮ್ಮೆಲ್ಲರಿಗೂ ಮನುಷ್ಯ ಕುಲವೊಂದೇ ಎಂಬುದನ್ನು ಸಾಬೀತು ಪಡಿಸಿದರು.

ಜನತೆಯ ಮನಸ್ಸುಗಳೆಂದರೆ ತಿಳಿನೀರಿನ ಝರಿಗಳಿದ್ದಂತೆ. ನಮ್ಮ ರಾಜಕಾರಣಿಗಳೇ ತಮ್ಮ ಅಧಿಕಾರದಾಹದ ತೃಪ್ತಿಗಾಗಿ ಈ ಕೊಳಗಳಲ್ಲಿ ಒಡಕಿನ ಕಲ್ಲುಗಳನ್ನೆತ್ತಿ ರಾಡಿ ಮಾಡುತ್ತಾರೆ. ದುರ್ಬಲ ಮನಸ್ಸುಗಳವರು ಬೇಗ ಬದಲಾಗುತ್ತಾರೆ.



ದಿನಾಂಕ 29-9-1993 ರಿಂದ ದಿನಾಂಕ 5-1
ಯಲ್ಲಿ ಸಿಪಿಐ(ಎಂ) ಪಕ್ಷದ ಕೇಂದ್ರ ಕಛೇರಿಯಾದ ಎ.
ತರಬೇತಿ ಶಿಬಿರ ನಡೆಯಿತು. ಆ ಶಿಬಿರದಲ್ಲಿ ಕರ್ನಾ
ಸಿ.ಆರ್.ಭಟ್ ಮತ್ತು ಕಾಂ. ಜಿ.ಎಸ್. ನಾಗರಾಜ್
ಶಿಬಿರದಲ್ಲಿ ಭಾಗವಹಿಸಿದ್ದ ಮೂವರು ಹಿರಿಯ, ಅ
ಳನ್ನು ವಿಶೇಷವಾಗಿ ಸಂದರ್ಶಿಸಿ, ಆ ರಾಜ್ಯದ ಪಂಚಾ
ಟನೆಯಲ್ಲಿ, ಸಾಕ್ಷರತಾ ಆಂದೋಲನದಲ್ಲಿ ಮಹಿಳೆಯ
ಪಾತ್ರದ ಕುರಿತು ಸಂಗ್ರಹಿಸಿದ ಸ್ಫೂರ್ತಿದಾಯಕ ಮಾ

ಪಶ್ಚಿಮ ಬಂಗಾ ಪಂಚಾಯತ್ ಮಹಿಳೆಯರ ಮಹ

ಒಂದು ವಿಶೇಷ ಸಂದ

ಸಂದರ್ಶನ ನೀಡಿದ ಮಹಿಳಾ ಸಂಗಾತಿಗಳು

(1) **ಕಾಂ. ನಂದುರಾಣಿದಾಲ:** ಪಕ್ಷದ ಮಿಡ್ನಾಪುರ ಜಿಲ್ಲಾ ಸಮಿತಿಯ ಸದಸ್ಯೆ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ (ಎ.ಐ.ಡಿ.ಡಬ್ಲ್ಯು.ಎ ಮುಂದೆ 'ಮಹಿಳಾ ಸಂಘಟನೆ ಎಂದಷ್ಟೆ ಈ ಸಂದರ್ಶನದ ಬರವಣಿಗೆಯಲ್ಲಿ ಬಳಸಲಾಗಿದೆ) ರಾಜ್ಯ ಸಮಿತಿಯ ಕಾರ್ಯಕಾರಿ ಮಂಡಳಿಯ ಸದಸ್ಯೆ, ವಿಧಾನಸಭಾ ಸದಸ್ಯೆ (1967, 1969,1977, 1991) ಹೈಸ್ಕೂಲ್ ಶಿಕ್ಷಕಿ.

(2) **ಕಾಂ. ಮಿನತಿ ಘೋಷ್:** ಪಕ್ಷದ ದಕ್ಷಿಣ ದಿನಾಜಪುರ್ ಜಿಲ್ಲೆಯ ಕಾರ್ಯಕಾರಿ ಮಂಡಳಿಯ ಸದಸ್ಯೆ, ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮತ್ತು ರಾಜ್ಯ ಸಮಿತಿಯ ಸದಸ್ಯೆ, ಜಿಲ್ಲಾ ಪರಿಷತ್ ಸದಸ್ಯೆ (1983), ವಿಧಾನಸಭಾ ಸದಸ್ಯೆ (1987, 1991)

(3) **ಕಾಂ. ಸುಮಿತ್ರ ಡೇ:** ಪಕ್ಷದ ಬಂಕುರಾ ಜಿಲ್ಲಾ ಸಮಿತಿಯ ಸದಸ್ಯೆ, ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿಯ ಕಾರ್ಯದರ್ಶಿ, ಕಾಲೇಜು ಪ್ರಾಧ್ಯಾಪಕಿ.

ಪಂಚಾಯತ್‌ಗಳಲ್ಲಿ

ಪ್ರಶ್ನೆ: ಪ. ಬಂಗಾಳದಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಯಾವಾಗ ಪ್ರಾರಂಭವಾಯಿತು?

* 1943 ರಷ್ಟರಲ್ಲಿಯೇ ಪ್ರಾರಂಭವಾಗಿತ್ತು. ಪ್ರಾಯಶಃ ಇದು ದೇಶದಲ್ಲಿಯೇ ಒಂದು ಹಳೆಯ ಸಂಘಟನೆ.

ಪ್ರಶ್ನೆ: ಈ ರಾಜ್ಯದಲ್ಲಿ ಪಂಚಾಯತ್ ವ್ಯವಸ್ಥೆ ಯಾವಾಗ ಜಾರಿಗೆ ಬಂತು?

* 1973 ರಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿರುವಾಗಲೇ ಈ ಕುರಿತು ಶಾಸನ ರಚಿಸಲಾಗಿತ್ತು. ಆದರೆ ಅದನ್ನು ಜಾರಿಗೊಳಿಸಲಿಲ್ಲ.

ಪ್ರಶ್ನೆ: ಹಾಗಾದರೆ, ಈ ಶಾಸನವನ್ನು ಯಾರು, ಯಾವಾಗ ಜಾರಿಗೆ ತಂದರು?

* 1977ರಲ್ಲಿ ರಾಜ್ಯದಲ್ಲಿ ಚುನಾವಣೆ ನಡೆದಾಗ ಸಿಪಿಐ(ಎಂ)ನ ನೇತೃತ್ವದ ಎಡರಂಗ ಸರಕಾರವು ಅಧಿಕಾರಕ್ಕೆ ಬಂದಿತು. ಅನತಿಕಾಲದಲ್ಲಿಯೇ ಜೂನ್ 1978 ರಲ್ಲಿ ಮೂರು ಹಂತದ (ಜಿಲ್ಲೆ, ಬ್ಲಾಕ್ ಮತ್ತು ಗ್ರಾಮ) ಪಂಚಾಯತ್ ವ್ಯವಸ್ಥೆಯು ಜಾರಿಗೆ ಬಂದಿತು.

ಪ್ರಶ್ನೆ: ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಪ್ರಾತಿನಿಧಿಕ ಸ್ಥಾನಗಳನ್ನು ಕಾಯ್ದಿಡುವ ಪದ್ಧತಿ ರಾಜ್ಯದಲ್ಲಿ ಯಾವಾಗ ಪ್ರಾರಂಭವಾಯಿತು?

* ಮೊದಲಿಗೆ ಮಹಿಳೆಯರಿಗೆ ಸ್ಥಾನಗಳನ್ನು ಕಾಯ್ದಿಡುವ ಪದ್ಧತಿ ಇರಲಿಲ್ಲ. ಆದರೆ, ಮಹಿಳಾ ಸಂಘಟನೆಯು ರಾಜ್ಯದ ಎಲ್ಲೆಡೆಗಳಲ್ಲಿ ಪ್ರಬಲವಾಗಿದ್ದುದರಿಂದ ಪಂಚಾಯತ್ ವ್ಯವಸ್ಥೆಯ ಮೂರು ಹಂತಗಳಲ್ಲಿ ಮಹಿಳೆಯರು ಸಾಕಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆದಿದ್ದರು. ಪ್ರತಿ ಜಿಲ್ಲೆಯಲ್ಲಿ 30-40 ಮಹಿಳಾ ಪ್ರತಿನಿಧಿಗಳಿದ್ದರು. ಚುನಾವಣೆಯಲ್ಲಿ ಮಹಿಳಾ ಪ್ರತಿನಿಧಿಗಳು ಗೆದ್ದು ಬಾರದಿದ್ದಲ್ಲಿ, ಪಂಚಾಯತ್‌ನಲ್ಲಿ ಕನಿಷ್ಟ ಇಬ್ಬರು ಮಹಿಳಾ ಪ್ರತಿನಿಧಿಗಳನ್ನು ರಾಜ್ಯ ಸರಕಾರವೇ ನೇಮಕಾತಿ ಮಾಡುತ್ತಿತ್ತು.

ಜೂನ್ 1993 ರಲ್ಲಿ ನಡೆದ ಪಂಚಾಯತ್ ಚುನಾವಣೆಯಲ್ಲಿ ಮಹಿಳೆಯರಿಗೆ ಎಲ್ಲ ಹಂತಗಳಲ್ಲಿ ಶೇ. 30 ರಷ್ಟು ಸ್ಥಳಗಳನ್ನು ಕಾದಿಡಲಾಗಿದ್ದು, ಅವೆಲ್ಲವುಗಳಿಗೆ ಸಿಪಿಐ(ಎಂ) ನೇತೃತ್ವದ ಎಡರಂಗದ ಅಭ್ಯರ್ಥಿಗಳೇ ಬಹುಪಾಲು ಆರಿಸಿ ಬಂದಿದ್ದಾರೆ. ಕಾರಣ ಅವರು ನಮ್ಮ ಮಹಿಳಾ ಸಂಘಟನೆಯಲ್ಲಿ ಪ್ರಾರಂಭದಿಂದಲೂ ಸಕ್ರಿಯವಾಗಿ ಶ್ರಮಿಸುತ್ತಾ ಬಂದಿದ್ದರು.

ಪ್ರಶ್ನೆ: ಕಳೆದ ಪಂಚಾಯತ್ ಪ್ರಚಾರ ಹೇಗಾಯಿತು? ಅದರಲ್ಲಿ ಮಹಿಳೆಯರ ಪಾತ್ರವೇನು?

* ಕಳೆದ ಚುನಾವಣಾ ಪ್ರಚಾರ ಮೇಲು ನೋಟಕ್ಕೆ ಹೆಚ್ಚು ಸದ್ದುಗದ್ದಲವಿಲ್ಲದೆ ನಡೆಯಿತು. ಮನೆ ಮನೆಗಳಿಗೆ ಭೇಟಿ ನೀಡುವುದು, ಚಿಕ್ಕ ಚಿಕ್ಕ ಗುಂಪು ಸಭೆಗಳನ್ನೂ, ರ್‍ಯಾಲಿಗಳನ್ನೂ ನಡೆಸುವುದು ಇತ್ಯಾದಿ ಆಳವಾದ ಪರಿಶ್ರಮ ಪೂರಕವಾದ ವಿಧಾನಗಳಿಂದ ಯಶಸ್ವಿಯಾಗಿ ಪ್ರಚಾರ ಕಾರ್ಯ ನಡೆಯಿತು.

ಮಹಿಳೆಯರು, ಮುಖ್ಯವಾಗಿ ಅಲ್ಪಸಂಖ್ಯಾತರಾದ ಮುಸ್ಲಿಮರು, ಆದಿವಾಸಿಗಳು ಭಾರಿ ದೊಡ್ಡ ಪ್ರಮಾಣದಲ್ಲಿ ತುಂಬಾ ಉತ್ಸಾಹದಿಂದ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದರು.

ಪ್ರಶ್ನೆ: ನಿಮ್ಮ ನಿಮ್ಮ ಜಿಲ್ಲೆಯಲ್ಲಿ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳಾ ಪದಾಧಿಕಾರಿಗಳ ಕುರಿತು ವಿವರಣೆ ಕೊಡುತ್ತೀರಾ?

* ಮಹಿಳಾ ಪದಾಧಿಕಾರಿಗಳ ಸಂಖ್ಯೆ ಕೆಳಮಟ್ಟದಲ್ಲಿ ಹೆಚ್ಚು ಇದೆ. ಮೇಲ್ಮಟ್ಟದಲ್ಲಿ ಕಡಿಮೆ ಇದೆ.

ಮಿಡ್ನಾಪುರ ಜಿಲ್ಲೆಯ ಗ್ರಾಮಮಟ್ಟದಲ್ಲಿ ಒಟ್ಟು ಪ್ರಧಾನರು 518 - ಮಹಿಳೆಯರು 49. ಒಟ್ಟು ಉಪಪ್ರಧಾನರು 518 - ಮಹಿಳೆಯರು 66. ಬ್ಲಾಕ್ ಮಟ್ಟದಲ್ಲಿ - ಒಟ್ಟು ಸಭಾಪತಿಗಳು 54 : ಮಹಿಳೆಯರು 5.

ಬಂಕೂರಾ ಜಿಲ್ಲೆಯ ಗ್ರಾಮಮಟ್ಟದಲ್ಲಿ ಒಟ್ಟು ಪ್ರಧಾನರು 190 - ಮಹಿಳೆಯರು 31. ಒಟ್ಟು ಉಪಪ್ರಧಾನರು 190 - ಮಹಿಳೆಯರು 4. ಬ್ಲಾಕ್ ಮಟ್ಟದಲ್ಲಿ ಒಟ್ಟು ಉಪ ಸಭಾಪತಿಗಳು 22 - ಮಹಿಳೆಯರು 6.

ದೀನಜಪುರ ಜಿಲ್ಲೆಯ ಗ್ರಾಮಮಟ್ಟದಲ್ಲಿ ಒಟ್ಟು ಪ್ರಧಾನರು 22 - ಮಹಿಳೆಯರು (ಮುಸ್ಲಿಂ) 1. ಒಟ್ಟು ಉಪಪ್ರಧಾನರು 22 - ಮಹಿಳೆಯರು 4. ಬ್ಲಾಕ್ ಮಟ್ಟದಲ್ಲಿ ಒಟ್ಟು ಸಭಾಪತಿಗಳು ಇಲ್ಲ ಉಪ ಪ್ರಧಾನರ ಸಂಖ್ಯೆ 4 ಅದರಲ್ಲಿ ಮಹಿಳೆಯರೇ ಇದ್ದಾರೆ.

ಜಿಲ್ಲಾ ಮಟ್ಟದಲ್ಲಿ ಈ ಮೂರು ಜಿಲ್ಲೆಗಳಲ್ಲಿ ಮಹಿಳಾ ಪದಾಧಿಕಾರಿಗಳಿಲ್ಲ. ಇತರ ಕೆಲವು ಜಿಲ್ಲೆಗಳಲ್ಲಿದ್ದಾರೆ. ಈ ಚುನಾವಣೆಯಲ್ಲಿ ಮೊದಲ ಬಾರಿಗೆ ಮಹಿಳೆಯರಿಗೆ ಶೇ. 30 ರಷ್ಟು ಸ್ಥಾನಗಳನ್ನು ಕಾದಿರಿಸಲಾಗಿದ್ದು, ಮುಂದೆ ಎಲ್ಲ ಹಂತಗಳಲ್ಲಿಯೂ ಮಹಿಳಾ ಪದಾಧಿಕಾರಿಗಳ ಸಂಖ್ಯೆ ಹೆಚ್ಚಾಗಬೇಕಾಗಿದೆ.

ಪ್ರಶ್ನೆ: ರಾಜ್ಯದಲ್ಲಿ ಮಹಿಳೆಯರದ್ದೇ ಪಂಚಾಯತ್ ಇದೆಯೇ?

* ಹೌದು, ಇದೇ ರಾಜ್ಯದಲ್ಲಿ ಮಿಡ್ನಾಪುರ ಜಿಲ್ಲೆಯ 'ಕುಟ್ಟಿಕಾರಿ' ಎಂಬ ಗ್ರಾಮದಲ್ಲಿ (Kuttikari) ಪಂಚಾಯತ್‌ನಲ್ಲಿರುವ ಒಟ್ಟು 13 ಸದಸ್ಯರಲ್ಲಿ ಎಲ್ಲರೂ ಮಹಿಳೆಯರೇ ಆಗಿದ್ದಾರೆ. ಈ ಪಂಚಾಯತನ್ನು ಮಹಿಳೆಯರೇ ನಡೆಸುತ್ತಾರೆ.

ಮಹಿಳಾ ಸಂಘಟನೆಯಲ್ಲಿ

ಪ್ರಶ್ನೆ: ಪಂಚಾಯತ್‌ನಲ್ಲಿ ಮಹಿಳೆಯರು ಗಣನೀಯ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದರಿಂದ, ಮಹಿಳಾ ಸಂಘಟನೆ ಹೇಗೆ ಪ್ರಯೋಜನವಾಗಿದೆ?

* ಕಳೆದ 16 ವರ್ಷಗಳಲ್ಲಿ ನಮ್ಮ ಮಹಿಳಾ ಸಂಘಟನೆಯ ಸದಸ್ಯತ್ವ ಪ್ರತಿ ಗ್ರಾಮದಲ್ಲಿಯೂ ಅತ್ಯುನ್ನತ ಮಟ್ಟಕ್ಕೇರಿದೆ.

ಪ್ರಶ್ನೆ:ಕೆಲವು ಅಂಕಿ ಸಂಖ್ಯೆಯನ್ನು ಕೊಡಬಹುದೇ?

ಉತ್ತರ:ಅಂದಾಜಿನಲ್ಲಿ ಹೇಳಬಹುದು

ರಾಜ್ಯದಲ್ಲಿ ಮಹಿಳಾ ಸಂಘಟನೆಯ ಸದಸ್ಯತ್ವ 1978ರಲ್ಲಿ 5 ರಿಂದ 6 ಲಕ್ಷ, 1993 ರಲ್ಲಿ 22 ಲಕ್ಷ

ಮಿಡ್ನಾಪುರ ಜಿಲ್ಲೆಯಲ್ಲಿ ಮಹಿಳಾ ಸಂಘಟನೆಯ ಸದಸ್ಯತ್ವ 1973 ರಲ್ಲಿ 5000ರಲ್ಲಿ 1993ರಲ್ಲಿ ಐದು ಲಕ್ಷ,

ದಕ್ಷಿಣ ದೀನಜಪುರ್ ಜಿಲ್ಲೆಯಲ್ಲಿ ಮಹಿಳಾ ಸಂಘಟನೆಯ ಸದಸ್ಯತ್ವ 1973ರಲ್ಲಿ 5,000, 1993 ರಲ್ಲಿ ಐದು ಲಕ್ಷ,

ಬಂಕೂರಾ ಜಿಲ್ಲೆಯ ಮಹಿಳಾ ಸಂಘಟನೆಯ ಸದಸ್ಯತ್ವ 1970ರಲ್ಲಿ 1,700, 1977ರಲ್ಲಿ 17 ಸಾವಿರ, 1980ರಲ್ಲಿ ಮೂವತ್ತು ಸಾವಿರ, 1993ರಲ್ಲಿ 87 ಸಾವಿರ (ಗುರಿ 90,000)

ದಕ್ಷಿಣ ದೀನಜಪುರ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ. 1980 ರವರೆಗೆ ಇಲ್ಲಿ ಪಕ್ಷವು ದುರ್ಬಲವಾಗಿತ್ತು. ಹೋರಾಟಗಳ ಮೂಲಕ, ಈಗ ಸಿಪಿಐ(ಎಂ) ಪಕ್ಷವು ಅತಿ ದೊಡ್ಡ ಪಕ್ಷವಾಗಿ ಬೆಳೆದಿದೆ.

ಬಂಕುರಾ ಜಿಲ್ಲೆಯಲ್ಲಿ ಒಟ್ಟು 22 ಬ್ಲಾಕುಗಳಿವೆ. 1977ರಲ್ಲಿ ಕೇವಲ 5-6 ಬ್ಲಾಕ್‌ಗಳಲ್ಲಿ ಮಾತ್ರ ಸಂಘಟನೆ ಇತ್ತು. ಈಗ ಪ್ರತಿ ಒಂದು ಬ್ಲಾಕಿನಲ್ಲಿ ಒಂದು ಸಂಘಟನೆ ಇದೆ.

ಪ್ರಶ್ನೆ: ಯಾವ ಯಾವ ವರ್ಗದ ಮಹಿಳೆಯರು ಸದಸ್ಯರಾಗಿದ್ದಾರೆ?

* ಅಂದಾಜಿನಲ್ಲಿ ಬಡರೈತರ ಕುಟುಂಬದವರು, ಶೇ. 30 ದಿನಗೂಲಿಗಾರರು, ಕೃಷಿ ಕೂಲಿಗಾರರು, ಬೀಡಿ ಕಾರ್ಮಿಕರು, ಚಹಾ ತೋಟದ ಕೆಲಸಗಾರರು, ಇತರ ಕೈಗಾರಿಕಾ ಕಾರ್ಮಿಕರು ಇತ್ಯಾದಿ ದುಡಿಯುವ ಮಹಿಳೆಯರು ಶೇ. 20 ಮಧ್ಯಮ ವರ್ಗದವರು ಶೇ. 50 ಮೇಲ್ಮಟ್ಟದ ಮಹಿಳೆಯರು ಸುಖಿಲೋಲುಪತೆಯ ಕ್ಲಬ್‌ಗಳಿಗಷ್ಟೇ ಸದಸ್ಯರಾಗುತ್ತಾರೆ. ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗೆ ಬರುವುದಿಲ್ಲ.

ಪ್ರಶ್ನೆ: ಪಂಚಾಯತ್‌ನಲ್ಲಿ ಮತ್ತು ಮಹಿಳಾ ಸಂಘಟನೆಯಲ್ಲಿ ಮಹಿಳೆಯರು ಯಾವ ಯಾವ ಸಮಸ್ಯೆಗಳನ್ನು ಕೈಗೆತ್ತುಕೊಳ್ಳುವರು?

ಕೋಷ್ಟಕ - 5

ಮುಖ್ಯ ಐಟಂ ಪ್ರಮಾಣ(ಗ್ರಾಂ)	ಉಪ ಐಟಂ	ಪ್ರಮಾಣ (ಗ್ರಾಂಗಳಲ್ಲಿ)	ಬೆಲೆ ಪ್ರತಿ ಕೆ.ಜಿ.ಗೆ	ಖರ್ಚು ಉಪ- ಐಟಂಗೆ	ಖರ್ಚು ಮುಖ್ಯ ಐಟಂಗೆ
ಧಾನ್ಯಗಳು (475)	ಅಕ್ಕಿ(ಮಸೂರಿ)	125	7.80	0.98	
	ಅಕ್ಕಿ(ನೆಲ್ಲೂರು)	125	9.60	1.20	
	ಗೋಧಿ	50	7.00	0.35	
	ರವೆ	50	7.80	0.39	
	ಮೈದಾ	25	7.00	0.18	
	ರಾಗಿ	50	3.85	0.20	
	ಜೋಳ	50	4.75	0.24	3.54
ಬೇಳೆಗಳು (80)	ತೊಗರಿ	20	23.25	0.47	
	ಉದ್ದು	20	14.80	0.30	
	ಕಡಲೆ	20	20.50	0.41	
	ಹೆಸರು	20	19.50	0.39	1.57
ಹಸಿರು ಕಾಯಿಪಲ್ಲೆ (125)	ಕ್ಯಾಬೇಜ್	25	2.00	0.05	
	ಇತರ	100	3.00	0.30	0.35
ಇತರ ಕಾಯಿಪಲ್ಲೆ (75)	ಹುರುಳಿಕಾಯಿ		9.00		
	ಬೀಟ್‌ರೂಟ್	2.20			
	ಬದನೆ	5.00			
	ಕ್ಯಾರೆಟ್		6.40		
	ಸೌತೆಕಾಯಿ	5.00			
	ಬೆಳ್ಳುಳ್ಳಿ		33.00		
	ಈರುಳ್ಳಿ		6.00		
	ಟೊಮೆಟೋ		4.00		
	ಶುಂಠಿ		17.00		
	ಬೆಂಡೆಕಾಯಿ		7.60		
	10ಐಟಂಗಳಿಗೆ	94.50			
	ಪ್ರತಿ ಕೆ.ಜಿ.ಗೆ		9.45	0.71	0.71

ಮುಖ್ಯ ಐಟಂ ಪ್ರಮಾಣ(ಗ್ರಾಂ)	ಉಪ ಐಟಂ	ಪ್ರಮಾಣ (ಗ್ರಾಂಗಳಲ್ಲಿ)	ಬೆಲೆ ಪ್ರತಿ ಕೆ.ಜಿ.ಗೆ	ಖರ್ಚು ಉಪ- ಐಟಂಗೆ	ಖರ್ಚು ಮುಖ್ಯ ಐಟಂಗೆ
ಗೆಡ್ಡೆ ತರಕಾರಿಗಳು ಹಣ್ಣುಗಳು (30)	ಆಲೂಗೆಡ್ಡೆ	100	9.60	0.96	0.96
	ಬಾಳೆಹಣ್ಣು		14.00		
	"		12.00		
	ದ್ರಾಕ್ಷಿ		13.00		
	"		9.00		
	ಪಪ್ಪಾಯಿ		2.50		
	ಮೊಸಂಬಿ		12.50		
	ದಾಳಿಂಬೆ		12.00		
	ಪೈನಾಪಲ್		8.00		
	8 ಐಟಂಗಳಿಗೆ	79.50			
	ಕೆ.ಜಿ.ಗೆ	10.00	0.30	0.30	
ಹಾಲು		200	8.00	1.60	1.60
ಎಣ್ಣೆ (40)	ನೆಲಗಡಲೆಎಣ್ಣೆ		41.20		
	ತೆಂಗಿನೆಣ್ಣೆ		84.55		
			125.75	2.42	2.42
ಸಕ್ಕರೆ		40 -	11.20	0.45	0.45
				ಒಟ್ಟು	10.90
ಮಾಂಸಾಹಾರಿಗಳಿಗೆ					
(+) ಮಾಂಸ(30 ಗ್ರಾಂ) (ಮಟನ್ + ಚಿಕನ್) ಕೆ.ಜಿ. 50 ರೂ ಸರಾಸರಿಯಂತೆ			(+) 1.50		
(+) ಮೊಟ್ಟೆ (30 ಗ್ರಾಂ)				(+) 0.30	
(-) ಹಾಲು	100 ಗ್ರಾಂ	–	–	(-) 0.80	
(-) ದ್ವಿದಳ ಧಾನ್ಯ(15 ಗ್ರಾಂ)				(-) 0.30	0.70
					ರೂ. 11.60

ಆಹಾರದ ಸರಾಸರಿ ಖರ್ಚು 10.90 + 11.60 / 2 = 11.25 ಅಂದರೆ ಪ್ರತಿ ದಿನಕ್ಕೆ ಪ್ರತಿಯೊಬ್ಬರಿಗೆ ರೂ. 11.25

ನವದೆಹಲಿ
ಕ್ಷದ ಕೇಂದ್ರ
ಹಿಸಿದ ಕಾಂ.
ಂಗಾಳದಿಂದ
ಾ ಸಂಗಾತಿಗ
ಹಿಳಾ ಸಂಘ
ವ ಮಹತ್ವದ
ನೀಡಲಾಗಿದೆ.

ಪಾತ್ರ

ಮಹಿಳೆಯರಿಗೆ ಐ.ಆರ್.ಡಿ.ಪಿ.
ಉದ್ಯೋಗಾವಕಾಶಗಳು, ಸ್ವ
ಗೆ ಸೌಲಭ್ಯಗಳು, ಹಾಳುಬಿದ್ದ
ಪ್ರತಿ ಕುಟುಂಬದಲ್ಲಿ ಗಂಡ-
ಆಸ್ತಿ ಪಟ್ಟಿ ದಾಖಲೆ, ಸಮಾನ
ಪ್ರಾಥಮಿಕ ಶಾಲೆಗಳ ಸ್ಥಾಪನೆ
ಭಿವೃದ್ಧಿ ಕಾರ್ಯಗಳನ್ನು ರೂಪಿ
ರ್ಗತಗೊಳಿಸುವುದರಲ್ಲಿ ಪಾಲು
ಗೆ ವರ್ಷವಿಡೀ ಕೆಲಸ ಕೊಡಿಸು
ಳೆಯರ ಸಮಸ್ಯೆಗಳ ಪರಿಹಾರ,
ನೆಯ ವರ್ಚಸ್ಸು ನಗರ ಪ್ರದೇಶ
ಗಳಲ್ಲಿಯೇ ಹೆಚ್ಚು.
ಾ ಸಹಕಾರ ಸಂಘಗಳನ್ನು ನಡೆ
ಉಡುಪುಗಳ, ಬೊಂಬೆ ತಯಾ
ಫೈಲ್ ಉತ್ಪಾದಿಸುವ ಮತ್ತಿ
ಾ ಹಾಗೂ ವಿತರಣಾ ಕೆಲಸಗ
ಗಳು ಕೈಗೊಳ್ಳುವುವು.
ಮಹಿಳೆಯರಿಗೆ ಆಗುತ್ತಿರುವ ಕಿರು
ಗೆ ಮಹಿಳಾ ಸಂಘಟನೆ ಯಾವ
ದೆ?
ಅತ್ತೆ ಮಾವ-ಸೊಸೆ ಜಗಳ ಇತ್ಯಾ
ಟನೆಯ ಸಕ್ರಿಯ ಕಾರ್ಯಕರ್ತರು
ಗೆ ಕಾರಣಗಳೇನು ಎಂದು ಪ್ರತ್ಯ
ವುಗಳ ಪರಿಹಾರಕ್ಕೆ ಪ್ರಯತ್ನಿಸಲಾ
ರಿಗೆ ಕೌಟುಂಬಿಕ ಶಾಂತಿ ಕಾಪಾ
ಹೆ, ಮಾರ್ಗದರ್ಶನ ನೀಡಲಾಗು
ನು ನೆರವು ಪೋಲೀಸ್ ನೆರವು
ಯಲ್ಲಿ ಮಹಿಳೆಯರಿಗೆ ಪಾಲು
ಲಾಗುತ್ತಿದೆ.
ಸಮಸ್ಯೆಗಳಿದ್ದರೂ ಪರಿಹಾರೋ
ಾಗುತ್ತಿದೆ. ಗಂಡನ ಮನೆಯಲ್ಲಿ
ಲಾಗದಿದ್ದರೆ, ತವರು ಮನೆಯಲ್ಲಿ
ಧಿಕರ, ಹಿತೈಷಿಗಳ ಮನೆಗಳಲ್ಲಿ
ುತ್ತಿದೆ. ಆದಷ್ಟು ಮಟ್ಟಿಗೆ ಸಾಮಾ

ಜಿಕ, ನೈತಿಕ ಒತ್ತಡಗಳನ್ನು ತಂದು ಕೌಟುಂಬಿಕ ಕಲಹಗಳನ್ನು ಬಗೆಹರಿಸಲು ಪ್ರಯತ್ನಿಸಲಾಗುತ್ತಿದೆ, ಉದಾ: ಹೆಂಡತಿಯನ್ನು ಹೊಡೆಯುವುದು, ಸೊಸೆಯನ್ನು ಕಾಡಿಸುವ ಕುಟುಂಬಗಳನ್ನು ಅಗತ್ಯವಿದ್ದರೆ ಸಾಮಾಜಿಕವಾಗಿ ಬಹಿಷ್ಕರಿಸಲಾಗುವುದು.

ಪ್ರಶ್ನೆ: ರಾಜ್ಯದಲ್ಲಿ ಕುಟುಂಬ ನ್ಯಾಯಾಲಯಗಳಿವೇ?

* ಅಧಿಕೃತವಾಗಿ ಇಲ್ಲ, ಎಲ್ಲವೂ ಅನೌಪಚಾರಿಕವಾಗಿ ನಡೆಯುವುವು.

ಪ್ರಶ್ನೆ: ಮಹಿಳಾ ಸಂಘಟನೆಯು ಕುಟುಂಬ ಯೋಜನೆಯ ಕುರಿತು ಯಾವ ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ.

* ಕುಟುಂಬ ಯೋಜನೆಯನ್ನೇ ಮುಖ್ಯವಾಗಿ ಆಂದೋಲನದಲ್ಲಿ ಎತ್ತಿಕೊಳ್ಳುತ್ತಿಲ್ಲ, ಬಡ ಜನರು, ಮಹಿಳೆಯರು ಸಂಘಟಿತರಾಗಿ ಅವರ ಬೇಡಿಕೆಗಳಿಗೆ ಹೋರಾಡುತ್ತಾ, ಸಮಾನತೆ ಹಾಗೂ ಸಮಾನ ಅವಕಾಶ ಪಡೆಯುತ್ತಿದ್ದಂತೆ, ಬಡತನ ನಿವಾರಣೆಯಾಗುತ್ತಿದ್ದಂತೆ, ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಂತೆ, ಕುಟುಂಬಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ. ಚಿಕ್ಕ ಕುಟುಂಬದ ಕುರಿತೂ ಅವರಿಗೆ ಅರಿವು ಮೂಡಲಾರಂಭವಾಗುವುದು.

ಪ್ರಾರಂಭದಲ್ಲಿಯೇ ಚಿಕ್ಕ ಕುಟುಂಬದ ವಿಷಯ ಕೈಗೆತ್ತಿಕೊಳ್ಳುವುದು ಸರಿಯಲ್ಲ. ಹಾಗೆ ಮಾಡುವುದರಿಂದ ಅವರ ವಿವೇಚನೆಯನ್ನೇ ಪ್ರಶ್ನಿಸುವಂತಾಗುವುದು. ಬಡವರಿಗೆ ಮಕ್ಕಳೇ ಸಂಪತ್ತು ಎಂಬ ಭಾವನೆ ಇದೆ. ಇದು ವಾಸ್ತವಿಕವೂ ಹೌದು, ಕಾರಣ, ಮಕ್ಕಳು ದುಡಿದು ಗಳಿಸುತ್ತಾರೆ. ಬಡ ಕುಟುಂಬಗಳಲ್ಲಿ ಮಕ್ಕಳ ಅಕಾಲಿಕ ಸಾವಿನ ಪ್ರಮಾಣವು ಹೆಚ್ಚು. ಕುಟುಂಬ ರಕ್ಷಣೆಯ ದೃಷ್ಟಿಯಲ್ಲಿಯೂ ಮಕ್ಕಳ ಸಂಖ್ಯೆ ಹೆಚ್ಚಿಸಲು ಬಡವರು ಬಯಸುತ್ತಾರೆ. ಮುಸ್ಲಿಮರು ಕುಟುಂಬ ಯೋಜನೆಗೆ ಬಹಳ ನಿಧಾನವಾಗಿ ಸ್ಪಂಧಿಸುತ್ತಾರೆ. ಕಾರಣ ಅವರಲ್ಲಿ ಹೆಚ್ಚಿನವರು ಬಡವರು. ಆದರೂ, ಮಹಿಳಾ ಸಂಘಟನೆಯು ಜನಸಂಖ್ಯಾ ಶಿಕ್ಷಣದ ಕುರಿತು ಜನರಲ್ಲಿ ವಿಶೇಷ ಅರಿವು ಮೂಡಿಸುವ ಜವಾಬ್ದಾರಿಕೆಯನ್ನು ಅನತಿ ಕಾಲದಲ್ಲಿಯೇ ಕೈಗೊಳ್ಳಬೇಕಾಗಿದೆ. ಈ ವಿಷಯದಲ್ಲಿ ಮಹಿಳಾ ಸಂಘಟನೆ ಹಿಂದುಳಿದಿದೆ.

ಪ್ರಶ್ನೆ: ಮಹಿಳೆಯರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಲು ಸರಕಾರ ಏನು ಮಾಡಿದೆ?

* ಅಖಿಲ ಭಾರತ ಮಟ್ಟದಲ್ಲಿ ಮಹಿಳೆಯರಿಗಾಗಿ ರಾಷ್ಟ್ರೀಯ ಆಯೋಗ ಸ್ಥಾಪಿಸಿದಂತೆ, ಪ.ಬಂಗಾಳ ಮತ್ತು ಕೇರಳದಲ್ಲಿ ಮಹಿಳೆಯರಿಗಾಗಿ ರಾಜ್ಯ ಮಟ್ಟದ ಆಯೋಗ ಸ್ಥಾಪಿಸಲ್ಪಟ್ಟಿದೆ. ಈ ಆಯೋಗ ಮಹಿಳೆಯರ ಸಮಸ್ತ ಸಮಸ್ಯೆಗಳನ್ನು ಹಕ್ಕುಗಳನ್ನು ಪರಿಶೀಲಿಸಿ, ರಾಜ್ಯ ಸರಕಾರದ ಧೋರಣೆ, ಯೋಜನೆ ರೂಪಿಸಲು ಸೂಕ್ತ ಮಾರ್ಗದರ್ಶನ ನೀಡುತ್ತಿದೆ. ಇಂತಹ ಆಯೋಗಗಳನ್ನು ಎಲ್ಲಾ ರಾಜ್ಯಗಳಲ್ಲಿ ಸ್ಥಾಪಿಸಬೇಕು.

ಸಾಕ್ಷರತಾ ಆಂದೋಲನದಲ್ಲಿ

ಪ್ರಶ್ನೆ: ಸಾಕ್ಷರತಾ ಆಂದೋಲನದಲ್ಲಿ ಮಹಿಳೆಯರ ಪಾತ್ರವೇನು?

* ಈಗಾಗಲೇ ಪ.ಬಂಗಾಳದ ಬರ್ದ್ವಾನ್, ಹೂಗ್ಲಿ, ಮಿಡ್ನಾಪುರ, ಬೀರಭೂಮಿ, ಬಂಕೂರಾ ಜಿಲ್ಲೆಗಳಲ್ಲಿ ರಾಷ್ಟ್ರೀಯ ಸಾಕ್ಷರತಾ ನಿಯೋಗದ ಮಾರ್ಗದರ್ಶನದಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಕೈಗೊಳ್ಳಲಾಗಿದೆ. 1991 ರಲ್ಲಿ ಪಶ್ಚಿಮ ಬಂಗಾಳಕ್ಕೆ ಸಂಪೂರ್ಣ ಸಾಕ್ಷರತೆಯಲ್ಲಿ ಅತ್ಯಂತ ಯಶಸ್ಸು ಪಡೆದುದಕ್ಕೆ 'ಯುನೆಸ್ಕೋ' ಅಂತರಾಷ್ಟ್ರೀಯ ಪ್ರಶಸ್ತಿ ಗಳಿಸಿದೆ.

ಪುಟ 7ಕ್ಕೆ

"ಬೇಗ ದಿವಾಳಿಯಾಗಲು ಭಾರತಕ್ಕೇ ದಾಡಿ ?"

-- ಜಿ.ಎಸ್. ಮಣಿ



ನರಸಿಂಹರಾವ್ ಸರಕಾರದ 29ನೇ ತಿಂಗಳಲ್ಲಿ

ವಿಶ್ವಬ್ಯಾಂಕ್‌ನ ತಮ್ಮ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ)ನ ತಕರಾರು ಇದು. ಭಾರತಕ್ಕೆ ಈ ಎ.ಡಿ.ಬಿ. ಹಲವು ಸಾಲಗಳನ್ನು ವಿವಿಧ ಯೋಜನೆಗಳಿಗೆ ಮಂಜೂರು ಮಾಡಿದೆ. ಆದರೆ ಈ ಸಾಲಗಳನ್ನು ಉಪಯೋಗಿಸುವಲ್ಲಿ ಭಾರತ ಬಹಳ ಮಂದಗತಿ ತೋರುತ್ತಿದೆ ಎಂಬುದು ಅದರ ಅಸಮಾಧಾನಕ್ಕೆ ಕಾರಣ.

ಈ ಬ್ಯಾಂಕ್‌ನ ಉಪಾಧ್ಯಕ್ಷ ಗುಂತರ್ ಜಿ ಶೂಲ್ಟ್ಜ್ ಭಾರತವನ್ನು ಕೋರಿಯಾ, ಇಂಡೋನೇಶಿಯಾ, ಚೀನಾ, ಪಾಕಿಸ್ತಾನ ಇವೆಲ್ಲವುಗಳಿಗೆ ಹೋಲಿಸಿ ಭಾರತ ಈ ಎಲ್ಲಾ ರಾಷ್ಟ್ರಗಳಿಗಿಂತ ಹಿಂದುಳಿದಿದೆ (ಸಾಲವನ್ನು ಉಪಯೋಗಿಸುವಲ್ಲಿ) ಎಂದಿದೆ. ಆತನ ಪ್ರಕಾರ ಭಾರತ ಉದಾರೀಕರಣ ಪ್ರಾರಂಭಿಸಿದ್ದರೂ ಅದು ಕೆಳಸ್ತರಗಳಿಗೆ ಇಳಿದಿಲ್ಲವಾದ್ದರಿಂದ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿದೆಯಂತೆ.

ಸಾಲ ನೀಡುವವರು ಬೇಗ ಬೇಗ ಸಾಲ ಪಡೆಯಿರಿ. ಇನ್ನೂ ಹೆಚ್ಚು ಸಾಲ ಪಡೆಯಿರಿ ಎಂದೆಲ್ಲ ಹೇಳುವಾಗ ಅವರ ಉದ್ದೇಶದ ಬಗ್ಗೆ ಸಂದೇಹ ಮೂಡುವುದು ಸಹಜವಲ್ಲವೆ?

ಹಾಗೆ ನಿಜದಲ್ಲಿ ಈ ಗುಂತರ್ ಹೇಳಿರುವುದು ಉದಾರೀಕರಣದ ಗತಿ ಬಹಳ ನಿಧಾನವಾಗಿದೆ ಇನ್ನೂ ಹೆಚ್ಚಿನ ವೇಗದಲ್ಲಿ ಉದಾರೀಕರಣವಾಗಬೇಕು ಎಂಬುದೇ ಆಗಿದೆ.

ವಿದೇಶೀ ಬಂಡವಾಳಿಗರಿಗೆ ಪೂರ್ಣ ಯಜಮಾನ್ಯ

ಈಗಾಗಲೇ ವಿದೇಶೀ ಬಂಡವಾಳಿಗರಿಗೆ ಶೇ. 51 ಕ್ಕೂ ಹೆಚ್ಚು ಪಾಲುಗಾರಿಕೆ ದೊರಕಿದೆ. ಅಂದರೆ ವಿದೇಶೀ ಬಂಡವಾಳಿಗರು ಭಾರತದ ಉದ್ದಿಮೆಗಳಲ್ಲಿ ಶೇ 51ಕ್ಕೂ ಹೆಚ್ಚು ಬಂಡವಾಳ ಹೂಡಲು ಸರಕಾರ ಅನುವು ಮಾಡಿಕೊಟ್ಟಿತ್ತು. ಕಂಪನಿಗಳಲ್ಲಿ ಹೆಚ್ಚಿನ ಅಧಿಕಾರ ನೀಡುತ್ತಿದ್ದ ಈ ಕ್ರಮ ವಿದೇಶೀ ಬಂಡವಾಳಿಗರಿಗೆ ಸಾಕಾಗಲಿಲ್ಲವೆನಿಸುತ್ತದೆ. ಅವು ಇನ್ನೂ ಹೆಚ್ಚಿನ ಪಾಲುಗಾರಿಕೆಗೆ ಒತ್ತಾಯಿಸುತ್ತಲೇ ಇದ್ದವು.

ಈಗ ಸರ್ಕಾರ ಯಾವುದೇ ಅಡೆತಡೆಯಿಲ್ಲದೆ ವಿದೇಶೀ ಬಂಡವಾಳಿಗರು ಶೇ. 75 ರವರೆಗೆ ಬಂಡವಾಳದ ಪಾಲು ಹೊಂದಲು ಅನುಮತಿ ನೀಡಲು ನಿರ್ಧರಿಸಿದೆ ಈ ಕ್ರಮ ಬಂದಾಗ ವಿದೇಶೀಯರು ಶೇ. 75 ರ ವರೆಗೆ ಬಂಡವಾಳದ ಪಾಲು ಹೊಂದಲು ಸರ್ಕಾರದ ಅನುಮತಿಯನ್ನು ಪಡೆಯಬೇಕಾಗಿರುವುದಿಲ್ಲವಂತೆ.

ಅಂದರೆ ಇಂತಹ ಕಂಪನಿಗಳು ಪೂರ್ಣವಾಗಿ ವಿದೇಶೀಯರದ್ದಾದಂತೆ. ನಮ್ಮ ದೇಶೀ ಕಂಪನಿಗಳು ಈ ಸಾಮ್ರಾಜ್ಯಶಾಹಿಗಳ ಕಿರಿಯ ಪಾಲುದಾರರಾಗಿ ತಗ್ಗಿ ಬಗ್ಗಿ ನಡೆದುಕೊಳ್ಳಬೇಕು. ಇಲ್ಲವಾದರೆ ಉದ್ದಿಮೆಗಳನ್ನು ಮುಚ್ಚಬೇಕು. ಹೇಗಿದೆ ಉದಾರೀಕರಣದ ಕರಾಮತ್ತು?

ಆರಂಭವಾಗಿದೆ: ಮೈದಾನಕ್ಕಾಗಿ ಹೋರಾಟ

ಉದಾರೀಕರಣದಲ್ಲಿ ಇಂತಹದ್ದೊಂದು ಹಂತ ಈಗ ಪ್ರಾರಂಭವಾಗಿದೆ. ಇಲ್ಲಿಯವರೆಗೆ ಭಾರತ ಸರ್ಕಾರ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಮಣಿಯುತ್ತ ತನ್ನ ಅನುಕೂಲ ನೋಡಿಕೊಂಡು ಉದಾರೀಕರಣದ ಕ್ರಮಗಳನ್ನು ಕೈಗೊಳ್ಳುತ್ತಿತ್ತು. ಈಗ ಉದಾರೀಕರಣದ ಈ ಪ್ರಕ್ರಿಯೆ ಭಾರತ ಸರ್ಕಾರದ ಹತೋಟಿಯಲ್ಲಿದ್ದಂತೆ ಕಾಣುವುದಿಲ್ಲ. ಸರ್ಕಾರ ಸಾಮ್ರಾಜ್ಯಶಾಹಿಗಳ ಕೀಲು ಗೊಂಬೆಯಾಗಿದೆ. ಆದ್ದರಿಂದಲೇ 'ಇನ್ನೂ ಹೆಚ್ಚು ಉದಾರೀಕರಣ, ಹೆಚ್ಚು ವೇಗದಲ್ಲಿ' ಎಂಬೆಲ್ಲ ಮಾತುಗಳು ಬರುತ್ತಿವೆ.

ಈಗ ದೇಶೀ ಬಂಡವಾಳಿಗರು ಉದಾರೀಕರಣದ ವೇಗ, ಅದು ಅವರ ಲಾಭ ನೀಡುವ ಹೊಡೆತ ಇತ್ಯಾದಿಗಳನ್ನೆಲ್ಲ ಗಮನಿಸಿ ಬೆಚ್ಚಿಬಿದ್ದಿದ್ದಾರೆ. ಈ ಅರಿವಿನಿಂದಲೇ ಹಲವು ಉದ್ದಿಮೆಪತಿಗಳು ಮುಂಬೈಯಲ್ಲಿ ಸಭೆ ಸೇರಿ ಇಂತಹ ಬೆಳವಣಿಗೆಯ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಈ ದೇಶೀ ಬಂಡವಾಳಿಗರನ್ನು ಈ ವಿಚಾರಗಳು ಈಗ ಕ್ಕಿಚ್ಚಿನಂತೆ ಸುಡುತ್ತಿವೆ. ಈ ಬೆಂಕಿ ಬೇಗ ಹರಡುತ್ತಲೂ ಇದೆ.

'ಸ್ಪರ್ಧೆಗಿಳಿಯಲು ಮೈದಾನವಿರಬೇಕು' ಎನ್ನುವ ವಾದ ಹೂಡುತ್ತಿದ್ದಾರೆ. ಅವರು ಅಂದರೆ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಅಪಾರವಾದ ಸಂಪನ್ಮೂಲಗಳಿವೆ. ನಮ್ಮ ಬಂಡವಾಳಿಗರಲ್ಲಿ ಇಲ್ಲ. ಇಂತಹವರ ಜೊತೆ ಸ್ಪರ್ಧೆಗಿಳಿದರೆ ನಮ್ಮ ಬಂಡವಾಳಿಗರು ಬದುಕುವುದೆಂತು?

ಒಬ್ಬ ಉದ್ಯಮಪತಿ ಹೇಳುವಂತೆ "ಅಮೇರಿಕದ ಕಂಪನಿಯ ದೊಡ್ಡ ಪಾಲು ಇರುವಲ್ಲಿ ಆ ಕಂಪನಿಯೇ ದೊಡ್ಡಣ್ಣನಾಗುತ್ತದೆ. ಅದು ಹೇಳಿದಂತೆ ಎಲ್ಲವೂ ನಡೆಯುತ್ತದೆ. ಕೇವಲ ಅವರ ಆಡಳಿತ ಮಂಡಳಿಯಲ್ಲಿರಲು ನಾನೇಕೆ ನನ್ನ ಹಣ ಸುರಿಯಲಿ?"

ಇದು ನಮ್ಮ ಬಂಡವಾಳಿಗರ ಸಮಾನತೆಯ ಬಯಕೆಯನ್ನು ತೋರುತ್ತದೆ.

ಇದೇ ವಾದವನ್ನು ಸಣ್ಣ ಮತ್ತು ಗುಡಿ ಕೈಗಾರಿಕೆಗಳು ಹೂಡಿದರೆ?

ತಮ್ಮ ಬುಡವೇ ಅಲ್ಲಾಡಿದಾಗ ಮಾತ್ರ ಸಮಸ್ಯೆಯ ಅರಿವಾಯಿತೇ ಇವರಿಗೆ?

ಹಣಕಾಸು ವಲಯದ ಬಾಗಿಲಲ್ಲಿ ದರೋಡೆಕೋರರು

ಹಣಕಾಸು ವಲಯವನ್ನು ತೆರೆಯುವಂತೆ ಸಾಮ್ರಾಜ್ಯಶಾಹಿಗಳು ಬಹಳ ವರ್ಷಗಳಿಂದ ಒತ್ತಡ ಹೇರುತ್ತಲೇ ಬಂದಿದ್ದಾರೆ. ಈ ವಲಯದ ಖಾಸಗೀಕರಣದ ವಿರುದ್ಧ ಲಕ್ಷ ಲಕ್ಷ ಗಟ್ಟಲೇ ಉದ್ಯೋಗಿಗಳು ಪ್ರತಿಭಟಿಸಿ ಮುಷ್ಕರ ಹೂಡಿದ್ದಾರೆ.

ಸರ್ಕಾರ ಈ ವಲಯದಲ್ಲೇನೂ ಖಾಸಗೀಕರಣವನ್ನು ತರುವುದಿಲ್ಲವೆನ್ನುತ್ತಲೇ ಖಾಸಗೀಕರಣದತ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ. ಬ್ಯಾಂಕಿಂಗ್ ವಲಯಕ್ಕೆ ಆಗಲೇ ನರಸಿಂಹಮ್ ಸಮಿತಿಯ ವರದಿ ಬಂದಿದೆ. ವಿಮಾ ಕ್ಷೇತ್ರಕ್ಕೆ ಇಂತಹದೇ ವರದಿ ನೀಡಲು ಆರ್. ಎನ್. ಮಲ್ಹೋತ್ರ ಸಮಿತಿ ನಿಯುಕ್ತವಾಗಿದೆ. ತೆರೆಯ ಮರೆಯಲ್ಲಿ ಏನೇನು ನಡೆಯುತ್ತಿದೆಯೊ ಗೊತ್ತಿಲ್ಲ.

ಅಮೇರಿಕದ ಬಂಡವಾಳಿಗರ ವಕ್ತಾರರು ಆಗಾಗ ಹಣಕಾಸು ವಲಯವನ್ನೇ ತೆರೆಯುವ ಒತ್ತಾಯ ಮಾಡುತ್ತಲೇ ಬಂದಿದ್ದಾರೆ. ಈಗ ಅಮೇರಿಕದ ಟ್ರೆಝುರಿ ಇಲಾಖೆಯ ಸಹಾಯಕ ಕಾರ್ಯದರ್ಶಿ ವಿಲಿಯಮ್ ಶೇಫರ್ ಡಾ. ಮನಮೋಹನ್ ಸಿಂಗರನ್ನು ಒತ್ತಾಯಮಾಡಿದ್ದಾರೆ.

ಜಗತ್ತಿನ ಅತ್ಯುತ್ತಮ ಅರ್ಥಮಂತ್ರಿ ಸಾಮ್ರಾಜ್ಯಶಾಹಿಗಳ ಸೇವೆಗಾಗಿ ಅಷ್ಟನ್ನು ಮಾಡಲಾರರೆ?

ಸ್ವಾತಂತ್ರ್ಯ ಯಾಚನೆ

ಸ್ವಾತಂತ್ರ್ಯ ಪಡೆದು ನಲವತ್ತೈದು ವರ್ಷಗಳಿಗೂ ಹೆಚ್ಚಾಗಿದೆ. ಆದರೆ ಅದನ್ನು ರಕ್ಷಿಸಿಕೊಳ್ಳುವ ಛಾತಿ ನಮ್ಮ ಸರ್ಕಾರಕ್ಕಿದೆಯೆ?

ದೇಶದ ವಾಣಿಜ್ಯಮಂತ್ರಿ ಶ್ರೀ ಪ್ರಣವ್ ಮುಖರ್ಜಿ ಭಾರತ-ಅಮೇರಿಕದ ಜಂಟಿ ವ್ಯಾಪಾರ ಮಂಡಳಿಯಲ್ಲಿ ಅಮೇರಿಕದ ವ್ಯಾಪಾರಿಗಳಲ್ಲಿ ಯಾಚನೆ ಮಾಡಿದ್ದಾರಂತೆ. 'ನಮ್ಮ ಸ್ವಾತಂತ್ರ್ಯ ಮತ್ತು ನಮ್ಮ ಸಾರ್ವಭೌಮತ್ವ ಉಳಿಸಿಕೊಳ್ಳಲು ಸಹಾಯ ಮಾಡಿ ಎಂದು'

ಉದಾರೀಕರಣದ ಫಲ ಇದು. ಈಗ ನಮ್ಮ ಸರ್ಕಾರದ ಜುಟ್ಟು ಪೂರ್ಣವಾಗಿ ಅವರ ಕೈಯಲ್ಲಿದೆ. ಅವರು ಆಡಿಸಿದಂತೆ ಆಡ ಬೇಕು.

ನಮ್ಮ ಸ್ವಾತಂತ್ರ್ಯ ಸಾರ್ವಭೌಮತ್ವ ಕಟ್ಟಿಕೊಂಡು ಅಮೇರಿಕನ್ನರಿಗೇನಾಗಬೇಕು? ಅವರ ಲಾಭ ಅವರಿಗೆ ಮುಖ್ಯ ಅಲ್ಲವೇ?

ಬದುಕುಳಿಯುವ ಮಟ್ಟದ ಕೂಲಿ ಅತ್ಯಗತ್ಯ - ಪುಟ 3ರಿಂದ

ಸರಾಸರಿ ಕುಟುಂಬಕ್ಕೆ ಒಂದು ತಿಂಗಳಿಗೆ
ದ ಬಗ್ಗೆ ಖರ್ಚು (3 ಯೂನಿಟುಗಳು -
- 10ಯುನಿಟ್,
0.8 ಯುನಿಟ್,
ತಲಾ 0.6 ಯುನಿಟ್
X 3 X 30 = 1012
ರಿ ವರ್ಷಕ್ಕೆ ತಲಾ 18 ಅಡಿಯಂತೆ ಒಟ್ಟು 72
ಗೆ 20ರೂ. ದರದಲ್ಲಿ ತಿಂಗಳ ಖರ್ಚು
ರ್ಚು : 110 ಚದರಡಿಯ ಸರಾಸರಿ
ಮನೆಗೆ ಚದರಡಿಗೆ 3ರೂ. ಯಂತೆ ತಿಂಗಳ
= 300
= 1432)
ರ್ಚುಗಳು (ಉರುವಲು, ಬೆಳಕು, ಹಾಸಿಗೆ,
ಾಗೂ ಶೈಕ್ಷಣಿಕ ಬಾಬ್ತುಗಳಿಗೆ ಕನಿಷ್ಟ ಖರ್ಚು
ಒಟ್ಟು ಖರ್ಚಿನ 25% = 358
ಧಾರಿತ ಕನಿಷ್ಟ ಕೂಲಿ = 1,790.60

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಕನಿಷ್ಟಕೂಲಿ ತಿಂಗಳಿಗೆ 1800 ರೂ. ಇರಬೇಕೆಂದು ಒತ್ತಾಯಿಸುತ್ತದೆ. ಇದು ಮೇಲಿನ ಲೆಕ್ಕಾಚಾರಕ್ಕೆ ಬಹಳ ಹತ್ತಿರವಿದೆ. ಅಖಿಲ ಭಾರತ ಮಟ್ಟದಲ್ಲಿ ಸಿಐಟಿಯು ಅಖಿಲ ಭಾರತ ಬೆಲೆ ಸೂಚ್ಯಂಕದ 800 ಪಾಯಿಂಟ್ ಮಟ್ಟದಲ್ಲಿ 1,050 ರೂ. ಕೇಳುತ್ತಿದೆ. ಅಖಿಲ ಭಾರತ ಸೂಚ್ಯಂಕ 1982 ರಲ್ಲಿ ಸರಾಸರಿ 230 ಪಾಯಿಂಟ್ ಇತ್ತು. 1993 ರಲ್ಲಿ 1960 ರ ಬೆಲೆಗಳ ಆಧಾರದಲ್ಲಿ ಈ ಸರಾಸರಿ 1,245 ಪಾಯಿಂಟ್ ಆಗುತ್ತದೆ. ಈ ಮಟ್ಟದಲ್ಲಿ ಕನಿಷ್ಟ ಕೂಲಿ 1,740 ರೂ. ಅಥವಾ ದಿನಕ್ಕೆ 67 ರೂ. ಆಗುತ್ತದೆ. ಬೆಲೆಯೇರಿಕೆಯನ್ನು ಸರಿಹೊಂದಿಸಲು ಪಾಯಿಂಟಿಗೆ 6 ಪೈಸೆ ದರದಲ್ಲಿ ತುಟ್ಟಿಭತ್ಯೆ ಕೊಡಬೇಕಾಗುತ್ತದೆ.


ಇದು ಕೂಡಾ ಮೇಲಿರುವ ನಮ್ಮ ಲೆಕ್ಕಾಚಾರಕ್ಕೆ ಹತ್ತಿರ ಬರುತ್ತದೆ.

ಈ ಲೆಕ್ಕಾಚಾರಗಳನ್ನು ಪಕ್ಕದಲ್ಲಿ ತೋರಿಸಿದಂತೆ ಪಟ್ಟಿ ಮಾಡಬಹುದು.

ಈ ಲೆಕ್ಕಾಚಾರಗಳ ಸರಾಸರಿ ದಿನಕ್ಕೆ 50 ರೂ. ಆಗುತ್ತದೆ ಇದು ದಿಲ್ಲಿಯಲ್ಲಿ ಈಗಾಗಲೇ ಕೊಡುತ್ತಿರುವ ಕನಿಷ್ಠ ಕೂಲಿ ಅಲ್ಲದೆ ರಾಜ್ಯ ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಶನ್‌ನ ಲೆಕ್ಕಾಚಾರದ ಪ್ರಕಾರದ ಕನಿಷ್ಟ ಕೂಲಿಗಿಂತ ಕಡಿಮೆ.

ಹೀಗಿರುವಾಗ ಸರ್ಕಾರ ತಾನೇ ಲೆಕ್ಕ ಹಾಕಿರುವುದಕ್ಕಿಂತ ಮಾಲಿಕರೇ ಸ್ವತಃ ಕೇಳುತ್ತಿರುವ ಮಟ್ಟಕ್ಕಿಂತ ಕಡಿಮೆ ಕನಿಷ್ಟ ಕೂಲಿಯನ್ನು ನೋಟಿಫೈ ಮಾಡುವುದಕ್ಕೆ ಯಾವುದೇ ಸಮರ್ಥನೆಯಿಲ್ಲ ಇದನ್ನು ತಕ್ಷಣ ಪ್ರಕಟಿಸಬೇಕು. ಇದು ಕೇವಲ ಬದುಕುಳಿಯುವುದಕ್ಕೂ ಅತೀ ಅಗತ್ಯ. ಕರ್ನಾಟಕದಲ್ಲಿ ಇದಕ್ಕಿಂತ ಕಮ್ಮಿ ಕೂಲಿ ಕೊಟ್ಟು ನಡೆಯಲು ನಡೆಸುವ ಅವಕಾಶ ಯಾವ ಉದ್ದಿಮೆಗೂ ಇರಬಾರದು ಎಂದು ಸಿಐಟಿಯು ಆಗ್ರಹಪಡಿಸುತ್ತದೆ.

ಮುಂದುವರಿಯುತ್ತದೆ



ಕನಿಷ್ಟ ಕೂಲಿ ಮಟ್ಟ
(ಕರ್ನಾಟಕದಲ್ಲಿ ಸರಾಸರಿ ಬೆಲೆಸೂಚ್ಯಂಕ 1309 ಪಾಯಿಂಟಿನಲ್ಲಿ)

	ದಿನಕೂಲಿ ರೂ.	ತುಟ್ಟಿಭತ್ಯೆದಿನಕ್ಕೆ ಪ್ರತಿಪಾಯಿಂಟ್
ಬಡತನಮಟ್ಟದ ಆಧಾರದಲ್ಲಿ (ಕನಿಷ್ಟಕೂಲಿ ಸಲಹಾ ಸಮಿತಿ)		
i) ಸಿನಿಮಾ ಕಾರ್ಮಿಕರಿಗೆ	46.64	3.5
ii) 1993ರ ಶಿಫಾರಸಿನಂತೆ	37.55	3.5
ಬರೀ ಬಡತನ ಮಟ್ಟದಲ್ಲಿ (2100 ಕ್ಯಾಲರಿ)	25.03	2.5
ಸುಧಾರಿತ ಬಡತನ ಮಟ್ಟದಲ್ಲಿ (2800 ಕ್ಯಾಲರಿ)	44.00	3.5
ಅಗತ್ಯ ಮಟ್ಟದಲ್ಲಿ		
ರಾಜ್ಯ ಕಾರ್ಮಿಕ ವಿಭಾಗ (ಮಾರ್ಚ್ 1986)	51.44	4.0
ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಶನ್(1981)	54.60	3.5
ಸಿಐಟಿಯು ರಾಜ್ಯ ಸಮಿತಿ	68.00	5.0
ಸಿಐಟಿಯು ಅಖಿಲ ಭಾರತ (ಅಖಿಲ ಭಾರತ ಸೂಚ್ಯಂಕ ಆಧಾರದಲ್ಲಿ)	67.00	6.0
ಈ ಎಲ್ಲದರ ಸರಾಸರಿ	50.00	4.0



ಬಿಹಾರದಲ್ಲಿ ಐದು ಲಕ್ಷ ರೈತ-ಕೂಲಿಗಾರರ ಬೃಹತ್ ರ್‍ಯಾಲಿ

ಭೂ ಸುಧಾರಣೆ-ಕನಿಷ್ಟ ಕೂಲಿಗೆ ಒತ್ತಾಯ; ಪಟ್ಟಭದ್ರಹಿತಾಸಕ್ತಿಗಳಿಗೆ ಎಚ್ಚರಿಕೆ

ನವೆಂಬರ್ 8. ಪಾಟ್ನಾ ರೈತರ, ಕೃಷಿ ಕೂಲಿಗಾರರ ಒಂದು ದೊಡ್ಡ ಸಾಗರವನ್ನೇ ಕಂಡಿತು. ಐದು ಲಕ್ಷ ಜನ ರಾಜ್ಯದಲ್ಲಿ ತೀವ್ರ ಭೂ ಸುಧಾರಣೆ ತರಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸಿದರು. ಇದು ಮೂವತ್ತು ಸಾವಿರ ಎಕ್ರೆಗೂ ಹೆಚ್ಚು ಭೂಮಿಯನ್ನು ವಶಪಡಿಸಿಕೊಂಡ ಇತ್ತೀಚಿನ ಭೂ ಹೋರಾಟದ ಯಶಸ್ಸಿನ ಸಂಕೇತವೂ ಆಗಿತ್ತು. ಮುಂದೆ ಇನ್ನೂ ದೊಡ್ಡ ಭೂ ಹೋರಾಟಗಳು ನಡೆಯಲಿವೆ ಎಂದು ಪಟ್ಟಭದ್ರಹಿತಾಸಕ್ತಿಗಳಿಗೆ ನೀಡಿದ ಎಚ್ಚರಿಕೆಯೂ ಆಗಿತ್ತು.

ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ರಾಮನಾರಾಯಣ್ ಗೋಸ್ವಾಮಿ ಹಾಗೂ ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲಾ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಗಣೇಶ್ ಶಂಕರ್ ವಿದ್ಯಾರ್ಥಿ ಹಾಗೂ ಇತರ ಮುಖಂಡರು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. 1994 ದೇಶಾದ್ಯಂತ ಭೂ ಹೋರಾಟದ ವರ್ಷವೆಂದು ಗೋಸ್ವಾಮಿಯವರು, ಹನ್ನನ್ ಮೊಲ್ಲಾ ಘೋಷಿಸಿದರು.

ಬಿಹಾರದ ರೈತಾಪಿ ಜನ ಒಂದು ಪ್ರಮುಖ ಹೋರಾಟ ನಡೆಸಿದ್ದಾರೆ ಎಂದು ಅಭಿನಂದಿಸಿದ ಭಾಷಣಕಾರರು ರಾಷ್ಟ್ರಾದ್ಯಂತ ಭೂ ಸುಧಾರಣೆಗಳನ್ನು ಜ್ಯಾರಿಗೆ ತರುವ ಮಣ ಸ್ಸಿಲ್ಲದ ರಾಜ್ಯದ ಆಡಳಿತದ ಮೇಲೆ ಒತ್ತಡ ಹಾಕಲು ಇನ್ನಷ್ಟು ದೊಡ್ಡ ಹೋರಾಟ ಬೇಕು ಎಂದರು. ಸರಿಯಾಗಿ ಕಾರ್ಯ ನಿರ್ವಹಿಸುವ ಪಂಚಾಯತ್ ವ್ಯವಸ್ಥೆ ಬೇಕು, ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ ನಿಗದಿಪಡಿಸಬೇಕು, ಭೂ ಹೋರಾಟದಲ್ಲಿ ಸುಳ್ಳು ಕೇಸ್‌ಗಳಿಗೆ ಒಳಗಾದವರ ಮೇಲಿನ ಕೇಸ್‌ಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ರ್‍ಯಾಲಿ ಆಗ್ರಹಪಡಿಸಿತು.

ರ್‍ಯಾಲಿಗೆ ಮೊದಲು ಒಂದು ನಿಯೋಗ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವ್‌ರವನ್ನು ಭೇಟಿ ಮಾಡಿ ಸ್ಮರಣ ಪತ್ರ ಸಲ್ಲಿಸಿತು. ಇತ್ತೀಚಿನ ಹೋರಾಟದಲ್ಲಿ ಪೋಲೀಸ್ ಗೋಲೀಬಾರಿಗೆ ಬಲಿಯಾದ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡಬೇಕು, ಭೂ ಸುಧಾರಣೆಯ ಬಗ್ಗೆ ನೀಡಿದ ಆಶ್ವಾಸನೆಗಳನ್ನು ಜ್ಯಾರಿಗೊಳಿಸಬೇಕು, ಕನಿಷ್ಟ ಕೂಲಿಯ ಗ್ಯಾರಂಟಿ ನೀಡಬೇಕು ಹಾಗೂ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಸರಿಯಾದ ಪರಿಹಾರ ಒದಗಿಸಬೇಕು ಎಂದು ಈ ಸ್ಮರಣ ಪತ್ರದಲ್ಲಿ ಒತ್ತಾಯ ಮಾಡಲಾಗಿದೆ.

ನಾಸಿಕ್: ಬೃಹತ್ ಆದಿವಾಸಿ ರ್‍ಯಾಲಿ

ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿ ಸುರಗಣಾ ಎಂಬ ತಾಲೂಕು ಮುಖ್ಯ ಸ್ಥಳದಲ್ಲಿ ಅಕ್ಟೋಬರ್ 18ರಂಧು ಆದಿವಾಸಿಗಳ ಒಂದು ಬೃಹತ್ ರ್‍ಯಾಲಿ ನಡೆಯಿತು. 25 ಸಾವಿರ ಜನ ಇದರಲ್ಲಿ ಭಾಗವಹಿಸಿದ್ದರು. ನಾಸಿಕ್ ಜಿಲ್ಲೆಯಲ್ಲಿ ಸಿಪಿಐ(ಎಂ) ವಿರುದ್ಧ ಕಾಂಗ್ರೆ, ಬಿಜೆಪಿ, ಶಿವಸೇನೆಯಷ್ಟೇ ಅಲ್ಲ, ಜನತಾದಳ ಕೂಡಾ ಸೇರಿಕೊಂಡ ವಿಚಿತ್ರ ಮೈತ್ರಿಯ ವಿರುದ್ಧ ಸುತ್ತ ಮುತ್ತಲಿನ ಆದಿವಾಸಿಗಳ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ ರ್‍ಯಾಲಿಯಿದು. ಕಳೆದ ವರ್ಷ ಬರ ಬಂದಾಗ 15 ಸಾವಿರ ಆದಿವಾಸಿಗಳ ಹೋರಾಟ, ಈ ಬಾರಿ ದಿಂಡೋರಿ ತಹಸೀಲ್‌ನಲ್ಲಿ ಭೂ ಹೋರಾಟ, ಜತೆಗೆ ನಾಸಿಕ್ ನಗರದಲ್ಲಿ ಅಸಂಘಟಿತ ಕಾರ್ಮಿಕರ ನಡುವೆ ಸಿಐಟಿಯುನ ಹೆಚ್ಚುತ್ತಿರುವ ಪ್ರಭಾವ ಇದರಿಂದ ಭಯಭೀತರಾದ ಪಟ್ಟಭದ್ರ ಹಿತಾಸಕ್ತಿಗಳ ಪರವಾಗಿ ಈ ವಿಚಿತ್ರ ಕೂಟ ಏರ್ಪಟ್ಟಿತ್ತು. ಇವರು ಇಲ್ಲಿನ ಸಿಪಿಐ(ಎಂ) ಎಂಎಲ್‌ಎ ಪಾಂಡುಗವಿತ್‌ರನ್ನು ಟಾಡಾದಡಿ ಬಂಧಿಸಬೇಕು ಹಾಗೂ ಸಿಐಟಿಯು ಮುಖಂಡ ಡಾ.ಡಿ.ಎಸ್.ಕರಾಡ್ ವಿರುದ್ಧ ತೀವ್ರ ಪೋಲೀಸ್ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ 3500 ಮಂದಿ ನಡೆಸಿದ ಮತಪ್ರದರ್ಶನಕ್ಕೆ ಕೊಟ್ಟ ಉತ್ತರ ಇದಾಗಿತ್ತು.

ಈ ಪಟ್ಟಭದ್ರ ಹಿತಾಸಕ್ತಿಗಳ ಮತ ಪ್ರದರ್ಶನದ ಮೊದಲು ಇನ್ನೊಂದು ಘಟನೆ ನಡೆದಿತ್ತು. ಇಲ್ಲಿ ಆರ್‌ಎಸ್‌ಎಸ್ ನಡೆಸುವ "ವನವಾಸಿ ಕಲ್ಯಾಣ್ ಆಶ್ರಮ"ದಲ್ಲಿ ಒಬ್ಬಾಕೆ ಆದಿವಾಸಿ ಶಾಲಾ ಹುಡುಗಿಯ ಸಾವು ಉಂಟಾಯಿತು. ಡಾಕ್ಟರು ಇಂಜೆಕ್ಷನ್ ಕೊಟ್ಟ ಕೆಲವೇ ನಿಮಿಷಗಳಲ್ಲಿ ಈ ಸಾವು ಉಂಟಾಯಿತು. ಆಶ್ರಮದ ಆಡಳಿತ ಇದನ್ನು ಪೋಲೀಸಿಗೆ ತಿಳಿಸುವ ಬದಲು ಹುಡುಗಿಯ ತಂದೆಗೆ ದುಡ್ಡು ಕೊಟ್ಟು ಅದನ್ನು ಮುಚ್ಚಿಹಾಕಲು ಯತ್ನಿಸಿದರು. ಇದನ್ನು ಒಪ್ಪದ ಹುಡುಗಿಯ ತಂದೆ ಸಿಪಿಐ(ಎಂ)ಗೆ ಈ ಬಗ್ಗೆ ದೂರು ನೀಡಿದ. ಈ ಆರ್‌ಎಸ್‌ಎಸ್ ಆಶ್ರಮದಲ್ಲಿ ಇಂತಹ ಇನ್ನೊಂದು ಘಟನೆ ನಡೆದಿತ್ತು. ಇದರ ಹಲವು ಕಾರಣಗಳಿಗೂ ಇದು ಕುಖ್ಯಾತವಾಗಿತ್ತು. ಆದ್ದರಿಂದ ಈ ಘಟನೆಯ ಬಗ್ಗೆ ಆಮೂಲಾಗ್ರ ತನಿಖೆಯಾಗಬೇಕು ಎಂದು ಒತ್ತಾಯಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಒಂದು ಮತಪ್ರದರ್ಶನ ನಡೆಯಿತು. ಕೋಮುವಾದಿಗಳು ಇದರಿಂದ ಕುಪಿತರಾಗಿದ್ದರು.

ಕೇವಲ 7000 ನಿವಾಸಿಗಳಿರುವ ಸುರಗಣಾದಲ್ಲಿ 25 ಸಾವಿರ ಆದಿವಾಸಿಗಳ ಈ ಮತಪ್ರದರ್ಶನ ಪಟ್ಟಭದ್ರ ಹಿತಾಸಕ್ತಿಗಳನ್ನು ನಡುಗಿಸಿದೆ. ಸಾರ್ವಜನಿಕ ರ್‍ಯಾಲಿಯನ್ನುದ್ದೇಶಿಸಿ ಸಿಪಿಐ(ಎಂ) ಕಾರ್ಯದರ್ಶಿ ಪ್ರಭಾಕರ್ ಸಾಂಝ್ಗಿರಿ, ರಾಜ್ಯ ಎಐಕೆಎಸ್ ಕಾರ್ಯದರ್ಶಿ ನರೇಂದ್ರ ಮಾಲುಸರೆ ಮತ್ತಿತರರು ಮಾತನಾಡಿದರು.

ಲಾತೂರು: ಭೂಕಂಪ ಪೀಡಿತರ ನೆರವಿಗೆ ಎಡಪಕ್ಷಗಳು

ಮಹಾರಾಷ್ಟ್ರದ ಈ ಪ್ರದೇಶದಲ್ಲಿ ನಡೆದ ಭೂಕಂಪದಲ್ಲಿ ಬದುಕುಳಿದವರ ಮೇಲೆ ಈ ಘಟನೆ ಮಾಸಲಾಗದ ಛಾಪು ಹಾಕಿದೆ. ಅಷ್ಟೇ ಅಲ್ಲ ಪರಿಹಾರ ಕಾರ್ಯಕ್ರಮಗಳಲ್ಲಿ ಅಧಿಕಾರಶಾಹಿ ಅದಕ್ಷತೆ ಹಾಗೂ ಹೃದಯಹೀನತೆ ತಾವು ಏಕಾದರೂ ಬದುಕುಳಿದೆವೋ ಎಂದು ಅವರು ಕಳವಳಪಡುವಂತಾಗಿದೆ. ಪರಿಹಾರ ಕ್ರಮಗಳಲ್ಲಿ ಆಗಲೇ ಭ್ರಷ್ಟಾಚಾರದ ಗಬ್ಬು ವಾಸನೆ ಹರಡಲಾರಂಭಿಸಿದೆ. ರಾಜ್ಯ ಸರಕಾರ ಇತ್ತ ಆಶ್ವಾಸನೆಗಳು ಮಣ್ಣು ಪಾಲಾಗಲಾರಂಭಿಸಿದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಪರಿಹಾರ ಕೆಲಸಗಳಲ್ಲಿ ತೊಡಗಿರುವ ಎಡಪಕ್ಷಗಳ ಕಾರ್ಯಕರ್ತರು ಸಂಘಟಿತ ಮಧ್ಯಪ್ರವೇಶ ನಡೆಸಿದ್ದಾರೆ. ಸಿಪಿಐ(ಎಂ), ಲಾಲ್ ನಿಶಾನ್ ಪಾರ್ಟಿ, ಸಿಪಿಐ, ಪಿಡಬ್ಲ್ಯುಪಿ ಹಾಗೂ ಜನತಾದಳ ಒಟ್ಟಾಗಿ ಯಾವ ಪ್ರಮಾಣದ ಪರಿಹಾರ ಬೇಕು ಎಂಬ ಬಗ್ಗೆ ಸರ್ವೆ ನಡೆಸುತ್ತಿದ್ದಾರೆ. ಗ್ರಾಮ ಮಟ್ಟದ ಸಮಿತಿಗಳನ್ನು ರಚಿಸಿಕೊಂಡಿದ್ದಾರೆ. ಅಕ್ಟೋಬರ್ 6ರಂದು ಭೂಕಂಪ ಪೀಡಿತರ ಒಂದು ಸಭೆಯನ್ನು ಕರೆದಿದ್ದರು. ಅದರಲ್ಲಿ 150 ಹಳ್ಳಿಗಳ 2000 ಮಂದಿ ಬಂದು ಶಮ್ಮಿಕಳ್ಳ ಕಾರ್ಯಾಗ್ಯಗಳನ್ನು ತೋಡಿಕೊಂಡರು. ಈ ಸಭೆ ಮೂರು ನಿರ್ಣಯಗಳನ್ನು ಅಂಗೀಕರಿಸಿತು. 1. ಭೂಕಂಪದಲ್ಲಿ ಮಡಿದವರಿಗೆ ಸಂತಾಪ, 2. ಭೂಕಂಪ ಪರಿಹಾರದಲ್ಲಿ ನೆರವು ನೀಡಿದವರಿಗೆಲ್ಲಾ ಧನ್ಯವಾದ ಹಾಗೂ 3. ಈ ವಿಪತ್ತಿನ ಗಳಿಗೆಯಲ್ಲೂ ವಿಷವುಗುಳಲು ಯತ್ನಿಸಿದ ಕಾವಿಪಡೆಗಳ ಸಮಯಸಾಧಕತನಕ್ಕೆ ಖಂಡನೆ.

ಈ ಸಭೆ ಹನ್ನೊಂದು ಬೇಡಿಕೆಗಳ ಒಂದು ಒತ್ತಾಯವನ್ನು ಸರಕಾರದ ಮುಂದಿಟ್ಟಿದೆ. ಇದರಲ್ಲಿ ಹತ್ತು ತಿಂಗಳಿಂದ ಮುಚ್ಚಿರುವ ಕಿಲಾರಿಯ ಸಕ್ಕರೆ ಕಾರ್ಖಾನೆಯನ್ನು ಯಾವುದೇ ರಾಜಕೀಯ ಒತ್ತಡಗಳಿಗೆ ಹೆದರದೆ ಮತ್ತೆ ಆರಂಭಿಸಿ ಭೂಕಂಪ ಪೀಡಿತರಿಗೆ ಹೊಸ ಭರವಸೆ ನೀಡಬೇಕೆಂಬ ಬೇಡಿಕೆಯೂ ಸೇರಿದೆ. ಗ್ರಾಮ ಮಟ್ಟದಲ್ಲಿ ಜನತಾ ಸಮಿತಿಗಳನ್ನು ರಚಿಸಿಕೊಂಡು ಸೂಕ್ತ ಪರಿಹಾರದ ಹಂಚಿಕೆಯಾಗುವಂತೆ, ಪರಿಹಾರ ಕ್ರಮಗಳಲ್ಲಿ ಭ್ರಷ್ಟಾಚಾರದಿಂದ ಜನಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವ ಬಗ್ಗೆ ಯೋಚಿಸಲಾಗುತ್ತಿದೆ. ಭೂಕಂಪ ಪೀಡಿತ ಜನಸಾಮಾನ್ಯರ ನೈಜಸಮಸ್ಯೆಗಳ ಸುತ್ತ ಒಂದು ಪ್ರಜಾಪ್ರಭುತ್ವ ಆಂದೋಲನ ಬೆಳೆಯುತ್ತಿದೆ.

ಕಲ್ಕತ್ತೆಯಲ್ಲಿ ಅಕ್ಟೋಬರ್ ಕ್ರಾಂತಿ ಸ್ಮರಣೆ

ಅಕ್ಟೋಬರ್ ಕ್ರಾಂತಿಯ 76ನೇ ವಾರ್ಷಿಕೋತ್ಸವವನ್ನು ಪಶ್ಚಿಮ ಬಂಗಾಳದಲ್ಲೆಲ್ಲಾ ಆಚರಿಸಲಾಯಿತು. ನವಂಬರ್ 7ರ ಬೆಳಿಗ್ಗೆ ಎಡರಂಗದ ಮುಖಂಡರು ಕಲ್ಕತ್ತೆಯಲ್ಲಿರುವ ಲೆನಿನ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಆ ಪ್ರದೇಶವಿಡೀ ಕೆಂಪು ಪತಾಕೆಗಳಿಂದ ಅಲಂಕೃತವಾಗಿತ್ತು. ಸಿಪಿಐ(ಎಂ) ರಾಜ್ಯ ಕಚೇರಿಯನ್ನು ಅಲಂಕರಿಸಲಾಗಿತ್ತು. ಪಕ್ಷದ ಕಚೇರಿಗಳಲ್ಲಿ ಕೆಂಬಾವುಟ ಹಾರಿಸಲಾಯಿತು. "ಗಣಶಕ್ತಿ" ದೈನಿಕದ ಅಕ್ಟೋಬರ್ ಕ್ರಾಂತಿ ವಿಶೇಷಾಂಕದ ಮಾರಾಟದ ವಿಶೇಷ ಕಾರ್ಯಕ್ರಮದವನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿತ್ತು. ಕಲ್ಕತ್ತಾ ವಿಶ್ವವಿದ್ಯಾಲಯದ ಶತಮಾನೋತ್ಸವ ಸಭಾಂಗಣದಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಈಗಾಗಲೇ ವರದಿಯಾಗಿರುವಂತೆ ಒಂದು ಬೃಹತ್ ರಾಜಕೀಯ-ಸೈದ್ಧಾಂತಿಕ ಪ್ರಚಾರ ಹಾಗೂ ಅಧ್ಯಯನವನ್ನು ಪ್ರತಿ ಹಂತದಲ್ಲೂ ರಾಜ್ಯಾದ್ಯಂದ ನಡೆಸಲು ಯೋಜಿಸಲಾಗಿದೆ.

ವಿಕ್ರಾಂತ್ ಟೈರ್ಸ್ ಕಾರ್ಮಿಕರ ವಿನೂತನ ಮೆರವಣಿಗೆ ಕಾರ್ಖಾನೆಯನ್ನು ದಕ್ಷತೆಯಿಂದ ನಡೆಸಲು ಒತ್ತಾಯ

ಸಾರ್ವಜನಿಕ ಉದ್ದಿಮೆಗಳಲ್ಲೊಂದಾದ ವಿಕ್ರಾಂತ್ ಟೈರ್ಸ್ ಮೈಸೂರಿನಲ್ಲಿದೆ. ಈ ಕಾರ್ಖಾನೆಯು 91-92ನೇ ಸಾಲಿಗೆ 12 ಕೋಟಿ ರೂಗಳ ಲಾಭ ಗಳಿಸಿ 92-93ರಲ್ಲಿ ಆರು ಕೋಟಿ ರೂ. ನಷ್ಟ ಅನುಭವಿಸಿದೆ. ಈ ನಷ್ಟಕ್ಕೆ ಕಾರ್ಮಿಕರಂತೂ ಖಂಡಿತ ಕಾರಣರಲ್ಲ. ಇದಕ್ಕೆ ಸರಕಾರದ ಆಡಳಿತ ವರ್ಗವೇ ಕಾರಣ. ಮೊಟ್ಟ ಮೊದಲನೆಯದಾಗಿ ಮೇಲಿಂದ ಮೇಲೆ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರ ವರ್ಗಾವಣೆ, ಅದಕ್ಷ ಆಡಳಿತ ವ್ಯವಸ್ಥೆ, ತುಂಬಿ ತುಳುಕುತ್ತಿರುವ ಭ್ರಷ್ಟಾಚಾರ, ದೇಜವಾಬ್ದಾರಿ, ಅವ್ಯವಹಾರಗಳು, ಮಾರುಕಟ್ಟೆಯ ಕೊರತೆ, ದುಂದು ವೆಚ್ಚ ದಕ್ಷ ತಂತ್ರಜ್ಞಾನವಿಲ್ಲದಿರುವುದು, ಅದಕ್ಷ ಮಾರುಕಟ್ಟೆ ಅಧಿಕಾರಿಗಳು, ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಪ್ರಾರಂಭಗೊಂಡ ರೇಡಿಯಲ್ ಟೈರ್ಸ್ ಘಟಕಕ್ಕೆ ಸರಕಾರ ವಿಶೇಷ ರಿಯಾಯಿತಿ ನೀಡದಿರುವುದು, ಇದು ಸಾಲದೆಂಬಂತೆ ಕೆಎಸ್‌ಆರ್‌ಟಿಸಿ ಮತ್ತು ಸರಕಾರದ ಅಧೀನದಲ್ಲಿರುವ ವಾಹನಗಳಿಗೆ ಕಡಿಮೆ ಪ್ರಮಾಣದ ಟೈರ್ಸ್ ಬಳಕೆ ಇವೆಲ್ಲವೂ ನಷ್ಟಕ್ಕೆ ಕಾರಣಗಳಾಗಿವೆ. ಇವೆಲ್ಲವನ್ನುತಡೆಗಟ್ಟಲು ಈ ಕಾರ್ಖಾನೆಯ ಕಾರ್ಮಿಕರು ಸೆಪ್ಟೆಂಬರ್ 10ರಂದು ವಿಧಾನಸೌಧ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್(ಸಿಐಟಿಯು) ನವರು ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ನಿಂದ ಹೊರಟ 2000 ಕಾರ್ಮಿಕರ ಮೆರವಣಿಗೆಯ ನೇತೃತ್ವವನ್ನು ಸಂಘದ ಅಧ್ಯಕ್ಷ ಹಾಗೂ ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ಎಸ್.ಸೂರ್ಯನಾರಾಯಣರಾವ್, ಸಂಘದ ಪದಾಧಿಕಾರಿಗಳು ವಹಿಸಿದ್ದರು. ಮೆರವಣಿಗೆಯು ಕಬ್ಬನ್‌ಪಾರ್ಕ್‌ನಲ್ಲಿ ಸಮಾವೇಶಗೊಂಡಿತು. ಸಭೆಯನ್ನುದ್ದೇಶಿಸಿ ಸೂರಿಯವರು ಮಾತನಾಡುತ್ತಾ ವಿಕ್ರಾಂತ್ ಟೈರ್ಸ್ ಕಾರ್ಮಿಕರ ವಿಧಾನಸೌಧ ಚಲೋ ಕಾರ್ಮಿಕ ರಂಗದಲ್ಲಿಯೇ ಆದರ್ಶವಾದದ್ದು. ಏಕೆಂದರೆ ಕಾರ್ಮಿಕರ ಬೇಡಿಕೆ ವೇತನ ಪರಿಷ್ಕರಣೆಯಾಗಲೀ, ಬೋನಸ್‌ಗಾಗಿಯಾಗಲೀ ಅಲ್ಲ. ಇದು ಕಾರ್ಖಾನೆಯು ದಕ್ಷ [illegible] ಯಲೆಂದು ಒತ್ತಾಯಿಸಿ ಎಲ್ಲಾ [illegible] ಂದು ದಿನದ ವೇತನ ಕಳೆದು [illegible] ಸುವಳಿ ನಡೆಸುತ್ತಿರುವುದರ [illegible] ದ್ಯ ಹಾಗೂ ರಾಜ್ಯ ಸರಕಾ [illegible] ಬೇಡಿಕೆಗಳನ್ನು ಈಡೇರಿಸಬೇಕೆಂದರು.

ಈ ಸಭೆಯನ್ನುದ್ದೇಶಿಸಿ ಜನತಾದಳದ ವೇದಾಂತ ಹೆಮ್ಮಿಗ್ಗೆ, ಮೈಸೂರು ವಲಯ ಪ್ರ. ಕಾರ್ಯದರ್ಶಿ ಕೃಷ್ಣ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್, ಮೈಕೋ ಕಾರ್ಮಿಕ ಸಂಘದ ಪ್ರ.ಕಾರ್ಯದರ್ಶಿಯಾದ ಶಂಕರೇಗೌಡ ಮುಂತಾದವರು ಮಾತನಾಡಿದರು. ಸಂಘದ ಸಹ ಕಾರ್ಯದರ್ಶಿ ಕೆ.ವೆಂಕಟ ಸುಬ್ರಹ್ಮಣ್ಯಂರವರು ಮಾತನಾಡಿ ಈ ವಿಧಾನಸೌಧ ಚಲೋಗೆ ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು.

ಕಾಂ.ಸೂರಿಯವರ ನೇತೃತ್ವದಲ್ಲಿ ಸಂಘದ ಅಧ್ಯಕ್ಷರಾದ ಜೆ.ಜಯರಾಮು, ಪ್ರ. ಕಾರ್ಯದರ್ಶಿ ಕೆ.ಶಿವಪ್ಪ, ಉಪಾಧ್ಯಕ್ಷರುಗಳಾದ ಎಂ.ಶಿವಕುಮಾರ್, ಎಂ.ಎಸ್. ರಾಮು, ಜಂಟಿ ಕಾರ್ಯದರ್ಶಿಗಳಾದ ಕೆ.ವೆಂಕಟಸುಬ್ರಹ್ಮಣ್ಯ, ಪಿ.ಈರೇಗೌಡ, ಖಜಾಂಚಿ ಎಸ್.ಜಿ. ಶಿವಕುಮಾರ್‌ರವರನ್ನೊಳಗೊಂಡ ನಿಯೋಗವು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿಯನ್ನು ಅರ್ಪಿಸಿ ಸಮಸ್ಯೆಗಳನ್ನು ಚರ್ಚಿಸಿತು. ಮುಖ್ಯಮಂತ್ರಿಗಳು ಮನವಿಯನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ 'ಭರವಸೆ' ಇತ್ತರು.

ಡಿವೈಎಫ್‌ಐನ ಸ್ಥಾಪನಾ ದಿನಾಚರಣೆ

ಧಾರವಾಡ : ಡಿವೈಎಫ್‌ಐನ 13ನೇ ಸ್ಥಾಪನಾ ದಿನಾಚರಣೆಯನ್ನು ನವಂಬರ್ 3ರಂದು ಡಿವೈಎಫ್‌ಐನ ಧಾರವಾಡ ಜಿಲ್ಲಾ ಸಂಘಟನಾ ಸಮಿತಿ ಆಶ್ರಯದಲ್ಲಿ ಹಳೇ ಹುಬ್ಬಳ್ಳಿಯಲ್ಲಿ ಸಿಐಟಿಯು ಕಛೇರಿಯಲ್ಲಿ ನಡೆಸಲಾಯಿತು.

ಜಿ. ಗಂಗಾಧರ್‌ರವರು ಧ್ವಜಾರೋಹಣವೊಂದಿಗೆ ಆರಂಭವಾದ ಈ ಸಭೆಯಲ್ಲಿ ವಿಮಾ ನೌಕರರ ಸಂಘದ ಎಂ.ಕೆ. ದೇಶಪಾಂಡೆ, ಕಾರ್ಮಿಕ ಮುಂದಾಳು ನಿತ್ಯಾನಂದ ಸ್ವಾಮಿ, ಎಂ. ಸದಾನಂದ ಇವರುಗಳು ಭಾಗವಹಿಸಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಜಿ.ಗಂಗಾಧರ್ ವಹಿಸಿದ್ದರು.

ಜಿಲ್ಲಾ ಸಂಚಾಲಕರಾದ ಬಸವರಾಜ ಬಜಂತ್ರಿಯವರು ಸ್ವಾಗತ ಮತ್ತು ಪ್ರಸ್ತಾವನೆ ಮಾಡುತ್ತಾ ಡಿವೈಎಫ್‌ಐನ ಸಾಧನೆಗಳನ್ನು ತಿಳಿಸುತ್ತಾ ನಮ್ಮ ಈ ಸಂಘಟನೆಯು ಪ್ರಸ್ತುತ ನಿರಾಸಾಜನಕವಾಗಿರುವ ಯುವಜನರ ಭವಿಷ್ಯಕ್ಕೆ ಹೊಸ ಭರವಸೆಯಾಗಿ ಮೂಡಿ ಬರಲಿ ಎಂದರು. ಡಂಕೆಲ್, ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳನ್ನು ವಿರೋಧಿಸುವ, ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಯನ್ನು ಸಾಧಿಸಲು, ಸಮಗ್ರ ಕರ್ನಾಟಕದ ಅಭಿವೃದ್ಧಿ ಯೋಜನೆಗಳ ಶೀಘ್ರ ಜಾರಿಗೆ ಒತ್ತಾಯ ಹಾಗೂ ಕೋಮುವಾದಿಗಳ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವುದು ಇನ್ನು ಮುಂತಾದ ನಿರ್ಣಯಗಳನ್ನು ಅಬ್ದುಲ್ ರಜಾಕ್ ಮುಲ್ಲಾ ಮಂಡಿಸಿದರು.

ಕೊನೆಯಲ್ಲಿ ಡಿವೈಎಫ್‌ಐನ ಧಾರವಾಡ ಜಿಲ್ಲೆಯಲ್ಲಿ ಬಲಿಷ್ಟ ಸಂಘಟನೆಯಾಗಿ ಬೆಳೆಸಲು ತೀವ್ರ ಚರ್ಚೆ ನಡೆಸಿ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಕೊನೆಯಲ್ಲಿ ಜಿಲ್ಲಾ ಸಂಚಾಲಕ ಬಾಬು ನಾರಾಯಣ್ ನಿಂಬರಗಿ ವಂದಿಸಿದರು.

ಯುವಜನರ ಸರ್ವ ಸದಸ್ಯರ ಸಭೆ

ದೊಡ್ಡಬಳ್ಳಾಪುರ : ಡಿವೈಎಫ್‌ಐನ ತಾಲೂಕು ಸಮಿತಿಯು ಅಕ್ಟೋಬರ್ 10 ರಂದು ಸರ್ವ ಸದಸ್ಯರ ಸಭೆ ಸೇರಿ 1993-94ನೇ ಸಾಲಿನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಬಿ.ಜಿ. ಹೇಮಂತ ರಾಜ್, ಕಾರ್ಯದರ್ಶಿಯಾಗಿ ಬಿ. ಆರ್. ರಮೇಶ್, ಖಜಾಂಚಿಯಾಗಿ ಟಿ.ಎಸ್. ವೆಂಕಟರೆಡ್ಡಿ ಮತ್ತು 10 ಜನ ಸದಸ್ಯರನ್ನು ಆಯ್ಕೆ ಮಾಡಿತು.

ತಾಲೂಕು ಸಮಿತಿಯು 35ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ರಾಜ್ಯದ ಮತ್ತು ತಾಲೂಕಿನ ಅಭಿವೃದ್ಧಿ ಯೋಜನೆಗಳನ್ನು ಈಡೇರಿಸಲು ಒತ್ತಾಯಿಸಿ ನವಂಬರ್ ಎಂಟರಂದು 11 ಗಂಟೆಗೆ ದೊಡ್ಡ ಬಳ್ಳಾಪುರದಲ್ಲಿ ಯುವಜನರ ಮೆರವಣಿಗೆಯನ್ನು ನಡೆಸಿತು. 150ಕ್ಕೂ ಹೆಚ್ಚಿನ ಜನ ಭಾಗವಹಿಸಿದ್ದ ಈ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮತ್ತು ನಗರ ಸಭೆಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಸಲ್ಲಿಸಿತು.

ಆಶ್ರಯ ಯೋಜನೆಯ ಫಲಾನುಭವಿಗಳಿಗೆ ಮನೆಗಳ ನಿರ್ಮಾಣಕ್ಕಾಗಿ, ಕ್ರೀಡಾಂಗಣ ಮತ್ತು ಬಸ್ ಡಿಪೋ ನಿರ್ಮಾಣಕ್ಕಾಗಿ, ಊರಿನ ಆಸ್ಪತ್ರೆಯ ದುಸ್ಥಿತಿಯನ್ನು ಸರಿಪಡಿಸಲು, ಸೀಮೆಎಣ್ಣೆ ವಿತರಣೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು, ರೇಶನ್ ಕಾರ್ಡ್‌ಗಳ ವಿತರಣೆ ಹಾಗೂ ಇನ್ನು ಮುಂತಾದ ಬೇಡಿಕೆಗಳನ್ನು ಮುಂದಿಟ್ಟಿದೆ.

ನೆರೆದಿದ್ದ ಯುವಕರನ್ನು ಉದ್ದೇಶಿಸಿ ತಹಸೀಲ್ದಾರ್‌ರವರು ಸಮಸ್ಯೆಗಳ ಪರಿಹಾರಕ್ಕೆ ತೆಗೆದುಕೊಳ್ಳುವ ಕ್ರಮಗಳ ಕುರಿತು ವಿವರಿಸಿದರು. ನಂತರ ಸಭೆಯನ್ನು ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ಕಾಂ.ಗೋಪಾಲಕೃಷ್ಣ ಮತ್ತು ತಾಲೂಕು ಘಟಕದ ಅಧ್ಯಕ್ಷರಾದ ಕಾಂ. ಹೇಮಂತ್‌ರಾಜ್ ಮಾತನಾಡಿದರು.

ಯುವಜನರಿಂದ ರುದ್ರಭೂಮಿ ಸ್ಥಾಪನೆ

ತೆಂಕನಿಡಿಯಾರು(ಉಡುಪಿ): ಗ್ರಾಮದ ಕೆಳರ್ಕಲ್ ಬೆಟ್ಟು ಸರಕಾರಿ ಜಾಗದಲ್ಲಿ ಈಶ್ವರನಗರ ತೆಂಕನಿಡಿಯಾರು ಡಿವೈಎಫ್‌ಐನ ಸಂಘದವರು ಹಾಗೂ ವೀರ ಮಾರುತಿ ಸಂಘದವರು ಜಂಟಿಯಾಗಿ ರುದ್ರಭೂಮಿಯನ್ನು ಸ್ಥಾಪಿಸಿದರು.

ತಾ. 31.10.93ರ ಸಂಜೆ 5 ಗಂಟೆಗೆ ನಡೆದ ಈ ಉದ್ಘಾಟನಾ ಸಮಾರಂಭದಲ್ಲಿ ಹಿರಿಯ ನಾಯಕರಾದ ಗುರುರಾಜ ಸೆಟ್ಟಿಗಾರರು ಭಾಗವಹಿಸಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕಾರ ನೀಡಿದವರಿಗೆಲ್ಲಾ ಧನ್ಯವಾದಗಳನ್ನು ಅರ್ಪಿಸಿದರು.

ಡಿವೈಎಫ್‌ಐ ಘಟಕ ಉದ್ಘಾಟನೆ

ಪೋಲೀಸ್ ಕಾಲೋನಿ(ಬೆಂಗಳೂರು) : ಮಾಗಡಿ ರಸ್ತೆಯಲ್ಲಿರುವ ಈ ಪ್ರದೇಶದಲ್ಲಿ ಯುವ ತರುಣರು ಅತೀ ಉತ್ಸಾಹದಿಂದ 12.9.93ರಂದು ಡಿವೈಎಫ್‌ಐ ಘಟಕವನ್ನು ಪ್ರಾರಂಭಿಸಿದರು ಮಾತ್ರವಲ್ಲದೆ ಅತ್ಯಂತ ಅಲ್ಪ ಅವಧಿಯಲ್ಲಿ ಅಂದರೆ 9.10.93ರಂದು ಸಾಮಾನ್ಯ ಜ್ಞಾನ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಈ ಸ್ಪರ್ಧೆಯಲ್ಲಿ 60 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದು ಕ್ರಮವಾಗಿ ಆರ್ಟ್ಸ್ ಕಾಲೇಜಿನ ಮಂಜುನಾಥ, ಎಸ್.ಎಲ್.ಎನ್. ಕಾಲೇಜಿನಬಿ.ಡಿ. ಉಮೇಶ, ವಿಜಯನಗರ ಸರಕಾರಿ ಕಾಲೇಜಿನ ಕೆ. ಉಮೇಶ್ ಪ್ರಥಮ, ದ್ವಿತಿಯ ಮತ್ತು ತೃತೀಯ ಸ್ಥಾನ ಗಳಿಸಿರುತ್ತಾರೆ.

ಡಿವೈಎಫ್‌ಐನ ವಿಜಯನಗರ ಘಟಕದ ಸಂಚಾಲಕ ಹಾಗೂ ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯ ಕಾಂ. ನಾರಾಯಣ್ ಈ ಘಟಕ ಸ್ಥಾಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದರು. 12.9.93ರಂದು ನಡೆದ ಸಭೆಯಲ್ಲಿ ರಾಜ್ಯ ಸಹ ಕಾರ್ಯದರ್ಶಿ ಕಾಂ.ಬಾಲಕೃಷ್ಣ ಶೆಟ್ಟಿ ಡಿವೈಎಫ್‌ಐನ ಧ್ಯೇಯ ಧೋರಣೆಗಳನ್ನು ವಿವರಿಸಿದರು.

ಸಕಲೇಶಪುರ : ಡಿವೈಎಫ್‌ಐ ಬೆಳವಣಿಗೆಯಲ್ಲಿ ಹಾಸನ ಜಿಲ್ಲೆ ಸದ್ಯಕ್ಕೆ ಹಿಂದುಳಿದ ಜಿಲ್ಲೆ. ಆದರೆ ಅಕ್ಟೋಬರ್ 2ರಂದು ಸಕಲೇಶಪುರದಲ್ಲಿ ನಡೆದ ಯುವಜನರ ಸಭೆ ಹೊಸ ಭರವಸೆಯನ್ನು ಮೂಡಿಸಿದೆ. ಸಿಐಟಿಯುವಿನ ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಕಾಂ. ಸುಕುಮಾರ್ ಈ ಸಭೆಯಲ್ಲಿ ಮಾತನಾಡಿ ಯುವಜನರ ಸಾಮರ್ಥ್ಯ ಇಂದು ಸಮಾಜದ ಏಳಿಗೆಗೆ ಉಪಯೋಗವಾಗುವುದರ ಬದಲಾಗಿ ವಿಘಟನೆಯ ಹಾದಿಯಲ್ಲಿ ಸಾಗುತ್ತಿದೆ. ಇದನ್ನು ಸರಿದಾರಿಗೆ ತಂದು ಜನಸಾಮಾನ್ಯರಿಗೆ ದೇಶಕ್ಕೆ ಒಳಿತಾಗುವಂತೆ ಮಾಡಲು ಡಿವೈಎಫ್‌ಐ ಶ್ರಮಿಸುತ್ತಿದೆ. ಆದುದರಿಂದ ಹಾಸನ ಜಿಲ್ಲೆಯಲ್ಲಿ ಮತ್ತು ಸಕಲೇಶಪುರದಲ್ಲಿ ಇದನ್ನು ಕಟ್ಟಿ ಬೆಳೆಸಲು ಯುವಜನರು ಶ್ರಮಿಸಬೇಕೆಂದು ಕರೆ ನೀಡಿದರು. ಮಾತ್ರವಲ್ಲದೆ ಸಿಐಟಿಯು ತನ್ನೆಲ್ಲಾ ಪ್ರೋತ್ಸಾಹ ನೀಡುವುದೆಂದು ಹೇಳಿದರು.

ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಸಂಭವಿಸಿದ ಭೂ ಕಂಪದಲ್ಲಿ ಮಡಿದವರಿಗೆ ಸಭೆ ಶ್ರದ್ಧಾಂಜಲಿ ಸಲ್ಲಿಸಿತು.

ಸಕಲೇಶಪುರ ಎಲ್ಐಸಿ ಯೂನಿಯನ್ನಿನ ಅಧ್ಯಕ್ಷರಾದ ಕಾಂ. ಪ್ರಸಾದ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅದೇ ಘಟಕದ ಕಾರ್ಯದರ್ಶಿ ಕಾ.ಚಿಕ್ಕಯ್ಯನವರು ಕೂಡಾ ಸಭೆಯಲ್ಲಿ ಭಾಗವಹಿಸಿ ಡಿವೈಎಫ್‌ಐನ ಧ್ಯೇಯ ಧೋರಣೆಯನ್ನು ಬೆಂಬಲಿಸಿದರು.

ರಾಜ್ಯ ಸಹ ಕಾರ್ಯದರ್ಶಿ ಕಾಂ.ಬಾಲಕೃಷ್ಣ ಶೆಟ್ಟಿಯವರು ಡಿವೈಎಫ್‌ಐನ ಧ್ಯೇಯ, ಧೋರಣೆ, ಕಾರ್ಯಕ್ರಮವನ್ನು ವಿವರಿಸಿದ ಬಳಿಕ ಪ್ರತಿನಿಧಿಗಳು ಉತ್ಸಾಹದಿಂದ ಚರ್ಚೆಯಲ್ಲಿ ಭಾಗವಹಿಸಿದರು. ಕೊನೆಯಲ್ಲಿ 14 ಸದಸ್ಯರ ಸಂಘಟನಾ ಸಮಿತಿಯನ್ನು ರಚಿಸಲಾಗಿ ಕಾಂ. ಸುಂದರ್ ಸಂಚಾಲಕರಾಗಿಯೂ, ಕಾಂ.ಎಂ.ದಾಸ್, ಕಾಂ. ಭುವನೇಶ್, ಕಾಂ. ಜಂಬಯ್ಯ ಸಹ ಸಂಚಾಲಕರಾಗಿ ಸರ್ವಾನುಮತದಿಂದ ಆಯ್ಕೆಯಾದರು.

ಜೋರ್ಡಾನ್ ಚುನಾವಣೆ ಮೂಲಭೂತವಾದಿಗಳಿಗೆ ಪರಾಜಯ

ಜೋರ್ಡಾನ್‌ನಲ್ಲಿ ನವಂಬರ್ 8ರಂದು ನಡೆದ ಚುನಾವಣೆಗಳಲ್ಲಿ ಮುಸ್ಲಿಂ ಮೂಲಭೂತವಾದಿ ಗುಂಪು 'ಮುಸ್ಲಿಂ ಬ್ರದರ್‌ಹುಡ್' ಮತ್ತು ಅವರ ಮಿತ್ರರ ಸೋಲು ಗಮನಾರ್ಹವಾದದ್ದು. 1989ರಲ್ಲಿ ನಡೆದ ಪಕ್ಷ ರಹಿತ ಚುನಾವಣೆಗಳಲ್ಲಿ 'ಮುಸ್ಲಿಂ ಬ್ರದರ್‌ಹುಡ್' 22 ಸೀಟುಗಳನ್ನು ಹಾಗೂ ಅದರ ಮಿತ್ರರು 12 ಸೀಟುಗಳನ್ನು ಗಳಿಸಿದ್ದರು. ಈ ಬಾರಿಯ ಚುನಾವಣೆಗಳಲ್ಲಿ ಅದು ಶೇಕಡಾ 20ಕ್ಕೆ ಇಳಿದಿದೆ. 'ಮುಸ್ಲಿಂ ಬ್ರದರ್‌ಹುಡ್'ಗೆ 16 ಸೀಟು ದಕ್ಕಿದರೆ ಅದರ ಮಿತ್ರರಿಗೆ ಕೇವಲ 2 ಸೀಟು ದಕ್ಕಿದೆ. ಹಲವಾರು ಹಿರಿಯ ನಾಯಕರು ಸೋತಿದ್ದಾರೆ. ಅದರಲ್ಲಿ ಪಾರ್ಲಿಮೆಂಟಿನ ಸ್ಪೀಕರ್ ಹಾಗೂ ಪಕ್ಷದ ವಕ್ತಾರರು ಪ್ರಮುಖರು.

ಜೋರ್ಡಾನ್‌ನ ಈ ಪಾರ್ಲಿಮೆಂಟರಿ ಚುನಾವಣೆಗಳು ಜೋರ್ಡಾನ್‌ಗೆ ಮಾತ್ರವಲ್ಲದೆ ಅಂಬ್ ಹಾಗೂ ಅರಬೇತರ ಮುಸ್ಲಿಂ ದೇಶಗಳೂ ಸೇರಿದಂತೆ ಹಲವು ದೇಶಗಳಿಗೆ ರಾಜಕೀಯ ಮಹತ್ವ ಹೊಂದಿದ್ದವು. ಇಂಡೋನೇಶ್ಯಾದಿಂದ ಮೊರಕ್ಕೋದವರೆಗೆ ಹೆಚ್ಚಿನ ಮುಸ್ಲಿಂ ದೇಶಗಳು ಕೋಮುವಾದ ಮುಸ್ಲಿಂ ಮೂಲಭೂತವಾದದ ರೂಪದಲ್ಲಿ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. 'ಎಲ್ಲಾ ಸಮಸ್ಯೆಗಳಿಗೆ ಕುರಾನ್‌ನಲ್ಲಿ ಉತ್ತರವಿದೆ' ಎಂದು ಸಾರುವ ಮೂಲಭೂತವಾದಿಗಳು ಮಧ್ಯಯುಗದ ಪಾಳೆಯಗಾರಿ ಕ್ರೌರ್ಯ, ಕಾನೂನು, ಮೌಢ್ಯಗಳನ್ನು ಜನರ ಮೇಲೆ ಹೇರ ಬಯಸುವ ಶಕ್ತಿಗಳು. ಈ ಮೂಲಭೂತವಾದಿಗಳಿಗೂ ಹಾಗೂ ಜಾತ್ಯಾತೀತ ರಾಜಕೀಯ ಶಕ್ತಿಗಳಿಗೂ ಸೆಣಸಾಟ ಹೆಚ್ಚಿನ ದೇಶಗಳಲ್ಲಿ ನಡೆಯುತ್ತಿದೆ. ಅಲ್ಲದೆ ಹೆಚ್ಚಿನ ಮುಸ್ಲಿಂ ದೇಶಗಳಲ್ಲಿ ರಾಜಾಡಳಿತ, ಏಕ ಪಕ್ಷೀಯ ಅಥವಾ ಇತರ ರೂಪದ ಸರ್ವಾಧಿಕಾರವಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದರೆ ಅತ್ಯಂತ ಸಂಘಟಿತ ಶಕ್ತಿಯಾದ ಮುಸ್ಲಿಂ ಮೂಲಭೂತವಾದಿಗಳಿಗೆ ಅನುಕೂಲಕರವಾಗುತ್ತಿದೆ ಎಂಬ ಭೀತಿಯ ಪ್ರಶ್ನೆ ಸಹ ಇತ್ತು. ಈ ಎರಡೂ ಪ್ರಶ್ನೆಗಳಿಗೆ ಜೋರ್ಡಾನ್ ಜನತೆ ಸ್ಪಷ್ಟ ಉತ್ತರವಿತ್ತಿದ್ದಾರೆ. ಬಹುಸಂಖ್ಯಾತ ಜನ ಮೂಲಭೂತವಾದಿಗಳನ್ನು ಬೆಂಬಲಿಸುವುದಿಲ್ಲ. ಯಾವುದೇ ಅಡೆತಡೆಗಳಿಲ್ಲದೆ ಜಾತ್ಯಾತೀತ ರಾಜಕೀಯ ಚಟುವಟಿಕೆಗೆ ಹಾದಿ ಮಾಡಿಕೊಟ್ಟರೆ ಮೂಲಭೂತವಾದಿಗಳ ವಿರುದ್ಧ ಹೋರಾಟಕ್ಕೆ ಅನುಕೂಲ ಮತ್ತು ರಾಜಕೀಯಕ್ಕೆ ಅವಕಾಶವಿಲ್ಲದಿರುವುದೇ ಮೂಲಭೂತವಾದಿಗಳು ಬೆಂಬಲಗಳಿಸಲು ಕಾರಣ ಎಂದು ಜೋರ್ಡಾನ್‌ನ ಸಂದರ್ಭದಲ್ಲಂತೂ ನಿಜವಾಗಿಸಿದ್ದಾರೆ ಅಲ್ಲಿನ ಜನ.

1989ರಲ್ಲಿ ಜೋರ್ಡಾನ್‌ನ ಚುನಾವಣೆಯಲ್ಲಿ ಇನ್ನೂ ರಾಜಕೀಯ ಪಕ್ಷಗಳು ನೊಂದಾಯಿಸುವ ಪರಿಸ್ಥಿತಿ ಜಾರಿಗೆ ಬಂದಿರಲಿಲ್ಲ. 'ಮುಸ್ಲಿಂ ಬ್ರದರ್‌ಹುಡ್' ತಾನು ಸಾಮಾಜಿಕ-ಧಾರ್ಮಿಕ ಸಂಸ್ಥೆ ಎಂಬ ಹೆಸರಿನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಅಲ್ಲದೆ 1989ರಲ್ಲಿ ಮತದಾನ ಕೇವಲ ಶೇಕಡಾ 40 ರಷ್ಟಾಗಿತ್ತು. ಜೋರ್ಡಾನ್‌ನಲ್ಲಿ ರಾಜಾಡಳಿತ ಸಂವಿಧಾನಾತ್ಮಕವಾಗಿದೆ. ರಾಜ ದೇಶದ ಮುಖ್ಯಸ್ಥ ಆದರೆ ಚುನಾಯಿತ ಪಾರ್ಲಿಮೆಂಟಿನಿಂದ ಮಂತ್ರಿಗಳನ್ನು ರಾಜ ಆರಿಸುತ್ತಾನೆ. 1989ರಲ್ಲಿ ದೊಡ್ಡ ಗುಂಪಾಗಿ ಚುನಾಯಿತರಾದ ಮೂಲಭೂತವಾದಿಗಳಿಗೆ ರಾಜ ಹುಸೇನ್ 7 ಮಂತ್ರಿ ಪದವಿಗಳನ್ನು ಕೊಟ್ಟಿದ್ದ. ಅದೇ ಅವರಿಗೆ ಮುಳುವಾದಂತೆ ಕಾಣುತ್ತದೆ. 'ಕುರಾನ್‌ನಲ್ಲಿ ಎಲ್ಲಾ ಸಮಸ್ಯೆಗಳಿಗೆ ಉತ್ತರವಿದೆ' ಎಂದು ಸಾರುವ ಮಂತ್ರಿಗಳ ಕೆಲಸ ನೋಡಿ ಜನರಿಗೆ ಇವರ ಬಳಿ ಯಾವ ನಿಜವಾದ ಸಮಸ್ಯೆಗಳಿಗೆ ಉತ್ತರವಿಲ್ಲ ಎಂಬುದು ಮನದಟ್ಟಾಯಿತು. ಈ ಮಂತ್ರಿಗಳು ಕೆಲಸ ಮಾಡದ್ದು ಮಾತ್ರವಲ್ಲ ಅವರು ತೋರಿಸಿದ ಭ್ರಷ್ಟಾಚಾರ, ಸ್ವಜನ ಪಕ್ಷಪಾತದಿಂದಲೂ ಜನರಿಗೆ ಅವರ ನಿಜಸ್ವರೂಪದ ಬಗ್ಗೆ ಅರಿವಾಗಿತ್ತು.

ಆದರೆ 1993ರ ಚುನಾವಣೆಯಲ್ಲಿ ಇನ್ನೂ ಹೆಚ್ಚಿನ ಹೊಸ ಅಂಶಗಳು, ಸನ್ನಿವೇಶಗಳು ಇದ್ದವು. ರಾಜಕೀಯ ಪಕ್ಷಗಳನ್ನು ನೊಂದಾಯಿಸುವ ಮೂಲಕ ಹಲವು ರಾಜಕೀಯ ಪಕ್ಷಗಳು ಕಣದಲ್ಲಿದ್ದವು. ಆದರೂ ಅವುಗಳಲ್ಲಿ ಕಮ್ಯುನಿಸ್ಟ್ ಪಕ್ಷ ಬಿಟ್ಟರೆ 'ಮುಸ್ಲಿಂ ಬ್ರದರ್‌ಹುಡ್' ಅತ್ಯಂತ ಸುಸಂಘಟಿತ ಪಕ್ಷವಾಗಿತ್ತು. ಎರಡು ಪ್ಯಾಲೆಸ್ಟೀನ್ ಪಕ್ಷಗಳನ್ನು ಬಿಟ್ಟರೆ ಇತರ ಪಕ್ಷಗಳು ಸಣ್ಣ ಸಣ್ಣ ವ್ಯಕ್ತಿ ಆಧಾರಿತ ಗುಂಪುಗಳು ಅಲ್ಲದೆ ಪಿ.ಎಲ್.ಓ-ಇಸ್ರೇಲ್ ಶಾಂತಿ ಒಪ್ಪಂದ ಮೂಲಭೂತವಾದಿಗಳಿಗೆ ಹೊಸ ಗ್ರಾಸ ಒದಗಿಸಿತ್ತು. ಜೋರ್ಡಾನ್‌ನ ರಾಜ ಇಸ್ರೇಲ್ ಜತೆ ಶಾಂತಿ ಒಪ್ಪಂದಕ್ಕೆ ಮುದಾದದ್ದನ್ನು ಮೂಲಭೂತವಾದಿಗಳು ಚುನಾವಣಾ ವಿಷಯವನ್ನಾಗಿಸಿದ್ದರು. ಈ ಸನ್ನಿವೇಶದಲ್ಲಿ ಮೂಲಭೂತವಾದಿಗಳು ಬಹುಮತದಿಂದ ಆರಿಸಿಬರಬಹುದು ಎಂಬ ಆತಂಕ ಹಲವರಲ್ಲಿತ್ತು. ಈ ಆತಂಕದಿಂದ ರಾಜ ಹುಸೇನ್ ಚುನಾವಣೆಗೆ ಮುಂದೂಡುವುದರಲ್ಲಿದ್ದನಂತೆ. ಆದರೆ ತನ್ನ ಜನಪ್ರಿಯತೆಯಲ್ಲಿ ನಂಬಿಕೆ ಇಟ್ಟು ಚುನಾವಣೆ ಮೊದಲೇ ನಿರ್ಧರಿಸಿದ ತಾರೀಕಿಗೆ ನಡೆಯಿತು. ಈ ಬಾರಿ ಮತದಾನ ಶೇಕಡಾವಾರು ಗಮನಾರ್ಹವಾಗಿ ಏರಿತು. ಶೇಕಡಾ 68 ಮತದಾನ ಜೋರ್ಡಾನ್‌ನ ಸಂದರ್ಭದಲ್ಲಿ ಭಾರಿ ಮತದಾನವಂತೆ. ಹಲವಾರು ಮತದಾರರು ಮೂಲಭೂತವಾದಿಗಳು ಬಹುಮತ ಪಡೆಯಲು ಬಿಡಬಾರದು ಎಂಬ ಉದ್ದೇಶದಿಂದ ಮತದಾನ ಮಾಡಿದ್ದಾರೆಎಂದು ಕೆಲವು ವೀಕ್ಷಕರು ಕಾರಣ ಕೊಟ್ಟಿದ್ದಾರೆ. ಇದಲ್ಲದೆ ಒಬ್ಬಾಕೆ ಮಹಿಳೆಯನ್ನು ಪಾರ್ಲಿಮೆಂಟಿಗೆ ಚುನಾಯಿಸುವ ಮೂಲಕ ಮೂಲಭೂತವಾದಿಗಳಿಗೆ ನೇರ ಸವಾಲು ಹಾಕಿದ್ದಾರೆ ಜನ. ಈಕೆ ಮಹಿಳಾವಾದಿಯಾಗಿದ್ದು, ಮೂಲಭೂತವಾದಿಗಳ ತೀವ್ರ ಟೀಕೆಗೆ ಗುರಿಯಾಗಿದ್ದಳು. ಜೋರ್ಡಾನ್ ಪಾರ್ಲಿಮೆಂಟಿಗೆ ಆಯ್ಕೆಯಾಗಿರುವ ಪ್ರಥಮ ಮಹಿಳೆ ಈಕೆ.

ಈ ಚುನಾವಣೆಗಳು ಹಾಗೂ ಅದರ ಫಲಿತಾಂಶ ಮೂಲಭೂತವಾದದ ವಿರುದ್ಧ ಹೋರಾಡುತ್ತಿರುವ ಅಲ್ಜೀರಿಯಾ, ಈಜಿಪ್ಟ್ ಮುಂತಾದ ಕಡೆ ಪ್ರಮುಖ ಪರಿಣಾಮ ಬೀರಲಿದೆ. ಅರಬ್ ದೇಶವೊಂದರಲ್ಲಿ ಮುಕ್ತ ಚುನಾವಣೆ ಹಾಗೂ ಅದರಲ್ಲಿ ಅರಬ್ ದೇಶವೊಂದರಲ್ಲಿ ಮುಕ್ತ ಚುನಾವಣೆ ಹಾಗೂ ಅದರಲ್ಲಿ ಮೂಲಭೂತವಾದಿಗಳ ಪರಾಜಯ (ಸೌದಿ ಅರೇಬಿಯಾ, ಕುವೈತ್, ಯು.ಎ.ಇ. ಮುಂತಾದ ದೇಶಗಳಲ್ಲಿ ಆಳುತ್ತಿರುವ) ಅರಬ್ ಶೇಕ್‌ಗಳಿಗೆ ಶಾಕ್ ನೀಡುತ್ತದೆ. ಜೋರ್ಡಾನ್‌ನ ಅರ್ಧದಷ್ಟು ಜನ ಪ್ಯಾಲೇಸ್ಟೀನ್‌ರಾದ್ದರಿಂದ ಪ್ಯಾಲೇಸ್ಟೀನ್ ಚುನಾವಣೆಗಳಲ್ಲೂ, ಮೂಲಭೂತವಾದಿಗಳ ಕೈಮೇಲಾಗಲಿಕ್ಕಿಲ್ಲ ಎಂಬ ಭರವಸೆಯನ್ನು ಹುಟ್ಟಿಸಿದೆ.

ಲಿಬ್ಯಾದ ಮೇಲೆ ಹೊಸ ದಿಗ್ಬಂಧನಗಳು

ವಿಶ್ವಸಂಸ್ಥೆಯ ಭದ್ರತಾ ಸಮಿತಿ ಲಿಬ್ಯಾದ ಮೇಲೆ ಈಗಾಗಲೇ ಇರುವ ದಿಗ್ಬಂಧನವನ್ನು ಇನ್ನೂ ಬಿಗಿಗೊಳಿಸಿದೆ. ಈ ನಿರ್ಧಾರದ ಪ್ರಕಾರ ವಿದೇಶ ಬ್ಯಾಂಕ್‌ಗಳಲ್ಲಿ ಲಿಬ್ಯಾದ ಖಾತೆಗಳನ್ನು ಸ್ಥಗಿತಗೊಳಿಸಲಾಗುವುದು ಹಾಗೂ ತೈಲ ಸಂಬಂಧಿ ಯಂತ್ರ ಸಾಮಗ್ರಿಗಳ ಆಮದಿನ ಮೇಲೆ ನಿಷೇಧ ಹೇರಲಾಗುವುದು. ಅಮೇರಿಕನ್ ಪಾನ್ ಆಮ್ ಸಂಸ್ಥೆಯ ವಿಮಾನವೊಂದರ ಬಾಂಬ್ ಪ್ರಕರಣದಲ್ಲಿ ಆಪಾದಿತರಾದ ಇಬ್ಬರು ಲಿಬ್ಯನ್ನರನ್ನು ವಿಚಾರಣೆಗೆ ಅಮೇರಿಕಕ್ಕೆ ಒಪ್ಪಿಸುವುದಕ್ಕೆ ಲಿಬ್ಯಾದ ಸರ್ಕಾರ ನಿರಾಕರಿಸುವುದು ಇದಕ್ಕೆ ಕಾರಣ.

ಈ ಇಬ್ಬರು ಲಿಬ್ಯನರ ವಿರುದ್ಧ 'ಆಪಾದನೆ' ಮಾತ್ರ ಇದೆ. ರುಜುವಾತುಗಳಿಲ್ಲ. ಅವರ ಇಚ್ಛೆಗೆ ವಿರುದ್ಧ ಸರ್ಕಾರ ಅವರನ್ನು ಅಮೇರಿಕಕ್ಕೆ ಕಳಿಸುವುದಿಲ್ಲ. ಅಮೇರಿಕದಲ್ಲಿ ತಮಗೆ ನ್ಯಾಯದೊರಕುವುದಿಲ್ಲ ಎಂದು ಅವರ ಭಾವನೆ. ಸ್ವಿಟ್‌ಜರ್‌ಲ್ಯಾಂಡ್‌ನಂತಹ ತಟಸ್ಥ ದೇಶವೊಂದರಲ್ಲಿ ವಿಚಾರಣೆಗೆ ಅವರ ಸಿದ್ಧ. ಇದು ಲಿಬ್ಯನ್ ಸರ್ಕಾರ ನಿಲುವು. ಈ ನಿಲುವಿನ ವಿರುದ್ಧ ಏಪ್ರಿಲ್ 1992ರಿದ ಲಿಬ್ಯಾದ ಮೇಲೆ ಈಗಾಗಲೇ ಭದ್ರತಾ ಸಮಿತಿ ವಿಧಿಸಿದ ದಿಗ್ಬಂಧನವಿದೆ. ಇದರ ಪ್ರಕಾರ ವಿಮಾನ ಹಾರಾಟ ಹಾಗೂ ಶಸ್ತ್ರಾಸ್ತ್ರ ಮಾರಾಟ ಲಿಬ್ಯಾದ ಜತೆ ಸಲ್ಲದು.

ಅಮೇರಿಕ ಲಿಬ್ಯಾದ ತೈಲ ರಫ್ತಿನ ಮೇಲೆ ದಿಗ್ಬಂಧನ ಹೇರಬೇಕೆಂದು ಒತ್ತಾಯಿಸಿತ್ತು. ಆದರೆ ಲಿಬ್ಯಾದ ತೈಲದ ಮೇಲೆ ಅವಲಂಬಿಸಿರುವ ಪಶ್ಚಿಮ ಯುರೋಪಿನ ದೇಶಗಳು ಇದನ್ನು ವಿರೋಧಿಸಿದವು. ತೈಲ ರಫ್ತು ಲಿಬ್ಯಾದ ಜೀವನಾಡಿ. ಆದರೆ ತೈಲ ರಫ್ತಿನ ಮೇಲೆ ದಿಗ್ಬಂಧನಕ್ಕೆ ತನ್ನ ಪ್ರಯತ್ನಗಳನ್ನು ಅಮೇರಿಕ ಮುಂದುವರೆಸಲಿದೆ. ಲಿಬ್ಯಾ ಭದ್ರತಾ ಸಮಿತಿಯ ಈ ನಿರ್ಣಯವನ್ನು ಅನ್ಯಾಯಯುತ ಎಂದು ಖಂಡಿಸಿದೆ. ಪಾಶ್ಚಿಮಾತ್ಯದೇಶಗಳು ಭದ್ರತಾ ಸಮಿತಿಯ ಮೇಲೆ ಈ ನಿರ್ಣಯ ಕೈಗೊಳ್ಳುವಂತೆ ಒತ್ತಡ ಹಾಗೂ ಬೆದರಿಕೆ ಹಾಕಿವೆ ಎಂದು ಆಪಾದಿಸಿದ್ದಾರೆ. ನಿರ್ಣಯ 11-0 ಮತಗಳಿಂದ ಮುಂದೂಡಲಾಯಿತು. 4 ದೇಶಗಳು, ಮತದಾನದಲ್ಲಿ ಭಾಗವಹಿಸಲಿಲ್ಲ.

ಲೋಕ ಸಂಚಾರ

--ಶರತ್ ಚಂದ್ರ

ಬೆನಜಿರ್ ಪರ ಅಭ್ಯರ್ಥಿ ಪಾಕ್ ಅಧ್ಯಕ್ಷರಾಗಿ ಆಯ್ಕೆ

ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ)ಯ ಅಭ್ಯರ್ಥಿ ಸರದಾರ್ ಫರೂಖ್ ಅಹಮದ್ ಖಾನ್ ಲೆಘಾರಿ ಪಾಕಿಸ್ತಾನದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಪಾಕಿಸ್ತಾನ ಮುಸ್ಲಿಂ ಲೀಗ್ ವಾಸಿಮ್ ಸಜ್ಜದ್ ಅವರನ್ನು 278-168 ಮತಗಳಿಂದ ಸೋಲಿಸಿದರು. ವಾಸಿಂ ಸಜ್ಜದ್ ಅಧ್ಯಕ್ಷ ಗಲಾಂ ಇಶಾಖ್ ಖಾನ್ ರಾಜೀನಾಮೆ ನಂತರ ಹಂಗಾಮಿ ಅಧ್ಯಕ್ಷರಾಗಿದ್ದರು.

ಅಧ್ಯಕ್ಷರಿಗೆ ರಾಷ್ಟ್ರೀಯ ಅಸೆಂಬ್ಲಿಯನ್ನು ವಿಸರ್ಜಿಸುವ ಅಧಿಕಾರ ಕೊಡುವ 8ನೇ ಸಂವಿಧಾನ ತಿದ್ದುಪಡಿ ಇನ್ನೂ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಈ ವಿಜಯ ಅತ್ಯಂತ ಮಹತ್ವದ್ದು. ಮುಸ್ಲಿಂ ಲೀಗ್ ಅಭ್ಯರ್ಥಿ ಅಧ್ಯಕ್ಷರಾಗಿ ಚುನಾಯಿತರಾಗಿದ್ದರೆ ಪುನಃ ಪಾರ್ಲಿಮೆಂಟು ಹಾಗೂ ಅಧ್ಯಕ್ಷರ ನಡುವೆ ಘರ್ಷಣೆಗೆ ಅವಕಾಶವಿರುತ್ತಿತ್ತು. ಬಹುಶಃ ರಾಜಕೀಯ ಪ್ರಜಾಪ್ರಭುತ್ವದ ಸ್ಥಿರತೆಗೆ ಇದರಿಂದ ಅನುಕೂಲವಾಗಬಹುದು ಎನ್ನಲಾಗಿದೆ.

ದಿಗ್ಬಂಧನದಿಂದ ತಿಂಗಳಿಗೆ ಹೈತಿಯ ಸಾವಿರ ಮಕ್ಕಳ ಸಾವು

ಅಂತರ್ರಾಷ್ಟ್ರೀಯ ಆರ್ಥಿಕ ದಿಗ್ಬಂಧನವನ್ನು ರಾಜಕೀಯ ಅಸ್ತ್ರವಾಗಿ ಬಳಸುತ್ತಿರುವ ಅಮೇರಿಕಾದ ನೀತಿಯ ಅಮಾನವೀಯತೆ ಹೈತಿಯಲ್ಲಿಯಷ್ಟು ಸ್ಪಷ್ಟವಾಗಿ ಬೇರೆಲ್ಲೂ ಕಾಣಲಿಕ್ಕಿಲ್ಲ. ಹೈತಿ ಮಧ್ಯ ಅಮೇರಿಕಾದ ಬಳಿ ಇರುವ ಅತ್ಯಂತ ಬಡ ದೇಶ. ಆ ದೇಶದಲ್ಲಿ ತಿಂಗಳಿಗೆ ಮೂರು ಸಾವಿರ (5 ವರ್ಷಕ್ಕಿಂತ ಕಡಿಮೆ ವಯಸ್ಸಿನ) ಮಕ್ಕಳು ಸಾಯುತ್ತಾರೆ. ಇತ್ತೀಚೆಗೆ ಅಮೇರಿಕದ ಒತ್ತಡದಿಂದ ವಿಶ್ವಸಂಸ್ಥೆ ಹೇರಿದ ಆರ್ಥಿಕ ದಿಗ್ಬಂಧನದಿಂದ ಈ ಸಂಖ್ಯೆ ಒಂದು ಸಾವಿರದಷ್ಟು ಏರಿದೆ.

ದಿಗ್ಬಂಧನಕ್ಕೆ ಕಾರಣಗಳೇನೇ ಇರಲಿ, ಅದರಿಂದ ತೀವ್ರ ಪರಿಣಾಮಗಳಿಗೆ ಗುರಿಯಾಗುವವರು ಆ ದೇಶದ ಬಡಜನರು ಅದರಲ್ಲೂ ಮಕ್ಕಳು. ಇದು ದಿಗ್ಬಂಧನಕ್ಕೊಳಗಾದ ಇರಾಕ್, ಯುಗೋಸ್ಲಾವಿಯಗಳಲ್ಲೂ ಕಂಡು ಬಂದ ವಿಷಯ.

ಕೊರಿಯಾಕ್ಕೆ ಜಪಾನಿ 'ಸ್ಸಾರಿ'

ಏಶ್ಯಾದಲ್ಲಿ ಎರಡನೇಯ ಮಹಾಯುದ್ಧದಲ್ಲಿ ಹಲವಾರು ದೇಶಗಳನ್ನು ಸಾಮ್ರಾಜ್ಯಶಾಹಿ ಯುದ್ಧ, ಶೋಷಣೆ, ಕುಕೃತ್ಯಗಳಿಗೆ ತುತ್ತಾಗಿಸುವುದರಲ್ಲಿ ಜಪಾನ್‌ನ ಪಾತ್ರ ಮರೆಯಲಾಗದ್ದು. ಜಪಾನ್ ಈಗ ಪುನಃ ಸಾಮ್ರಾಜ್ಯಶಾಹಿ ಕೂಟದಲ್ಲಿ ಪ್ರಮುಖ ಶಕ್ತಿಯಾಗಿ ತಲೆಯೆತ್ತುತ್ತಿರುವ ಹಿನ್ನೆಲೆಯಲ್ಲಿ ಈ ಕ[illegible] ನೆನಪು ಮರುಕಳಿಸುತ್ತಿದೆ.

ಅದರಲ್ಲೂ ಕೊರಿಯಾದಲ್ಲಿ ಜಪಾನ್ 1910ರಿಂದ 1945ರವರೆ[illegible] ಸಾಮ್ರಾಜ್ಯಶಾಹಿ ಆಡಳಿತ ನಡೆಸಿತ್ತು. ಕೊರಿಯಾ ಭಾಷೆ ಮೇಲೆ ಪ್ರತಿಬಂಧ, ಮಹಾಯುದ್ಧದಲ್ಲಿ ಕೊರಿಯಾ ಮಹಿಳೆಯರ 'ಕಾಮ ಗುಲಾಮರಾಗಿ ಬಳಕೆ' ಜಪಾನಿನ ಕ್ರೌರ್ಯ ಹೇಳತಕ್ಕದ್ದು.

ದಕ್ಷಿಣ ಕೊರಿಯಾಕ್ಕೆ ಜಪಾನಿ ಪ್ರಧಾನಿ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಭಾರಿ ಪ್ರದರ್ಶನಗಳನ್ನು ಎದುರಿಸಬೇಕಾಯಿತು. ಪ್ರದರ್ಶನಗಳು ಎಷ್ಟು ತೀವ್ರವಾಗಿತ್ತೆಂದರೆ, ಜಪಾನಿ ಪ್ರಧಾನಿ ಕೊರಿಯಾದ ಟೆಲಿವಿಷನ್‌ನಲ್ಲಿ ಸಾರ್ವಜನಿಕವಾಗಿ ಜಪಾನ್‌ನ ಹಿಂಸಾಕೃತ್ಯಗಳಿಗೆ ಕ್ಷಮೆಕೋರಬೇಕಾಯಿತು. ಇದಕ್ಕಿಂತ ಮೊದಲು ಜಪಾನ್ ದಕ್ಷಿಣ ಕೊರಿಯಾದ ಪ್ರಧಾನಿಗಳ ಶೃಂಗಸಭೆಯಲ್ಲೂ ಅವರು ಕ್ಷಮೆ ಕೋರಿದ್ದರು. ದಕ್ಷಿಣ ಕೊರಿಯಾದ ಸರ್ಕಾರ ಅಮೇರಿಕದ ಬಾಲಬುಡಕನಾಗಿದ್ದರೂ, ಜನತೆಯಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆ ತೀವ್ರವಾಗಿದೆ ಎಂದು ಈ ಘಟನೆ ತೋರಿಸಿಕೊಟ್ಟಿದೆ. ಅಮೇರಿಕ-ಜಪಾನ್-ಕೊರಿಯಾ ಸರ್ಕಾರಗಳ ಕೂಟ ಉತ್ತರ ಕೊರಿಯಾದ ಮೇಲೆ ನಡೆಸುತ್ತಿರುವ ಮಸಲತ್ತನ್ನು ಅಷ್ಟೇ ಬಲವಾಗಿ ವಿರೋಧಿಸಬಹುದು ಎಂಬುದಕ್ಕೆ ಮುನ್ಸೂಚನೆ.

ಪಶ್ಚಿಮ ಬಂಗಾಳದ ಪಂಚಾಯತ್‌ಗಳಲ್ಲಿ ಮಹಿಳೆಯರ ಮಹತ್ವದ ಪಾತ್ರ

ಪುಟ 5ರಿಂದ

ಪ್ರಶ್ನೆ: ಯಾವುದಾದರೊಂದು ಜಿಲ್ಲೆಯ ಪೂರ್ಣ ಅನುಭವ ಕೊಡುವಿರಾ?

** (ಕಾಂ. ಸುಮಿತ್ರಾ ಡೇ, ಬಂಕೂರಾ ಜಿಲ್ಲೆಯ ಸಂಪೂರ್ಣ ಸಾಕ್ಷರತಾ ಆಂದೋಲನದ ಜಿಲ್ಲಾ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದು, ಅವರು ತಮ್ಮ ಅನುಭವಗಳನ್ನು ತಿಳಿಸಿದರು: ಸಂದರ್ಶಕರು) ಜಿಲ್ಲೆಯ ಒಟ್ಟು ಜನಸಂಖ್ಯೆ 24 ಲಕ್ಷ, 9-50 ವಯೋಮಾನದವರು 6 ಲಕ್ಷ, ಸಾಕ್ಷರತಾ ಗುರಿ 5.5. ಲಕ್ಷ ಒಂದನೇ ಹಂತದಲ್ಲಿ ಸಾಧನೆ 4 ಲಕ್ಷ (ನವೆಂಬರ್ 91 ರಿಂದ ಜೂನ್ 92) ಹಲವಾರು ಕಲಾ ಜಾಥಾಗಳು ಆಂದೋಲನದಲ್ಲಿ ಪಾಲುಗೊಂಡಿವೆ, ಮುಸ್ಲಿಂ ಮಹಿಳೆಯರು ಬಹುಸಂಖ್ಯೆಯಲ್ಲಿ ಕಲಿಕಾ ಕೇಂದ್ರಗಳಿಗೆ ಬಂದಿದ್ದರು.*

ನಾಲ್ಕರಿಂದ ಐದನೇ ತರಗತಿ ಕಲಿತ ಯುವಕ-ಯುವತಿಯರೂ ಸ್ವಯಂ ಸೇವಕ [illegible] 100 ಕಲಿಕಾ ಕೇಂದ್ರಗಳಲ್ಲಿ 85 ರಷ್ಟು ಮಹಿಳೆಯರದ್ದಾಗಿದ್ದರು. 15 ರಷ್ಟು ಮಾತ್ರ ಪುರುಷರಾಗಿದ್ದರು.

ಪ್ರತಿಶತ ಕಲಿಸುವವರಲ್ಲಿ 67 ರಷ್ಟು ಮಹಿಳೆಯರು, 33 ರಷ್ಟು ಪುರುಷರು.

ಮುದುಕಿಯರು ಮಕ್ಕಳನ್ನು ನೋಡಿಕೊಂಡು ವಯಸ್ಕ ಮಹಿಳೆಯರನ್ನು ಶಾಲೆಗೆ ಕಳುಹಿಸುತ್ತಿದ್ದರು. ಗಂಡಂದಿರಿಂದ ಅಡ್ಡಿ ಬರುತ್ತಿದ್ದರೂ, ಮಹಿಳೆಯರನ್ನು ಕಲಿಕಾ ಕೇಂದ್ರಕ್ಕೆ ಕಳುಹಿಸಲು ಅವರ ಮನ ಒಲಿಸಲಾಗುತ್ತಿತ್ತು.

ಕಲಿಕಾ ಕೇಂದ್ರಗಳಲ್ಲಿ ಕಲಿಯುತ್ತಿರುವವರನ್ನು ಆಂದೋಲನದ ಅಂತ್ಯದಲ್ಲಿ ನವಸಾಕ್ಷರಸ್ಥರೆಂದು ಘೋಷಿಸಿ, ಪ್ರಮಾಣ ಪತ್ರ ವಿತರಣೆ ಮಾಡಿದ ಸಂದರ್ಭ, ಮಹಿಳೆಯರು ಸಂತೋಷ ಸಂಭ್ರಮದಿಂದ ಹೊಸ ಸೀರೆ ಉಟ್ಟು ಬಂದಿದ್ದರು. ಸಿಹಿ ಊಟ ತಿಂದಿ ಉಂಡರು. ಮದುವೆ ಹಬ್ಬದ ಉತ್ಸಾಹದ ವಾತಾವರಣ ತುಂಬಿತ್ತು. ಜನರ ಸಂತೋಷ, [illegible] ಸಂಭ್ರಮಗಳ ದೃಶ್ಯಗಳು ಅತ್ಯಂತ ಹೃದಯಸ್ಪರ್ಶಿಯಾಗಿದ್ದವು. ಆಂದೋಲನದ ಕಾರ್ಯಕರ್ತರಾಗಿ ಭಾಗವಹಿಸಿದವರಲ್ಲಿ ಕೃತಾರ್ಥತೆಯ ಸಂತೃಪ್ತಿ ತುಂಬಿದ್ದವು.

-ಸಾಕ್ಷರತಾ ಆಂದೋಲನದಿಂದಾಗಿ/ ಪ್ರಾಥಮಿಕ ಶಾಲೆಗಳಲ್ಲಿ ಹಾಜರಾತಿ ಹೆಚ್ಚಿತು. ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದು ಕಡಿಮೆ ಆಯಿತು, ಕೃಷಿ ಕೂಲಿಕಾರರು ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುವ ಹೋರಾಟಕ್ಕೆ ಸಾಕ್ಷರತೆ ಪ್ರಯೋಜನವಾಯಿತು. ಅವರ ಆತ್ಮಾಭಿಮಾನ ಹೆಚ್ಚಿತು.

ಸಂಪೂರ್ಣ ಸಾಕ್ಷರತೆಯ ಮೊದಲ ಹಂತದ ನಂತರ ಪುನಃ ಗಣತಿ ನಡೆಸಲಾಯಿತು. ನಂತರ ವಿವಿಧ ಸಾಕ್ಷರೋತ್ತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು, ಮುಖ್ಯವಾಗಿ ಸ್ವಾವಲಂಬನೆಯ ಉದ್ಯೋಗ, ಹೆಚ್ಚುವರಿ ಕಲಿಕೆ, [illegible] ಗ್ರಂಥಾಲಯಗಳನ್ನು ನಡೆಸುವುದು, ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಕಾರ್ಯಗತಗೊಳಿಸುವುದು ಇತ್ಯಾದಿ.

ಪ್ರಶ್ನೆ: ಪ.ಬಂಗಾಳದಲ್ಲಿ ಸಿಪಿಐ(ಎಂ) ನೇತೃತ್ವದ ಸರಕಾರವಿರುವುದರಿಂದ ಅಲ್ಲಿನ ಮಹಿಳೆಯರು ಇಷ್ಟೆಲ್ಲಾ ಸಾಧಿಸಿದರು ಎಂದು ನಿಮ್ಮ ಅಭಿಪ್ರಾಯವೇ?

** ಈ ರಾಜ್ಯದಲ್ಲಿ ಎಡರಂಗ ಸರಕಾರವಿರುವುದರಿಂದ ಮಹಿಳೆಯರ ಆಂದೋಲನಕ್ಕೆ ಒಳ್ಳೆಯ ವಾತಾವರಣ ಇದೆ ಅಷ್ಟೇ. ಮಹಿಳೆಯರು ತಮ್ಮ ಸಂಘಟನೆ ಕಟ್ಟಿ ಬೆಳೆಸುವುದು, ಬೇಡಿಕೆಗಳ ಆಧಾರದಲ್ಲಿ ಹೋರಾಟ ನಡೆಸುವುದು, ಸಾಮಾಜಿಕ ಹಾಗೂ ರಾಜಕೀಯ ವಲಯಗಳಲ್ಲಿ ಸ್ಥಾನಮಾನ ಗಳಿಸುವುದು ಇತ್ಯಾದಿ ಅವರ ಸ್ವಂತ ಪರಿಶ್ರಮದಿಂದಲೇ ಆಗಬೇಕಾಗಿದೆ. ಎಡರಂಗ ಸರಕಾರ ಇದ್ದುದರಿಂದ ತನ್ನಿಂದ ತಾನೇ ಈ ಎಲ್ಲ ಸಾಧನೆಗಳಾಗುವ[illegible] ದಿಲ್ಲ.*

ಪ್ರಶ್ನೆ: ಇದು ಕೊನೆಯ ಪ್ರಶ್ನೆ- ಗಂಡಸರು ಮತ್ತು ಹೆಂಗಸರ ಕುರಿತು ನಿಮ್ಮ ಒಟ್ಟು ಅಭಿಪ್ರಾಯಗಳೇನು?

** ಗಂಡಸರು ಸಾಮಾನ್ಯವಾಗಿ ಗರ್ವಿಗಳು, ಸೋಮಾರಿಗಳು, ಅಲಕ್ಷವಾಗಿರುವವರು, ಹೆಂಗಸರು ಸಾಮಾನ್ಯವಾಗಿ ಕಷ್ಟಪಟ್ಟು ಕೆಲಸ ಮಾಡುವವರು, ಗುರಿ ಮುಟ್ಟಲು ಸತತ ಪರಿಶ್ರಮ ಮಾಡುವವರು, ಅತ್ಯಂತ ಆಸಕ್ತಿ ಹಾಗೂ ದಕ್ಷತೆಯಿಂದ ಶ್ರಮಿಸುವವರು.*

ಸಂದರ್ಶಕರು : ನಿಮಗೆಲ್ಲರಿಗೂ ಧನ್ಯವಾದಗಳು, ನೀವು ನೀಡಿದ ಮಹತ್ವದ ಮಾಹಿತಿಗಳನ್ನು ನಮ್ಮ 'ಐಕ್ಯರಂಗ'ದಲ್ಲಿ ಪ್ರಕಟಿಸಿದಾಗ, ನಮ್ಮ ಕಾರ್ಯಕರ್ತರಲ್ಲಿಯೂ ಸ್ಫೂರ್ತಿ ಮೂಡಿ ಹೆಚ್ಚು ಕ್ರಿಯಾಶೀಲರಾಗಲಿ ಎಂದು ಹಾರೈಸುತ್ತೇವೆ. ಬಂಗಾಳದ ಸಂಗಾತಿಗಳಿಗೆ ನಮ್ಮ ಕೆಂಪು ವಂದನೆಗಳು.

ಅವರು: ಈ ಸಂದರ್ಶನದ [illegible] ಪ್ರತಿ ಒಂದನ್ನು ನಮಗೆ ಕಳುಹಿಸಿ. ಕರ್ನಾ[illegible] ಸಂಗಾತಿಗಳಿಗೆ ನಮ್ಮ ಕೆಂಪು ವಂದನೆಗಳು.

KRNM/BGS-405 MAG(2) PRB DECR 319-78/79

“ಉತ್ತರ ಪ್ರದೇಶದಲ್ಲಿ ಬಿಜೆಪಿ ಸೋಲು ಖಚಿತ”

ಜಾತ್ಯಾತೀತ ಶಕ್ತಿಗಳಲ್ಲಿ ಹೊಸ ಹುರುಪು ತುಂಬಿದ ಜ್ಯೋತಿ ಬಸು ಪ್ರವಾಸ

ನವೆಂಬರ್ 6ರಿಂದ 8ರವರೆಗೆ ಹಿರಿಯ ಸಿಪಿಐ(ಎಂ) ಮುಖಂಡ ಜ್ಯೋತಿ ಬಸುರವರು ಕೈಗೊಂಡ ಉತ್ತರ ಪ್ರದೇಶದ ಚುನಾವಣಾ ಪ್ರವಾಸ ರಾಜ್ಯದಲ್ಲಿ ಬಿಜೆಪಿಯ ರಾಕ್ಷಸ ಆಡಳಿತ ಮತ್ತೆ ಬರದಂತೆ ಹೋರಾಡುತ್ತಿರುವ ಸಿಪಿಐ(ಎಂ) ಕಾರ್ಯಕರ್ತರಿಗೆ ಹಾಗೂ ಇತರ ಎಲ್ಲಾ ಎಡ, ಜಾತ್ಯಾತೀತ ಶಕ್ತಿಗಳಿಗೆ ಹೊಸ ಉತ್ಸಾಹ ತುಂಬಿದೆ.

ನವಂಬರ್ 6ರ ಬೆಳಿಗ್ಗೆ ವಾರಣಾಸಿ ತಲುಪಿದ ಜ್ಯೋತಿ ಬಸು, ಪೂರ್ವ ಯು.ಪಿ.ಯ ಮೂರು ಮಹತ್ವದ ಜಿಲ್ಲೆಗಳಲ್ಲಿ(ಆಝುಂಗಡ್, ಫೈಜಾಬಾದ್ ಹಾಗೂ ಸುಲ್ತಾನ್‌ಪುರ್) ಸಂಚರಿಸಿ ಮಧ್ಯ ಯುಪಿಯ ಕಾನಪುರ ನಗರದಲ್ಲಿ ಒಂದು ಬೃಹತ್ ರ್‍ಯಾಲಿಯೊಂದಿಗೆ ಪ್ರವಾಸವನ್ನು ಪೂರ್ಣಗೊಳಿಸಿದರು. ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಸಾಧಿಸುವಲ್ಲಿ ಸಮಸ್ಯೆ ಉಂಟಾದರೂ ಕೋಮುವಾದಿ ರಾಜಕೀಯವನ್ನು ಸಿಪಿಐ(ಎಂ) ಅಭ್ಯರ್ಥಿಗಳು ಸೋಲಿಸಲು ಸಾಧ್ಯ ಎಂಬ ನಿರೀಕ್ಷೆಯಿರುವ ಅಕ್ಬರ್‌ಪುರ್, ಇಸೌಲಿ, ಮೆಹ್‌ನಗರ್ ಹಾಗೂ ಸಿಸಮಾವು ಕ್ಷೇತ್ರಗಳಲ್ಲದೆ ಜನತಾದಳ ಅಭ್ಯರ್ಥಿಗಳ ಪರವಾಗಿಯೂ ಜ್ಯೋತಿ ಬಸು ಪ್ರಚಾರ ನಡೆಸಿದರು. ಜನತಾದಳ ಮುಖಂಡ ಚಂದ್ರಜಿತ್ ಯಾದವ್ ಈ ಪ್ರವಾಸದಾದ್ಯಂತ ಜ್ಯೋತಿ ಬಸುರವರ ಜೊತೆಗೇ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದರು.

ಎಲ್ಲಾ ಸಭೆಗಳಲ್ಲೂ ಜ್ಯೋತಿಬಸು ಬಿಜೆಪಿಯ ಕುತಂತ್ರಗಳನ್ನು ಬಯಲಿಗೆಳೆದರು. 1977ರಲ್ಲಿ ಉತ್ತಮ ರಾಜಕೀಯ ಪ್ರಜ್ಞೆಯನ್ನು ತೋರಿ ತುರ್ತು ಪರಿಸ್ಥಿತಿಯ ಕಾಂಗ್ರೆಯನ್ನು ಮಣ್ಣುಮುಕ್ಕಿಸಿದ ಉತ್ತರ ಪ್ರದೇಶದ ಮತದಾರರು ಈ ಬಾರಿ ಅದೇ ರೀತಿಯಲ್ಲಿ ಬಿಜೆಪಿಯನ್ನು ಪರಾಭವಗೊಳಿಸುತ್ತಾರೆ ಎಂದರು. ಎಡ-ಜಾತ್ಯಾತೀತ ಶಕ್ತಿಗಳ ನಡುವೆ ಮುಖ್ಯವಾಗಿ ಜನತಾದಳ ಹಾಗೂ ಸಮಾಜವಾದಿ ಪಕ್ಷಗಳ ನಡುವೆ ಹೊಂದಾಣಿಕೆಯಾಗದ್ದಕ್ಕೆ ಖೇದ ವ್ಯಕ್ತಪಡಿಸಿದ ಅವರು “ಆದರೆ ಈಗ ಇದಕ್ಕೆ ಯಾರು ಹೊಣೆ ಎಂದು ದೂರಿಕೊಳ್ಳುವುದರಲ್ಲಿ ಅರ್ಥವಿಲ್ಲ. ಈಗ ಲಕ್ನೌನಲ್ಲಿ ಈ ಶಕ್ತಿಗಳು ಒಟ್ಟುಗೂಡಿ ಬಿಜೆಪಿಯೇತರ, ಕಾಂಗ್ರೆಯೇತರ ಸರಕಾರವನ್ನು ರಚಿಸುವಂತೆ ಮಾಡುವುದು ಮುಖ್ಯ” ಎಂದರು.

ಮೆಹ್‌ನಗರದ ರ್‍ಯಾಲಿಯಲ್ಲಿ “ಬಿಜೆಪಿ ಗೆದ್ದರೆ ಭಾರತ ಸೋತಂತೆ” ಎಂದು ಎಚ್ಚರಿಸಿದರೆ ಕಳೆದ ಬಾರಿ ಶಿವಸೇನೆಯ ಅಭ್ಯರ್ಥಿಯನ್ನು ಆರಿಸಿದ ಅಕ್ಬರ್‌ಪುರ್‌ನಲ್ಲಿ “ಶಿವಸೇನೆಯನ್ನು ಸೋಲಿಸಲೇಬೇಕು. ಅದರರ್ಥ ಬಿಜೆಪಿಗೆ ಮತ ನೀಡಿ ಎಂದು ಖಂಡಿತಾ ಅಲ್ಲ. ಸತತವಾಗಿ ಜಾತ್ಯಾತೀತತೆಗಾಗಿ, ಜನಗಳ ಹಕ್ಕುಗಳಿಗಾಗಿ ಹೋರಾಡುತ್ತಾ ಬಂದಿರುವ ಎಡ ಅಭ್ಯರ್ಥಿಗೆ ಮತ ನೀಡಿ” ಎಂದರು. ಅಕ್ಬರ್‌ಪುರ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಸಾವಿರಾರು ಕೃಷಿ ಕೂಲಿಕಾರರು ತಮ್ಮ ಕೆಲಸಗಳನ್ನು ಬದಿಗಿಟ್ಟು ಸೈಕಲ್‌ಗಳಲ್ಲಿ, ಟೆಂಪೋಗಳಲ್ಲಿ, ಹಲವೆಡೆ ನಡೆದೇ ಬಂದು ಉತ್ಸಾಹದಿಂದ ಭಾಗವಹಿಸಿದ್ದರು.

“ಎಂತಹಾ ಮನುಷ್ಯ”

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯರಾದ ರಾಮ್ ಸುಮೇರ್ ಯಾದವ್ ಸ್ಪರ್ಧಿಸುತ್ತಿರುವ ಇಸೌಲಿಯಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಕ್ಷೇತ್ರದ ಮೂಲೆ ಮೂಲೆಗಳಿಂದ ಬಂದ ಹತ್ತು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿ ಜ್ಯೋತಿ ಬಸುರವರ ಮಾತುಗಳನ್ನು ಆಲಿಸಿದರು. “ಬಾಬ್ರಿ ಮಸೀದಿಯನ್ನು ಒಡೆಯಲು ಕಾಂಟ್ರಾಕ್ಟರುಗಳಿಗೆ ಒಂದು ತಿಂಗಳು ಬೇಕಿತ್ತು. ಕಾರ್ ಸೇವಕರು ಐದೇ ಗಂಟೆಗಳಲ್ಲಿ ಅದನ್ನು ಪೂರೈಸಿದರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತಹ ಈ ಮಾಜಿ ಮುಖ್ಯ ಮಂತ್ರಿ ಎಂತಹಾ ಮನುಷ್ಯ?” ಎಂದು ಗೇಲಿ ಮಾಡಿದಾಗ ಚಪ್ಪಾಳೆ ತಟ್ಟಿ ತಮ್ಮ ಅನುಮೋದನೆಯನ್ನು ಸೂಚಿಸಿದರು. ಪಶ್ಚಿಮ ಬಂಗಾಳ ಸರಕಾರದ ಸಾಧನೆಗಳ ಬಗ್ಗೆ ಹೇಳುವಾಗ ಕಿವಿಗೊಟ್ಟು ಆಲಿಸಿದರು - “ನಮ್ಮ ಮಂತ್ರಿಗಳು ಕಲ್ಕತ್ತೆಯಿಂದ ಸರಕಾರ ನಡೆಸುತ್ತಿಲ್ಲ. ಸಾಮೂಹಿಕ ಸಂಘಟನೆಗಳೊಡನೆ ಕಿಸಾನ್ ಸಭಾ, ಕಾರ್ಮಿಕ ಸಂಘಗಳು, ಯುವಜನ-ವಿದ್ಯಾರ್ಥಿ-ಮಹಿಳಾ ಸಂಘಟನೆಗಳೊಂದಿಗೆ ಪರಸ್ಪರ ಸಮಾಲೋಚನೆ ನಡೆಸಿ ಸರಕಾರ ನಡೆಸುತ್ತಾರೆ. ನಾವು ಸುಳ್ಳು ಆಶ್ವಾಸನೆ ನೀಡುವುದಿಲ್ಲ. ನಾವು ಏನು ಮಾಡಿದ್ದೇವೆ, ಏನು ಮಾಡಿಲ್ಲ, ಏಕೆ ಮಾಡಿಲ್ಲ ಎಂದು ಜನರಿಗೆ ಹೇಳುತ್ತೇವೆ” ಎಂದು ಜ್ಯೋತಿ ಬಸು ವಿವರಿಸಿದಾಗ ಮತ್ತೆ ಭಾರಿ ಕರತಾಡನ.

ಈ ರ್‍ಯಾಲಿಯ ವೇದಿಕೆಯಲ್ಲಿ ಒಂದು ವಿಶಿಷ್ಟ ದೃಶ್ಯ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳಿಗೆ ಹರ್ಷವುಂಟು ಮಾಡಿದ ಐಕ್ಯತೆಯ ದೃಶ್ಯ ಕಾಣಬರುತ್ತಿತ್ತು. ವೇದಿಕೆಯ ಮೇಲೆ ಜ್ಯೋತಿ ಬಸುರವರಲ್ಲದೆ ಜನತಾದಳದ ಹಾಗೂ ಮುಲಾಯಂ ಸಿಂಗ್‌ರ ಸಮಾಜವಾದೀ ಪಾರ್ಟಿಯ ಮುಖಂಡರೂ ಇದ್ದರು. ಎಲ್ಲರೂ ಸಿಪಿಐ ಅಭ್ಯರ್ಥಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು. ಈ ನಡುವೆಯೂ ಬೇಸರದ ಸಂಗತಿಯೆಂದರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಿತ್ರಸೇನ್ ಯಾದವ್‌ರ ಮಗ ಇಲ್ಲಿ ಸಿಪಿಐ ಅಭ್ಯರ್ಥಿಯಾಗಿ ನಿಂತಿರುವುದು. ಜ್ಯೋತಿ ಬಸು ಹಾಗೂ ಚಂದ್ರಜಿತ್ ಯಾದವ್‌ರವರು ಕೂಡಾ ತಮ್ಮ ಅಭ್ಯರ್ಥಿಯನ್ನು ಹಿಂತೆಗೆದುಕೊಂಡು ಈ ಐಕ್ಯತೆಯ ದೃಶ್ಯವನ್ನು ಪೂರ್ಣಗೊಳಿಸಬೇಕೆಂದು ಸಿಪಿಐಗೆ ಮತ್ತೆ ಮತ್ತೆ ಮನವಿ ಮಾಡಿದರು.

ಕಾನುಪುರದಲ್ಲಿ ನವಂಬರ್ 8ರಂದು ನಡೆದ ಬೃಹತ್ ರ್‍ಯಾಲಿಯಲ್ಲಿ ಕಾರ್ಮಿಕರು, ರಿಕ್ಷಾ ಎಳೆಯುವವರು, ಫುಟ್‌ಪಾತ್ ನಿವಾಸಿಗಳು, ನಗರದ ಇತರ ಬಡ ವಿಭಾಗಗಳ ಜನರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾನಪುರದ ಜನಪ್ರಿಯ ಸಿಪಿಐ(ಎಂ) ಮುಖಂಡರಾದ ಸ್ವಾತಂತ್ರ್ಯ ಹೋರಾಟಗಾರ್ತಿ ಡಾ. ಲಕ್ಷ್ಮಿ ಸಹಗಲ್ ಅಧ್ಯಕ್ಷತೆ ವಹಿಸಿದ್ದರು. “ನನ್ನ ಈ ಪ್ರವಾಸದಿಂದ ನನಗೆ ಅನ್ನಿಸಿದ್ದೆಂದರೆ ಈ ರಾಜ್ಯದಲ್ಲಿ ಬಿಜೆಪಿ ಸೋಲು ಖಂಡಿತ. ಆದ್ದರಿಂದ ಎಲ್ಲಾ ಜಾತ್ಯಾತೀತ ಶಕ್ತಿಗಳು ಚುನಾವಣೆ ನಂತರ ಲಕ್ನೌನಲ್ಲಿ ಸರಕಾರ ರಚಿಸಲು ಒಂದಾಗಿ ಬರಬೇಕು” ಎಂದು ಜ್ಯೋತಿ ಬಸು ತಮ್ಮ ಪ್ರವಾಸ ಅನುಭವದ ಸಾರಾಂಶವನ್ನು ಕಾನ್‌ಪುರ ನಿವಾಸಿಗಳ ಮುಂದಿಟ್ಟರು.

ಬಾಂಗ್ಲಾದೇಶ ಕೃಷಿ ಕಾರ್ಮಿಕರ ಸಮ್ಮೇಳನ

ಬಾಂಗ್ಲಾ ದೇಶ ಕೃಷಿ ಫಾರ್ಮ್ ಕೂಲಿಗಾರರ ಒಕ್ಕೂಟದ ನಾಲ್ಕನೇ ರಾಷ್ಟ್ರೀಯ ಸಮ್ಮೇಳನ ಢಾಕಾದಲ್ಲಿ ಅಕ್ಟೋಬರ್ 27ರಂದು ನಡೆಯಿತು. 1952ರಲ್ಲಿ ಬಂಗಾಲಿ ಭಾಷೆಗೆ ಪಾಕಿಸ್ತಾನದ ಒಂದು ರಾಷ್ಟ್ರ ಭಾಷೆಯಾಗಿ ಮಾನ್ಯತೆ ನೀಡಬೇಕೆಂದು ಹೋರಾಟದಲ್ಲಿ ಪಾಕಿಸ್ತಾನೀ ಪೋಲೀಸರು ಹಲವಾರು ವಿದ್ಯಾರ್ಥಿಗಳನ್ನು ಗೋಳಿಬಾರಿನಲ್ಲಿ ಕೊಂದ ಸ್ಮಾರಕವಾಗಿ ಕಟ್ಟಿದ ಶಹೀದ್ ಮಿನಾರ್‌ನ ಬಳಿ ನಡೆಯಿತು. ಈ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದವರಲ್ಲಿ ರಾಷ್ಟ್ರೀಯ ರೈತ ಸಂಘದ ಅಧ್ಯಕ್ಷ ಹಾಗೂ ಬಾಂಗ್ಲಾ ದೇಶ ಕಾರ್ಮಿಕ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಅಬ್ದುಲ್ ಮಟಿನ್‌ರವರು ಪ್ರಮುಖರು. ಇವರು ಮಹಮ್ಮದ್ ಅಲಿ ಜಿನ್ನಾ ಕೇವಲ ಉರ್ದು ಮಾತ್ರ ರಾಷ್ಟ್ರ ಭಾಷೆಯಾಗಬಲ್ಲುದು ಎಂದು ಹೇಳಿದಾಗ ಅದರ ವಿರುದ್ಧ ಢಾಕಾದಲ್ಲಿ ಮೊದಲು ದನಿಯೆತ್ತಿದ್ದವರು ಇವರೇ.

ಝ್ಯುತುಲ್ ಅದೆದಿನ್ ಅಧ್ಯಕ್ಷತೆ ವಹಿಸಿದ್ದ ಸಮ್ಮೇಳನವನ್ನು ಬಾಂಗ್ಲಾದೇಶ ಕಾರ್ಮಿಕ ಪಕ್ಷದ ಪ್ರಧಾನ ಕಾರ್ಯದರ್ಶಿ ರಶೀದ್ ಖಾನ್ ಮೆನನ್ ಉದ್ಘಾಟಿಸಿದರು. ಐದು ರೂ ದಿನಗೂಲಿ ಪಡೆಯುತ್ತಿದ್ದ ಕೃಷಿ ಕೂಲಿಗಾರ ಸಂಘಟಿತಗೊಂಡಿದ್ದರಿಂದ ಇಪ್ಪತ್ತೈದು ರೂ ಕೂಲಿ ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾನೆ. ಆದರೆ ಕೃಷಿ ಕೂಲಿಗಾರರ ಶೋಷಣೆ, ದಮನ ನಡೆಸುತ್ತಿದ್ದವರೂ ಸುಮ್ಮನೆ ಕೂತಿಲ್ಲ. ಅವರು ಕೃಷಿ ಕೂಲಿಗಾರರನ್ನು ಒಡೆಯಲು ಅವರ ಮೇಲೆ ಮಾತ್ರ ತಮ್ಮ ಹತೋಟಿ ಪಡೆಯಲು ಕೋಮುವಾದವನ್ನು ಹರಡುತ್ತಿದ್ದಾರೆ, ಏಕೆಂದರೆ ಐಎಂಎಫ್ ಹಾಕಿರುವ ಹೊಸ ಶರತ್ತುಗಳು ಅತೀ ಬಡ ವಿಭಾಗಗಳ ಮೇಲೆಯೇ ಹೆಚ್ಚಿನ ದುಷ್ಟ ಪರಿಣಾಮ ಬೀರುತ್ತವೆ ಎಂದರು.

ಈ ಸಭೆಯಲ್ಲಿ ಭಾರತದಿಂದ ಒಂದು ದೊಡ್ಡ ತಂಡ ಭಾಗವಹಿಸಿತು. ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ(ಎಐಎಡಬ್ಲ್ಯುಯು) ಜಂಟಿ ಕಾರ್ಯದರ್ಶಿಗಳಾದ ಸಂಸತ್ ಸದಸ್ಯ ಹನ್ನನ್ ಮೊಲ್ಲಾ ಹಾಗೂ ಸುನೀತ್ ಚೋಪ್ರಾ, ಸಿಐಟಿಯುವಿನ ಮಿಹಿರ್ ಗಂಗೂಲಿ ಮತ್ತಿತರರು ಈ ತಂಡದಲ್ಲಿದ್ದರು. ಎಐಎಡಬ್ಲ್ಯುಯುನ ಪರವಾಗಿ ಮಾತನಾಡುತ್ತಾ ಹನ್ನನ್ ಮೊಲ್ಲಾ ನಮ್ಮ ಮುಖಂಡರಲ್ಲಿ ಮತ್ತೆ ಸಾಮ್ರಾಜ್ಯಶಾಹಿ ಒತ್ತಡವನ್ನು ಹೇರುವುದರ ವಿರುದ್ಧ, ಕೋಮುವಾದದ ವಿರುದ್ಧ ಹೋರಾಡಬೇಕೆಂಬ ಸ್ಫೂರ್ತಿಯುತ ಕರೆ ನೀಡಿದರು. ಭಾರತ ಮತ್ತು ಬಾಂಗ್ಲಾ ದೇಶ ಎರಡೂ ರಬೀಂದ್ರನಾಥ್ ಟಾಗೋರ್‌ರ ಹಾಡುಗಳನ್ನು ರಾಷ್ಟ್ರಗೀತೆಯಾಗಿ ಆರಿಸಿಕೊಂಡಿವೆ. ಆದ್ದರಿಂದ ಸಮಾನ ಶತ್ರು ಎದುರು ನಿಂತಿರುವಾಗ ಹೆಚ್ಚಿನ ಐಕ್ಯತೆ ಮೂಡಿ ಬರುವುದು ಕಷ್ಟವೇನಲ್ಲ ಎಂದು ಅವರು ಹೇಳಿದರು.

ಸಿಐಟಿಯುವಿನ ಪರವಾಗಿ ಮಾತನಾಡಿದ ಮಿಹಿರ್ ಗಂಗೂಲಿ ಪಶ್ಚಿಮ ಬಂಗಾಳದಲ್ಲಿ ಎಡರಂಗವಾಗಿ ರೂಪುಗೊಂಡ ಆಂದೋಲನವನ್ನು ಭೂ ಹೋರಾಟದ ಪಾತ್ರವನ್ನು ಒತ್ತಿ ಹೇಳುತ್ತಾ ಸಿಐಟಿಯು ಕಾರ್ಮಿಕ-ರೈತರ ಐಕ್ಯತೆಯನ್ನು ಬೆಸೆಯುತ್ತಿದೆ ಎಂದರು.

ಉದ್ಘಾಟನಾ ಅಧಿವೇಶನದ ನಂತರ ಸುಮಾರು 5000 ಜನರಿದ್ದ ಮೆರವಣಿಗೆ ಸಂಘದ ಪ್ರಧಾನ ಕಾರ್ಯದರ್ಶಿ ನೂರುಲ್ ಅನ್ವರ್ ನೇತೃತ್ವದಲ್ಲಿ ಢಾಕಾದ ಬೀದಿಗಳಲ್ಲಿ ಕೋಮು ಸೌಹಾರ್ದದ, ಕಾರ್ಮಿಕ ವರ್ಗದ ಹೋರಾಟದ ಘೋಷಣೆ ಹಾಕುತ್ತಾ ಸಾಗಿತು.

(ಐ.ಎನ್.ಎಸ್.)

ಎಡ ಆಂದೋಲನಕ್ಕೆ ಹೊಸ ಶಕ್ತಿ ....

ಪುಟ 1ರಿಂದ

ಕೇಂದ್ರೀಕರಣಗೊಂಡಿರುವುದು ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ ಫಲಿತಾಂಶಗಳ ಮೇಲೆ. ಉತ್ತರ ಪ್ರದೇಶ - ಏಕೆಂದರೆ ಬಿಜೆಪಿಯ ದುಷ್ಟ ಚಟುವಟಿಕೆಗಳ ಕೇಂದ್ರ ಅದು. ಅದರ ದುಷ್ಟ ಚಟುವಟಿಕೆಗಳಿಗೆ ತನ್ನ ರಾಜಿ ನಿಲುವುಗಳಿಂದ ಆಸ್ಪದ ನೀಡಿದ ಅಪಕೀರ್ತಿ ಕಾಂಗ್ರೆಸ್(ಐ)ನದ್ದು. ಇದರಿಂದಾಗಿ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಟಗಳ ಮುಖ್ಯ ಕೇಂದ್ರಗಳಲ್ಲಿ ಒಂದಾಗಿದ್ದ ಉತ್ತರಪ್ರದೇಶ ಇಂದು ಕೋಮು ವಿಭಜನೆಯ ರಂಗವಾಯಿತು. ಉತ್ತರ ಭಾರತದ ಇತರ ರಾಜ್ಯಗಳ ಮೇಲೂ ದುಷ್ಪರಿಣಾಮ ಬೀರಿತು.

ಆ ರಾಜ್ಯಕ್ಕೆ ಹೊಂದಿಕೊಂಡಂತಿರುವ ಮಧ್ಯಪ್ರದೇಶದ ಬಹುಪಾಲು ಹಿಂದೆ ರಾಜ- ಮಹಾರಾಜರುಗಳ ಆಳ್ವಿಕೆಯಲ್ಲಿದ್ದ ಪ್ರದೇಶಗಳು. ಕೆಲವು ಮಾತ್ರ ಬ್ರಿಟಿಷರ ಆಳ್ವಿಕೆಯಲ್ಲಿದ್ದ ‘ಕೇಂದ್ರ ಪ್ರಾಂತ್ಯ’ದಲ್ಲಿದ್ದವುಗಳು. ಈ ರಾಜ-ಮಹಾರಾಜರುಗಳೂ ಬಹುಮಂದಿ ಹಿಂದೂ ಕುಟುಂಬಗಳಿಂದ ಬಂದವರು. ಬಿಜೆಪಿಯ ಪೂರ್ವಿಕರ ಬೆಂಬಲ ಪಡೆದಿದ್ದವರು. ಹಿಂದಿನ ಜನಸಂಘ ಹಾಗೂ ನಂತರ ಬಿಜೆಪಿ ಈ ಪ್ರದೇಶಗಳ ಜನರ ಹಿಂದುಳಿಕೆಯ ಪೂರ್ಣ ಪ್ರಯೋಜನ ಪಡೆದು ಈ ರಾಜ್ಯವನ್ನು ತಮ್ಮ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡರು. ಉತ್ತರ ಪ್ರದೇಶದ ಗಡಿಗೆ ಹೊಂದಿಕೊಂಡಿರುವುದರಿಂದ ಇಲ್ಲಿಯ ಬಿಜೆಪಿ ಚಟುವಟಿಕೆಗಳು ಆ ಇಡೀ ಪ್ರದೇಶದ ಮೇಲೆ ಸಾಕಷ್ಟು ಪ್ರಭಾವ ಬೀರಿಲ್ಲ. ವಾಸ್ತವವಾಗಿ ಮಸೀದಿ ಧ್ವಂಸ ಮಾಡಿದ ಕರಸೇವಕರಿಗೆ ತರಬೇತಿ ನೀಡಿದ್ದು ಇಲ್ಲಿಯೇ. ಮಧ್ಯಪ್ರದೇಶದ ಬಿಜೆಪಿ ಸರಕಾರ ಅದಕ್ಕೆ ಸಕಲ ನೆರವು ನೀಡಿತು.

ಆದ್ದರಿಂದಲೇ ಈ ಎರಡು ರಾಜ್ಯಗಳ ಫಲಿತಾಂಶಗಳು ಮಹತ್ವದ್ದಾಗಿವೆ. ಅವು ದೇಶದ ಭವಿಷ್ಯದ ಮಾರ್ಗವನ್ನು ನಿರ್ಧರಿಸಲಿವೆ. ದೇಶ ಸದ್ಯ ಆರ್ಥಿಕ, ರಾಜಕೀಯ ಸಾಮಾಜಿಕ ರಂಗಗಳಲ್ಲಿನ ಸಂಕಷ್ಟಗಳನ್ನು ಎದುರಿಸಿ ನಿಲ್ಲುತ್ತದೋ ಅಥವಾ ರಾಷ್ಟ್ರೀಯ ಐಕ್ಯತೆಯೇ ಛಿದ್ರಗೊಂಡು ದೇಶ [illegible] ಐಎಂಎಫ್-ವಿಶ್ವ ಬ್ಯಾಂಕ್ ಆದೇಶಗಳಿಂ[illegible] ...ವಾಗಿ ಗುಲಾಮಿಕೆ ಅನುಭವಿಸಬೇಕೋ ಎಂಬುದನ್ನು ನಿರ್ಧರಿಸಲಿವೆ.

ಉತ್ತರಪ್ರದೇಶ- ಬಿಜೆಪಿಗೆ ಮುಖಭಂಗ ಖಂಡಿತ

ಉತ್ತರಪ್ರದೇಶದಲ್ಲಿ ಕಾಂಗ್ರೆಸ್(ಐ) ಕೋಮುವಾದಿಗಳೊಂದಿಗೆ ರಾಜಿ ನಿಲುವಿನಿಂದಾಗಿ ಹೀನ ಸ್ಥಿತಿಯಲ್ಲಿದೆ. ನಾಲ್ಕನೇ ಸ್ಥಾನದಲ್ಲಿದೆ. ನಾವು ಸಮಾಜವಾದಿ ಪಾರ್ಟಿ ಮತ್ತು ಎಡಪಕ್ಷಗಳನ್ನು ಒಂದೇ ವೇದಿಕೆಯ ಮೇಲೆ ತರಲು ಸರ್ವ ಪ್ರಯತ್ನ ನಡೆಸಿದೆವು. ಹೀಗಾಗಿದ್ದರೆ ಬಿಜೆಪಿಯನ್ನು ಪೂರ್ಣವಾಗಿ ಮಣ್ಣು ಮುಕ್ಕಿಸಿ ಎಷ್ಟೇ ಬೆಲೆ ತೆತ್ತಾದರೂ ದೇಶದ ಐಕ್ಯತೆಯನ್ನು ರಕ್ಷಿಸಲಾಗುವುದು ಎಂಬ ಸಂದೇಶ ಇಡೀ ದೇಶಕ್ಕೆ ಬಿತ್ತರವಾಗುತ್ತಿತ್ತು. ಆದರೆ ನಮ್ಮ ಪ್ರಯತ್ನ ಸಫಲವಾಗಲಿಲ್ಲ. ಆದರೂ ನಾವು ಪ್ರಯತ್ನ ನಿಲ್ಲಿಸಿಲ್ಲ. ಕಾಂಗ್ರೆ ಕೂಡಾ ನಮ್ಮ ಪ್ರಯತ್ನ ಸಫಲವಾಗದಂತೆ ಎಲ್ಲಾ ಪ್ರಯತ್ನ ನಡೆಸಿತು. ಅದರ ಮುಖ್ಯ ಉದ್ದೇಶ ಬಿಜೆಪಿಯನ್ನು ಸೋಲಿಸುವುದಲ್ಲ, ಎಡ-ಜಾತ್ಯಾತೀತ ಶಕ್ತಿಗಳು ಕೇಂದ್ರೀಕರಣಗೊಳ್ಳದಂತೆ ನೋಡಿಕೊಳ್ಳುವುದೇ ಅದರ ಪರಮ ಗುರಿ ಎಂದು ಇದರಿಂದ ಸ್ಪಷ್ಟವಾಗುತ್ತದೆ. ಆದರೂ ಜನಗಳ ಒತ್ತಡ ಈ ಸನ್ನಿವೇಶವನ್ನು ಮುಂದಿನ ದಿನಗಳಲ್ಲಿ ಖಂಡಿತಾ ಬದಲಿಸಲಿದೆ.

ಬಿಜೆಪಿಗಂತೂ ದೊಡ್ಡ ಭ್ರಮನಿರಸನ ಕಾದಿದೆ. ರಾಮ ದೇವಸ್ಥಾನದ ತಂತ್ರ ಫಲಿಸಿಲ್ಲ. ಉತ್ತರ ಪ್ರದೇಶದಲ್ಲಿ ಅದು ಗೆಲ್ಲುವುದಿಲ್ಲ, ಅದರ ಶಕ್ತಿ ಗಮನಾರ್ಹವಾಗಿ ಕಮ್ಮಿಯಾಗಲಿದೆ ಎಂದು ಯಾರಾದರೂ ಖಂಡಿತವಾಗಿ ಹೇಳಬಹುದು.

ಜನತಾದಳ, ಸಮಾಜವಾದಿ ಪಕ್ಷ, ಬಿಎಸ್‌ಪಿ, ಸಿಪಿಐ ಹಾಗೂ ಸಿಪಿಐ(ಎಂ)ಗೆ ಭಾರೀ ಜನ ಸ್ಪಂದನ ದೊರೆಯುತ್ತಿದೆ. ಬಹುಪಾಲು ಅಲ್ಪಸಂಖ್ಯಾತರನ್ನು, ಹರಿಜನ- ಗಿರಿಜನರನ್ನು, ಹಿಂದುಳಿದ ವಿಭಾಗಗಳ ಜನರನ್ನು ಹಾಗೂ ಎಲ್ಲಾ ದೇಶಪ್ರೇಮಿ ಶಕ್ತಿಗಳನ್ನು ಕೋಮುವಾದದ ವಿರುದ್ಧ ಹಾಗೂ ಜನಗಳ ಹಿತಾಸಕ್ತಿಗಳ ರಕ್ಷಣೆಯ ಹೋರಾಟದಲ್ಲಿ ಅಣಿನೆರೆಸಲು ಈ ಶಕ್ತಿಗಳಿಗೆ ಸಾಧ್ಯವಾಗಿದೆ. ಆದ್ದರಿಂದ ಉತ್ತರ ಪ್ರದೇಶದ ಚುನಾವಣೆಗಳಲ್ಲಿ ಈ ಶಕ್ತಿಗಳ ವಿಜಯ ಭಾರತದ ರಾಜಕೀಯ ಚಿತ್ರದ ಮೇಲೆ ಭಾರೀ ಪ್ರಭಾವ ಬೀರಲಿದೆ.

ಹೋರಾಟ ಮುಂದುವರಿಯಬೇಕು

ಮಧ್ಯ ಪ್ರದೇಶದ ಸನ್ನಿವೇಶ ತುಸು ಭಿನ್ನವಾಗಿದೆ. ಎಡ ಜಾತ್ಯಾತೀತ ಶಕ್ತಿಗಳು ಹಿಮಾಚಲ ಪ್ರದೇಶ, ರಾಜಸ್ಥಾನಗಳಲ್ಲಿರುವಂತೆ ದುರ್ಬಲವಾಗಿವೆ. ಅಲ್ಪಸಂಖ್ಯಾತರ ಪ್ರಮಾಣ ಕೇವಲ ಶೇ. 4. ಆದರೆ ಬಹುಮಂದಿ ಹರಿಜನರು, ಆದಿವಾಸಿಗಳು, ಹಿಂದುಳಿದ ವರ್ಗಗಳವರು, ಈ ಜನಗಳಿಗೆ ಬಿಜೆಪಿ ಆಳ್ವಿಕೆ ಏನೂ ಮಾಡಿಲ್ಲವಷ್ಟೇ ಅಲ್ಲ. ಅವರ ಹಿತಾಸಕ್ತಿಗಳಿಗೆ ಮಾರಕವಾಗುವ ಆಡಳಿತ ನಡೆಸಿತು. ಇದರರ್ಥ ಕಾಂಗ್ರೆಸ್(ಐ) ತನ್ನ ಜನ ಬೆಂಬಲ ಹೆಚ್ಚಿಸಿಕೊಳ್ಳಬಲ್ಲುದು ಎಂದಲ್ಲ. ಬ್ರಿಟಿಷರ ವಿಶ್ವಾಸಾರ್ಹ ಏಜೆಂಟರುಗಳೆಂದು ಪರಿಗಣಿಸಲ್ಪಟ್ಟಿದ್ದ ರಾಜ- ಮಹಾರಾಜರುಗಳ ವಿರುದ್ಧ ಹೋರಾಡಿದ ಜನ ಬಿಜೆಪಿ ಬಯಸುವ ಕೋಮುವಿಭಜನೆಯನ್ನು ಒಪ್ಪಿಕೊಳ್ಳುವುದಿಲ್ಲ. ಅದೇ ರೀತಿ ತಮ್ಮ ಮೇಲೆ ಒಂದಾದ ಮೇಲೊಂದರಂತೆ ಸಂಕಷ್ಟಗಳನ್ನು ಹೇರುತ್ತಿರುವ ಕಾಂಗ್ರೆ ನೀತಿಗಳನ್ನೂ ತಿರಸ್ಕರಿಸುತ್ತಾರೆ. ಎಡ-ಪ್ರಜಾಪ್ರಭುತ್ವ ಶಕ್ತಿಗಳು ನಿರಂತರ ಜನವರ ಹೋರಾಟಗಳ ಮೂಲಕ ಈ ಜನವಿಭಾಗಗಳನ್ನು ಗೆದ್ದುಕೊಳ್ಳಬೇಕಾಗಿದೆ. ಈ ನಿರ್ಣಾಯಕ ಘಟ್ಟದಲ್ಲಿ ಬಿಜೆಪಿಯ ಸೋಲು ಒಂದು ದೊಡ್ಡ ಆಸ್ತಿ. ಆದರೆ ಹೋರಾಟ ಮುಂದುವರಿಯಬೇಕು.

ಈ ರಾಜ್ಯಗಳ ಚುನಾವಣಾ ಫಲಿತಾಂಶಗಳು ನಮ್ಮ ಪಕ್ಷ ಅನುಸರಿಸುತ್ತಿರುವ ರಾಜಕೀಯ ಮಾರ್ಗವನ್ನು ಸಮರ್ಥಿಸಲಿವೆ ಎಂಬುದನ್ನಾದರೂ ನಾವು ಖಂಡಿತವಾಗಿ ಹೇಳಬಹುದು. ಸಿಪಿಐ(ಎಂ) ಎಲ್ಲೆಲ್ಲಿ ಕಣದಲ್ಲಿದೆಯೋ ಅಲ್ಲೆಲ್ಲಾ ಅದಕ್ಕೆ ದೊರೆಯುತ್ತಿರುವ ಬೆಂಬಲ ಜನ ನಮ್ಮಿಂದ ಬಹಳ ನಿರೀಕ್ಷಿಸುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಅವರ ಈ ನಿರೀಕ್ಷೆಗಳನ್ನು ಹುಸಿಗೊಳಿಸದೆ ಹೋರಾಟವನ್ನು ಮುಂದುವರಿಸಬೇಕಾಗಿದೆ. ಈ ವಿಶಾಲ ಹಿಂದೀ ಭಾಷಿಕ ಪ್ರದೇಶದಲ್ಲಿ ನಮ್ಮ ನೆಲೆಯನ್ನು ವಿಸ್ತಾರಗೊಳಿಸಿ ದೇಶದ ರಾಜಕೀಯ ಭವಿಷ್ಯವನ್ನು ರೂಪಿಸುವಲ್ಲಿ ನಾವು ಹೆಚ್ಚೆಚ್ಚು ಮಧ್ಯಪ್ರವೇಶಿಸುವಂತಾಗಬೇಕಾಗಿದೆ.

ಇತಿಹಾಸದ ಪುಟಗಳಿಂದ

ಪುಟ 2ರಿಂದ

ಕೊಮ್‌ಷಿಯವರು ಪ್ರಧಾನ ಕಾರ್ಯದರ್ಶಿ ಮತ್ತು ಅಧ್ಯಕ್ಷರನ್ನು ಬಿಟ್ಟರೆ ಪಕ್ಷ, ಸಂಘಟನೆ ಮತ್ತು ಆಡಳಿತ ರಂಗದಲ್ಲಿನ ಉನ್ನತದ ಸಂಗಾತಿಯಾಗಿದ್ದಾರೆ.

1964ರಲ್ಲಿ ಸಂಬಂಧ ಕಡಿತದುದಕ್ಕೆ ಪಕ್ಷದ ಸಂಗಾತಿಗಳಿಗೆ ದುಃಖವಾಗಿದೆಯೆಂದು ಹೂ ಜೊತೆಗಿನ ಭೇಟಿಯ ಸಂದರ್ಭದಲ್ಲಿ ತಿಳಿಸಿದರು. ಚೀನಾದಲ್ಲಿ ಯಾವುದೇ ರೀತಿಯ ಬೂರ್ಜ್ವಾ ಸಂಸದೀಯ ವ್ಯವಸ್ಥೆಯಿರಲಿಲ್ಲ. ಬೂರ್ಜ್ವಾ ಸಂಸದೀಯ ವ್ಯವಸ್ಥೆಯಲ್ಲಿನ ನಿಮ್ಮ ವಿಶ್ವಾಸವು ಪ್ರತಿಗಾಮಿ ಧೋರಣೆಯಿಂದಿರಬಹುದೆಂದು ನಾವು ಭಾವಿಸಿದ್ದೆವು ಎಂದು ಹೂ ಹೇಳಿದರು. ನಿಜವಾಗಿಯೂ ಬೂರ್ಜ್ವಾ ಸಂಸದೀಯ ಸಂಸ್ಥೆಗಳನ್ನು ಕ್ರಾಂತಿಕಾರಿ ರೂಪದಲ್ಲಿ ಬಳಸುತ್ತಿರುವಿರೆಂದು ನಮಗಿಂದು ಅರಿವಾಗಿದೆ- ಅದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ ಎಂದರು. ಈ ಆಧಾರದಲ್ಲಿ ಪಕ್ಷದ ಜೊತೆಗಿನ ಸಂಬಂಧ ಪುನರ್ ಸ್ಥಾಪನೆಯಾಗಿದೆಯೆಂದು ಹೇಳಿಕೆ ನೀಡಿದರು.

ಇಷ್ಟೆಲ್ಲಾ ಆದ ನಂತರ ನಾವು ಡೆಂಗ್ ಅವರನ್ನು ಕಂಡೆವು. ಅವರ ಜೊತೆಗಿನ ಭೇಟಿಯು ಒಂದು ಹೊಸ ಅನುಭವವಾಗಿತ್ತು. ಚೀನೀ ಪಕ್ಷದ ಚರಿತ್ರೆಯಲ್ಲಿ ಪ್ರಾರಂಭದಿಂದಲೂ ಸಕ್ರಿಯವಾಗಿ ಭಾಗವಹಿಸಿ ಸ್ವಂತವಾದ ವೈಯುಕ್ತಿಕ ಛಾಯೆಯನ್ನು ಪ್ರದರ್ಶಿಸಿದ ಡೆಂಗ್, ವಿಶೇಷವಾಗಿ ಚೀನೀ ಕ್ರಾಂತಿಯ ಸಂದರ್ಭದಲ್ಲಿ, ಮಾವೋ ನಿಧನಾನಂತರ ಮತ್ತು ವಿಶ್ವ ಕಮ್ಯುನಿಸ್ಟ್ ಚಳುವಳಿಯ ಮುನ್ನಡೆಗೆ ವಿಶೇಷವಾಗಿ ಶ್ರಮಿಸಿದರು. ಸೋವಿಯತ್ ಯೂನಿಯನ್‌ನ ಸ್ಟಾಲಿನ್, ಕ್ರುಶ್ಚೇವ್, ಗೋರ್ಬಚೇವ್ ನಾಯಕತ್ವ ಮತ್ತು ಚೀನಾದ ಮಾವೋ ನಾಯಕತ್ವದಿಂದಾಗಿ ವಿಶ್ವ ಕಮ್ಯುನಿಸ್ಟ್ ಚಳುವಳಿಯಲ್ಲಿ ಬೆಳೆದು ಬಂದ ಹಿನ್ನೆಲೆಯಲ್ಲಿ ಡೆಂಗ್ ನಿರ್ವಹಿಸಿದ ಪಾತ್ರ ನಿರ್ಣಾಯಕವಾಗಿದೆ. ಅವರನ್ನು ದೂರದಿಂದ ನೋಡಿ, ನಂತರ ವಿಮರ್ಶಾತ್ಮಕವಾಗಿ ಅವರನ್ನು ಪರಿಶೀಲಿಸಿ ಮತ್ತು ಅವರ ಜೊತೆ ಅಭಿಪ್ರಾಯ ವಿನಿಮಯ ನಡೆಸಿದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ಸಂಗ್ರಹ-ಅನುವಾದ
ಇ.ಕೆ.ಎನ್. ರಾಜನ್
ಪ್ರಕಾಶ್.ಕೆ

[illegible] ಪರವಾಗಿ ಮುದ್ರಣ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ: 12, 18ನೇ ಅಡ್ಡರಸ್ತೆ, ಕಾಸಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027 [illegible]